ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಫೆಬ್ರವರಿ 1 ಭಾನುವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

46

ಸಂಪುಟ: 46 | ಸಂಚಿಕೆ: 283 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4




ಜೆ.ಡಿ.ಎಸ್ ಶಾಸಕಾಂಗ ಪಕ್ಷದ ಮುಖ್ಯ ಸಚೇತಕರು ಹಾಗೂ ಹುಣಸೂರು ವಿಧಾನಸಭಾ ಕ್ಷೇತ್ರದ ಮಾನ್ಯ ಶಾಸಕರಾದ
ಶ್ರೀ ಜಿ.ಡಿ ಹರೀಶ್ ಗೌಡ ರವರಿಗೆ
ಜನ್ಮ ದಿನದ ಶುಭಾಶಯಗಳು
VISMAYA
8050302424
ದಿನಾಂಕ 01.02.2026 ರ ಭಾನುವಾರ ಸಂಜೆ 6 ಗಂಟೆಗೆ ದೇವೇಗೌಡ ಸರ್ಕಲ್ ಎಂಪ್ರೋ ಹೋಟೆಲ್, ಮೈಸೂರು ಇಲ್ಲಿ
ಜಿ.ಡಿ. ಹರೀಶ್‌ಗೌಡರ ಅಭಿಮಾನಿ ಬಳಗದ ವತಿಯಿಂದ ಹುಟ್ಟುಹಬ್ಬದ ಆಚರಣೆಯನ್ನು ಹಮ್ಮಿಕೊಳ್ಳಲಾಗಿದ್ದು, ಸರ್ವರಿಗೂ ಸುಸ್ವಾಗತ.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 1 ಭಾನುವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 283 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮರಳು ದಂಧೆ ಸಿಬಿಐ ಇಲ್ಲವೇ ಎಸ್‌ಐಟಿ ತನಿಖೆ

● ಸರ್ಕಾರಕ್ಕೆ ಹೈಕೋರ್ಟ್ ನೋಟಿಸ್ ● ಗೃಹ ಸಚಿವ ಡಾ. ಪರಮೇಶ್ವರ್ ಅಸಹಾಯಕತೆ ಗಂಭೀರ ಪರಿಗಣನೆ





ಬೆಂಗಳೂರು: ಎಲ್ಲ ರಾಜಕೀಯ ಪಕ್ಷಗಳ ಪ್ರಭಾವಿ ವ್ಯಕ್ತಿಗಳು ಅಕ್ರಮ ಮರಳು ಗಣಿಗಾರಿಕೆಯಲ್ಲಿ ಭಾಗಿಯಾಗಿದ್ದಾರೆ ಎಂದು ಗೃಹ ಸಚಿವ ಪರಮೇಶ್ವರ ಸದನದಲ್ಲಿ ನೀಡಿದ್ದ ಹೇಳಿಕೆಯ ಮಾಧ್ಯಮ ವರದಿಗಳನ್ನು ಗಂಭೀರವಾಗಿ ಪರಿಗಣಿಸಿರುವ ಹೈಕೋರ್ಟ್, ತನ್ನ ನಿಗಾದಲ್ಲಿ ಸಿಬಿಐ ಅಥವಾ ಎಸ್‌ಐಟಿ ತನಿಖೆ ನಡೆಸುವ ಅಗತ್ಯವಿದೆ ಎಂದು ಅಭಿಪ್ರಾಯಪಟ್ಟಿದೆ.

ಪರಮೇಶ್ವರ ಅವರ ಹೇಳಿಕೆಯ ಮುದ್ರಣ ಮತ್ತು ವಿದ್ಯುನ್ಮಾನ ಮಾಧ್ಯಮಗಳ ವರದಿ ಆಧರಿಸಿ, ಹಿರಿಯ ನ್ಯಾಯಮೂರ್ತಿ ಡಿ.ಕೆ.ಸಿಂಗ್ ಹಾಗೂ ತಾರಾ ವಿತಸ್ತಾ ಗಂಜು ಅವರಿದ್ದ ವಿಭಾಗೀಯ ನ್ಯಾಯಪೀಠ ಸ್ವಯಂಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿ ದಾಖಲಿಸಿಕೊಂಡಿದೆ.

ರಾಜ್ಯದ ಗೃಹ, ಗಣಿ ಮತ್ತು ಅರಣ್ಯ ಇಲಾಖೆಗಳ ಕಾರ್ಯದರ್ಶಿಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿರುವ ನ್ಯಾಯಪೀಠ, ನೋಟಿಸ್‌ಗೆ ಮೂರು ವಾರಗಳಲ್ಲಿ ಆಕ್ಷೇಪಣೆ ಸಲ್ಲಿಸಬೇಕು ಎಂದು ನಿರ್ದೇಶಿಸಿದೆ. ಅರ್ಜಿಯನ್ನು ಸೂಕ್ತ ನ್ಯಾಯಪೀಠದ ಮುಂದೆ ನಿಯೋಜನೆ ಮಾಡಲು ಮುಖ್ಯ ನ್ಯಾಯಮೂರ್ತಿಗಳ ಪೀಠಕ್ಕೆ ವರ್ಗಾವಣೆ ಮಾಡಿ ಆದೇಶಿಸಲಾಗಿದೆ.

ಗೃಹ ಸಚಿವರ ಹೇಳಿಕೆ: ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆ ದೊಡ್ಡ ದಂಧೆಯಾಗಿದೆ. ಪ್ರಕರಣ ಸಂಬಂಧ ಯಾರ ಹೆಸರನ್ನು ಪ್ರಸ್ತಾಪಿಸುತ್ತಿಲ್ಲ. ಯಾರನ್ನೂ ದೂಷಣೆ ಮಾಡುತ್ತಿಲ್ಲ. ಏಕೆಂದರೆ ಇದು ಅತ್ಯಂತ ಮುಜುಗರದ ಸಂಗತಿಯಾಗಿದೆ. ಈ ಸಂಬಂಧ ಸೀಮಿತವಾಗಿ ಉತ್ತರವನ್ನು ನೀಡುತ್ತಿದ್ದು, ಅನೇಕ ಪ್ರಭಾವಿಗಳು ಈ ದಂಧೆಯಲ್ಲಿ ಭಾಗಿಯಾಗಿದ್ದಾರೆ. ಈ ವಿಷಯವನ್ನು ಚರ್ಚಿಸುವುದಕ್ಕಾಗಿ ಸಭೆ ಕರೆಯಲಾಗುವುದು ಎಂದು ಗೃಹ ಸಚಿವ ಜಿ.ಪರಮೇಶ್ವರ ಅವರು ಇದೇ 27ರಂದು ವಿಧಾನಸಭೆಯ ಕಲಾಪದಲ್ಲಿ ನೀಡಿರುವ ಹೇಳಿಕೆಯನ್ನು ಯಥಾವತ್ತಾಗಿ ಅರ್ಜಿಯಲ್ಲಿ ಉದ್ಧರಿಸಿದೆ.

ಕೃಷ್ಣಾ ನದಿ ಜಲಾನಯನ ಪ್ರದೇಶದಲ್ಲಿ ರಾತ್ರಿ ಸಂದರ್ಭಗಳಲ್ಲಿ ನಿರಂತರವಾಗಿ ಮರಳು ಗಣಿಗಾರಿಕೆ ನಡೆಯುತ್ತಿದೆ. ಇದರಿಂದ ಉಂಟಾಗುವ ದೂಳಿನಿಂದ ಈ ಭಾಗದ ರೈತರು ಬೆಳೆಯುವ ಬೆಳೆಗಳಿಗೆ ಹಾನಿಯಾಗಲಿದೆ ಎಂಬುದಾಗಿ ಅಲ್ಲಿಯ ರೈತರು ತಿಳಿಸಿರುವ ಕುರಿತೂ ಮಾಧ್ಯಮಗಳಲ್ಲಿ ವರದಿಯಾಗಿದೆ. ಮರಳು ಗಣಿಗಾರಿಕೆ ಪ್ರದೇಶಗಳಲ್ಲಿನ ವಾಹನ ಚಲನವಲನಗಳ ಮೇಲ್ವಿಚಾರಣೆ ಮಾಡಲು ಸಿ.ಸಿ.ಟಿ.ವಿ ಕ್ಯಾಮೆರಾ ಮತ್ತು ಚೆಕ್‌ಪೋಸ್ಟ್‌ಗಳು ಇಲ್ಲದ ಕಾರಣ ಅಕ್ರಮ ಮರಳು ಗಣಿಗಾರಿಕೆಯಲ್ಲಿ ತೊಡಗಿರುವ ವಾಹನಗಳಿಂದ ಹಲವು ಸಾವು ನೋವುಗಳು ಸಂಭವಿಸಿವೆ ಎಂಬುದನ್ನು ಅರ್ಜಿಯಲ್ಲಿ ವಿವರಿಸಲಾಗಿದೆ.

▶ 10ನೇ ಪುಟಕ್ಕೆ

ಮಹಾರಾಷ್ಟ್ರದ ಮೊದಲ ಮಹಿಳಾ ಉಪ ಮುಖ್ಯಮಂತ್ರಿ ಸುನೇತ್ರಾ ಪವಾರ್


ಸುನೇತ್ರಾ ಪವಾರ್

ಮುಂಬೈ,ಜ.31–ಇತ್ತೀಚಿಗೆ ವಿಮಾನ ಪತನದಲ್ಲಿ ನಿಧನರಾದ ಎನ್‌ಸಿಪಿ ನಾಯಕ ಹಾಗೂ ಮಹಾರಾಷ್ಟ್ರದ ಉಪಮುಖ್ಯಮಂತ್ರಿ ಅಜಿತ್ ಪವಾರ್ ಅವರ ಪತ್ನಿ ಸುನೇತ್ರಾ ಪವಾರ್ ಅವರು ಶನಿವಾರ ಮಹಾರಾಷ್ಟ್ರದ ಮೊದಲ ಮಹಿಳಾ ಉಪಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ಇಂದು ಸಂಜೆ 5 ಗಂಟೆಗೆ ಲೋಕ ಭವನದಲ್ಲಿ ನಡೆದ ಸರಳ ಸಮಾರಂಭದಲ್ಲಿ ಮಹಾರಾಷ್ಟ್ರ ರಾಜ್ಯಪಾಲ ಆಚಾರ್ಯ ದೇವವ್ರತ್ ಅವರು ಸುನೇತ್ರಾ ಪವಾರ್ ಅವರಿಗೆ ಪ್ರತಿಜ್ಞಾವಿಧಿ ಬೋಧಿಸಿದರು.

ಇದಕ್ಕು ಮುನ್ನ ಸುನೇತ್ರಾ ಪವಾರ್ ಅವರನ್ನು ಎನ್‌ಸಿಪಿ ಶಾಸಕಾಂಗ ಪಕ್ಷದ ನಾಯಕಿಯಾಗಿ ಸರ್ವಾನು ಮತದಿಂದ ಆಯ್ಕೆ ಮಾಡಲಾಗಿತ್ತು. ಇಂದು ಮುಂಬೈನಲ್ಲಿ ನಡೆದ ಎನ್‌ಸಿಪಿ ಶಾಸಕಾಂಗ ಪಕ್ಷದ ಸಭೆಯಲ್ಲಿ, ಎನ್‌ಸಿಪಿ ನಾಯಕ ಛಗನ್ ಭುಜಬಲ್ ಅವರು ರಾಜ್ಯಸಭಾ ಸದಸ್ಯೆಯಾಗಿರುವ ಸುನೇತ್ರಾ ಪವಾರ್ ಅವರ ಹೆಸರನ್ನು ಶಾಸಕಾಂಗ ಪಕ್ಷದ ನಾಯಕಿ ಸ್ಥಾನಕ್ಕೆ ಪ್ರಸ್ತಾಪಿಸಿದರು ಮತ್ತು ಇತರ ಹಿರಿಯ ನಾಯಕರು ಅದನ್ನು ಅನುಮೋದಿಸಿದರು.

ಇಂದು ಕೇಂದ್ರ ಬಜೆಟ್

- ಸತತ 9ನೇ ಬಾರಿಗೆ ಬಜೆಟ್ ಮಂಡಿಸಲಿರುವ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್
- ಮೋದಿ 3.0 ಸರ್ಕಾರದ ಮೂರನೇ ಬಜೆಟ್ ಮೇಲೆ ದೇಶದ ಎಲ್ಲಾ ವರ್ಗದವರ ಚಿತ್ತ
- ಅಗತ್ಯ ವಸ್ತುಗಳ ಬೆಲೆ ನಿಯಂತ್ರಣ, ಕೃಷಿ–ಕೈಗಾರಿಕೆ ಅಭಿವೃದ್ಧಿಗೆ ಯೋಜನೆ ನಿರೀಕ್ಷೆ



ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಂಡಿಸಲಿರುವ ಬಜೆಟ್ ಮೇಲೆ ದೇಶದ ಜನರ ಗಮನ ನೆಟ್ಟಿದೆ. 2026ರ ಬಜೆಟ್ ಜನಸಾಮಾನ್ಯರ ಬಜೆಟ್ ಆಗಲಿದೆಯೇ, ಮಧ್ಯಮ ವರ್ಗದವರಿಗೆ ನಿರಾಳತೆ ಸಿಗಲಿದೆಯೇ, ವಿಸ್ತೃತ ಆರ್ಥಿಕ ಆದ್ಯತೆಗಳಿಗೆ ಪ್ರಾಧಾನ್ಯತೆ ಇರಲಿದೆಯೇ ಅಥವಾ ಹಳೆ ಪುಸ್ತಕ ಹೊಸ ಮುಖಪುಟ ಎಂಬಂತೆ ಯಥಾ ಬಜೆಟ್ ಮಂಡನೆಯಾಗಲಿದೆಯೇ ಕಾದು ನೋಡಬೇಕಿದೆ.

ಬೆಂಗಳೂರು: ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಫೆ.1 ಭಾನುವಾರ 2026–27ನೇ ಸಾಲಿನ ಬಹುನಿರೀಕ್ಷಿತ ಕೇಂದ್ರ ಬಜೆಟ್ ಮಂಡಿಸಲಿದ್ದಾರೆ. ನಿರಂತರವಾಗಿ ಒಂಬತ್ತನೆಯ ಬಾರಿಗೆ ಬಜೆಟ್ ಮಂಡಿಸುವ ಮೂಲಕ ಅವರು, ಹೆಚ್ಚಿನ ಅವಧಿಗೆ ಕೇಂದ್ರದ ಹಣಕಾಸು ಸಚಿವರ ಹುದ್ದೆ ನಿರ್ವಹಿಸಿದ ಹೆಗ್ಗಳಿಕೆಗೂ ಭಾಜನರಾಗಲಿದ್ದಾರೆ.

'ಪ್ರಧಾನಿ ನರೇಂದ್ರ ಮೋದಿ 3.0' ಸರ್ಕಾರದ ಮೂರನೇ ಪೂರ್ಣಪ್ರಮಾಣದ ಬಜೆಟ್ ಇದಾಗಿದ್ದು, ಕೃಷಿ, ಕೈಗಾರಿಕೆ ಸೇರಿದಂತೆ ವಿವಿಧ ಕ್ಷೇತ್ರಗಳ ಅಭಿವೃದ್ಧಿಗೆ ಪೂರಕವಾದ ಹೊಸ ಯೋಜನೆಗಳನ್ನು ಘೋಷಿಸಬಹುದೆಂಬ ಚರ್ಚೆ ನಡೆದಿದೆ.

ಆರ್ಥಿಕ ಬೆಳವಣಿಗೆ, ಉದ್ಯೋಗ ಸೃಷ್ಟಿ, ಮೂಲಸೌಕರ್ಯ, ಹೊಸ ತೆರಿಗೆ ಪದ್ಧತಿ ಸರಳೀಕರಣ ಸೇರಿದಂತೆ ಮಧ್ಯಮ ವರ್ಗಕ್ಕೆ ಅನುಕೂಲಕರವಾಗಬಲ್ಲ ಹಲವು ಕ್ರಮಗಳನ್ನು ಘೋಷಿಸಬಹುದೆಂದು ನಿರೀಕ್ಷಿಸಲಾಗಿದೆ. ಬೆಲೆ ಏರಿಕೆಯಿಂದ ತತ್ತರಿಸಿರುವ ಮಧ್ಯಮ ವರ್ಗ, ನೌಕರ ವರ್ಗ ಮತ್ತು ಪಿಂಚಣಿದಾರರು ಇಂದಿನ ಬಜೆಟ್ ಮೇಲೆ ಗಮನವಿಟ್ಟಿದ್ದು, ಬೆಲೆ ಏರಿಕೆ ನಿಯಂತ್ರಿಸುವ ನಿಟ್ಟಿನಲ್ಲಿ ಮಹತ್ವದ ನಿರ್ಧಾರ ಕೈಗೊಳ್ಳಬಹುದೆಂಬ ಆಶಯ ಹೊಂದಿದ್ದಾರೆ. ಆರೋಗ್ಯ, ಶಿಕ್ಷಣ ಮತ್ತು ವಸತಿ ಯೋಜನೆಗಳಿಗೆ ನೆರವಾಗುವ ಬಜೆಟ್ ಆಗಬಹುದೆಂಬ ಆಶಯವೂ ವ್ಯಕ್ತವಾಗಿದೆ.

ಪೂರೈಕೆ ವ್ಯವಸ್ಥೆಯನ್ನು ಬಲಪಡಿಸುವುದು, ಅಗತ್ಯ ವಸ್ತುಗಳ ಮೇಲಿನ ಪರೋಕ್ಷ ತೆರಿಗೆ ಕಡಿಮೆ ಮಾಡುವುದು ಮತ್ತು ಸಾರ್ವಜನಿಕ ವಿತರಣೆ ವ್ಯವಸ್ಥೆಯನ್ನು ಗಟ್ಟಿಗೊಳಿಸುವ ಮೂಲಕ ಬೆಲೆ ಏರಿಕೆ ನಿಯಂತ್ರಿಸುವ ಬಗ್ಗೆ ಬಜೆಟ್‌ನಲ್ಲಿ ಘೋಷಿಸಬಹುದು ಎನ್ನಲಾಗಿದೆ. ಪೆಟ್ರೋಲ್ ಮತ್ತು ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು ಕಡಿತಗೊಳಿಸಬೇಕೆಂಬ ನಗರವಾಸಿಗಳು ಹಾಗೂ ಸಣ್ಣ ವ್ಯಾಪಾರಿಗಳ ಬೇಡಿಕೆಗೆ ಮನ್ನಣೆ ಸಿಗಬಹುದು ಎಂದು ನಿರೀಕ್ಷಿಸಲಾಗಿದೆ.

ವೇತನದಾರರು ಬಜೆಟ್‌ಗಾಗಿ ಕಾತುರದಿಂದ ಕಾದಿದ್ದಾರೆ. ತೆರಿಗೆ ವಿನಾಯಿತಿ ಮಿತಿಯನ್ನು ತಗ್ಗಿಸುವುದರ ಜೊತೆಗೆ ಹೆಚ್ಚಿನ ಸ್ಟ್ಯಾಂಡರ್ಡ್ ಡಿಡಕ್ಷನ್ ಮತ್ತು ಸರಳೀಕೃತ ತೆರಿಗೆ ಸ್ಲಾಬ್‌ಗಳನ್ನು ನೀಡಬಹುದೆಂಬ ನಿರೀಕ್ಷೆ ಹೊಂದಿದ್ದಾರೆ. ಪಿಂಚಣಿದಾರರು ತಮ್ಮ ಆದಾಯಕ್ಕೆ ನ್ಯಾಯಸಮ್ಮತ ತೆರಿಗೆ ವ್ಯವಸ್ಥೆಯನ್ನು ಬಯಸಿದ್ದು, ಸ್ಟ್ಯಾಂಡರ್ಡ್ ಡಿಡಕ್ಷನ್ ಅನ್ನು ಈಗಿರುವ 75 ಸಾವಿರದಿಂದ 1 ಲಕ್ಷಕ್ಕೆ ಹೆಚ್ಚಿಸಿ, ತೆರಿಗೆ ಹೊರೆ ಕಡಿಮೆ ಮಾಡಬೇಕೆಂಬ ಒತ್ತಾಯವೂ ಇದೆ.

ಮುಖ್ಯವಾಗಿ ನಿರುದ್ಯೋಗ ಮತ್ತು ಉದ್ಯೋಗ ಅಭದ್ರತೆಯಲ್ಲಿರುವ ಯುವ ಜನತೆ, ಉದ್ಯೋಗ ಸೃಷ್ಟಿಯ ನಿರೀಕ್ಷೆಯಲ್ಲಿದ್ದಾರೆ. ಕೈಗಾರಿಕಾ ವಲಯಕ್ಕೆ ಮೂಲಸೌಕರ್ಯ, ಉತ್ಪಾದನಾ ಕ್ಷೇತ್ರ ಮತ್ತು ಎಂಎಸ್‌ಎಂಇಗಳ ಹೂಡಿಕೆ ಹೆಚ್ಚಳದ ಮೂಲಕ ಉದ್ಯೋಗಾವಕಾಶ

▶ 10ನೇ ಪುಟಕ್ಕೆ

> “ಸಾರಿಗೆ, ಸರಕುಗಳು, ನಗರಾಭಿವೃದ್ಧಿ, ವಿದ್ಯುತ್ ಮತ್ತು ಡಿಜಿಟಲ್ ನೆಟ್‌ವರ್ಕ್‌ಗಳಂತಹ ಮೂಲಸೌಕರ್ಯಗಳಲ್ಲಿ ಒತ್ತು ನೀಡಬಹುದು. ಭಾರತದ ದೀರ್ಘಾವಧಿ ಬೆಳವಣಿಗೆಯ ಸಾಮರ್ಥ್ಯವನ್ನು ಬಲಪಡಿಸುವ ನಿಟ್ಟಿನಲ್ಲಿ ನಿರ್ಣಾಯಕ ನಿರ್ಧಾರ ಪ್ರಕಟಿಸಬಹುದು. ಬೃಹತ್ ಯೋಜನೆಗಳನ್ನು ತ್ವರಿತವಾಗಿ ಕಾರ್ಯಗತಗೊಳಿಸುವುದು ಮತ್ತು ವೆಚ್ಚದ ಪರಿಣಾಮವನ್ನು ಹೆಚ್ಚಿಸಲು ಕೇಂದ್ರ ಮತ್ತು ರಾಜ್ಯಗಳ ನಡುವೆ ಹೆಚ್ಚಿನ ಸಮನ್ವಯವನ್ನು ಕಾಯ್ದುಕೊಳ್ಳಬೇಕೆಂಬ ಖಾಸಗಿ ಕಂಪನಿಗಳ ನಿರೀಕ್ಷೆಗೆ ಬಜೆಟ್‌ನಲ್ಲಿ ಪರಿಹಾರ ಸಿಗಬಹುದು ಎನ್ನಲಾಗಿದೆ.

ಉದ್ಯಮಿ ಸಿ.ಜೆ.ರಾಯ್ ಆತ್ಮಹತ್ಯೆ ಪ್ರಕರಣದ ತನಿಖೆಗೆ

ಎಸ್‌ಐಟಿ ರಚಿಸಿದ ರಾಜ್ಯ ಸರ್ಕಾರ



ಬೆಂಗಳೂರು,ಜ.31–ಶುಕ್ರವಾರ ತಮ್ಮ ಕಚೇರಿಯಲ್ಲಿ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದ, ಖ್ಯಾತ ರಿಯಲ್ ಎಸ್ಟೇಟ್ ಉದ್ಯಮಿ, ಕಾನ್ಫಿಡೆಂಟ್ ಗ್ರೂಪ್ ಅಧ್ಯಕ್ಷ ಮತ್ತು ಸಂಸ್ಥಾಪಕ ಸಿ.ಜೆ. ರಾಯ್ ಪ್ರಕರಣದ ತನಿಖೆಗೆ ರಾಜ್ಯ ಸರ್ಕಾರ ಶನಿವಾರ ಬೆಂಗಳೂರು ಜಂಟಿ ಪೊಲೀಸ್ ಆಯುಕ್ತ ವಂಶಿಕೃಷ್ಣ ನೇತೃತ್ವದಲ್ಲಿ ಎಸ್‌ಐಟಿ ರಚಿಸಿ ಆದೇಶ ಹೊರಡಿಸಿದೆ.

ಈ ಎಸ್‌ಐಟಿಯಲ್ಲಿ ಬೆಂಗಳೂರು ದಕ್ಷಿಣ ವಿಭಾಗದ ಡಿಸಿಪಿ ಲೋಕೇಶ್ ಕೂಡ ಇರುತ್ತಾರೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ ತಿಳಿಸಿದ್ದಾರೆ. ಈ ಸಂಬಂಧ ಬೆಂಗಳೂರಿನ ಅಶೋಕನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ಪೊಲೀಸರು ಸಾವಿನ ಕೇಸ್ ತನಿಖೆ ನಡೆಸುತ್ತಿದ್ದರು. ಈಗ ಅಶೋಕನಗರ ಪೊಲೀಸರಿಂದ ಎಸ್‌ಐಟಿಗೆ ಕೇಸ್ ವರ್ಗಾವಣೆಯಾಗಲಿದೆ. ಕೇಸ್ ದಾಖಲೆ, ಸಾಕ್ಷಿ, ಎಫ್‌ಐಆರ್ ಪ್ರತಿ ಸೇರಿದಂತೆ ಎಲ್ಲವನ್ನೂ ಅಶೋಕ್‌ನಗರ ಪೊಲೀಸರು, ಎಸ್‌ಐಟಿಗೆ ವರ್ಗಾಯಿಸಲಿದ್ದಾರೆ.

ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಕಳೆದ ಮೂರು ದಿನಗಳಿಂದ ಹೊಸೂರು ರಸ್ತೆಯ ಲ್ಯಾಂಗ್‌ಫರ್ಡ್ ಟೌನ್‌ನಲ್ಲಿರುವ ಕಾನ್ಫಿಡೆಂಟ್ ಗ್ರೂಪ್ ಕಂಪನಿಯಲ್ಲಿ ಶೋಧ ನಡೆಸುತ್ತಿದ್ದರು. ಈ ವೇಳೆ ರಾಯ್ ಅವರು ತಮ್ಮ ಪರವಾನಗಿ ಪಡೆದ ಬಂದೂಕಿನಿಂದ ಗುಂಡು ಹಾರಿಸಿಕೊಂಡಿದ್ದಾರೆ ಎಂದು ಬೆಂಗಳೂರು ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ತಿಳಿಸಿದ್ದಾರೆ. ಅಶೋಕ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಈ ಘಟನೆ ಸಂಭವಿಸಿದೆ ಎಂದು ಹೇಳಿದ್ದಾರೆ.

ಐಟಿ ದಾಳಿಯಿಂದ ಒತ್ತಡದಲ್ಲಿದ್ದರು


ಸಿ.ಜೆ.ಬಾಬು

ಬೆಂಗಳೂರು,ಜ.31– ರಿಯಲ್ ಎಸ್ಟೇಟ್ ಕಂಪನಿ ಕಾನ್ಫಿಡೆಂಟ್ ಗ್ರೂಪ್ ಮುಖ್ಯಸ್ಥ, ಉದ್ಯಮಿ ಸಿ.ಜೆ. ರಾಯ್ ಅವರಿಗೆ ಶತ್ರುಗಳಾಗಲೀ, ಬೆದರಿಕೆಯಾಗಲೀ ಇರಲಿಲ್ಲ. ಅವರು ಖಿನ್ನತೆಯಿಂದಲೂ ಬಳಲುತ್ತಿರಲಿಲ್ಲ ಎಂದು ರಾಯ್ ಸಹೋದರ ಸಿ.ಜೆ.ಬಾಬು ತಿಳಿಸಿದ್ದಾರೆ. ಶನಿವಾರ ಮಾಧ್ಯಮ ಪ್ರತಿನಿಧಿಗಳ ಜೊತೆ ಮಾತನಾಡಿದ ಅವರು ರಾಯ್‌ಗೆ ಶತ್ರುಗಳು, ಬೆದರಿಕೆ ಇರಲಿಲ್ಲ. ಖಿನ್ನತೆಯಿಂದಲೂ ಅವರು ಬಳಲುತ್ತಿರಲಿಲ್ಲ. ಆದರೆ ಆದಾಯ ತೆರಿಗೆ ಇಲಾಖೆ (ಐಟಿ) ಅಧಿಕಾರಿಗಳ ದಾಳಿ ಹಿನ್ನೆಲೆಯಲ್ಲಿ ಅವರು ಒತ್ತಡದಲ್ಲಿದ್ದರು ಎಂದು ಬಾಬು ತಿಳಿಸಿದರು.

ಕಳೆದ 3 ದಿನಗಳಿಂದ ಐಟಿ ದಾಳಿ ನಡೆದಿತ್ತು. ಕೊಚ್ಚಿಯಿಂದ ಆಗಮಿಸಿದ್ದ ಐಆರ್‌ಎಸ್ ಅಧಿಕಾರಿ ಕೃಷ್ಣ ಪ್ರಸಾದ್ ನೇತೃತ್ವದಲ್ಲಿ

▶ 10ನೇ ಪುಟಕ್ಕೆ

ಮೈಸೂರು–ಬೆಂಗಳೂರು ಹೆದ್ದಾರಿ ಜಂಕ್ಷನ್‌ನಲ್ಲಿ ಗ್ರೇಡ್ ಸಪರೇಟರ್ ಕಾಮಗಾರಿ ಆರಂಭ

ನಾಡಪ್ರಭು ಕೆಂಪೇಗೌಡ ವೃತ್ತ(ಮಣಿಪಾಲ್ ಆಸ್ಪತ್ರೆ ಬಳಿ)ದಲ್ಲಿ ಟ್ರಾಫಿಕ್ ಜಾಮ್ ಸಮಸ್ಯೆಗೆ ಮುಕ್ತಿ

- 120 ಕೋಟಿ ರೂ. ವೆಚ್ಚದ ಯೋಜನೆಯಿದು
- 20 ಅಡಿ ಆಳದಿಂದ ಸುಭದ್ರ ಅಡಿಪಾಯ
- ಸದ್ಯ ನಿಧಾನವಾಗಿ ಚಲಿಸುವಂತೆ ಚಾಲಕರಿಗೆ ಎಚ್ಚರಿಕೆ
- ಗ್ರೇಡ್ ಸಪರೇಟರ್ ಸಾಕಾರಗೊಂಡರೆ ಸಿಗ್ನಲ್ ಫ್ರೀ


ಕೆಂಪೇಗೌಡ ವೃತ್ತದಲ್ಲಿ ಗ್ರೇಡ್ ಸಪರೇಟರ್ ನಿರ್ಮಾಣ ಕಾಮಗಾರಿ ಆರಂಭವಾಗಿದೆ.

ಮೈಸೂರು,ಜ.31(ಬಿಎಲ್‌ಯು)– ಸಾಂಸ್ಕೃತಿಕ ನಗರಿ ಮೈಸೂರಿನ ನಾಡಪ್ರಭು ಕೆಂಪೇಗೌಡ ವೃತ್ತ (ಮಣಿಪಾಲ್ ಆಸ್ಪತ್ರೆ ಜಂಕ್ಷನ್)ದಲ್ಲಿ ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (NHAI)ದಿಂದ ಗ್ರೇಡ್ ಸಪರೇಟರ್ ಕಾಮಗಾರಿ ಅಂತೂ ಆರಂಭಗೊಂಡಿದೆ.

ಸುರಕ್ಷತೆ ಮತ್ತು ಮೂಲ ಸೌಕರ್ಯ ಪ್ಯಾಕೇಜ್ ಅಡಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ಅನುಮೋದನೆ ನೀಡಿರುವ 712 ಕೋಟಿ ಯೋಜನೆಯ ಭಾಗವಾಗಿ ನಾಡಪ್ರಭು ಕೆಂಪೇಗೌಡ ವೃತ್ತದಲ್ಲಿ 120 ಕೋಟಿ ವೆಚ್ಚದಲ್ಲಿ ಗ್ರೇಡ್ ಸಪರೇಟರ್ ಕಾಮಗಾರಿ ಕೈಗೊಳ್ಳಲಾಗಿದೆ.

▶ 10ನೇ ಪುಟಕ್ಕೆ

ಇನ್ನೆರಡು ವರ್ಷದಲ್ಲಿ ಕಾಮಗಾರಿ ಪೂರ್ಣ



> “ಗ್ರೇಡ್ ಸಪರೇಟರ್ ಕಾಮಗಾರಿ ಇನ್ನು ಎರಡು ವರ್ಷದಲ್ಲಿ ಪೂರ್ಣಗೊಳ್ಳಲಿದೆ. ವರ್ಷಗಳಿಂದಲೂ ಈ ವೃತ್ತದಲ್ಲಿ ಸಂಚಾರಕ್ಕೆ ಅಡಚಣೆಯಾಗಿತ್ತು. ನಾಲ್ಕು ದಿಕ್ಕಿನಿಂದ ಬರುವ ವಾಹನಗಳು ಇಲ್ಲಿ ಸಂಪರ್ಕಿಸುವ ಹಿನ್ನೆಲೆಯಲ್ಲಿ ಗ್ರೇಡ್ ಸಪರೇಟರ್ ನಿರ್ಮಾಣಕ್ಕೆ ಕೇಂದ್ರ ರಸ್ತೆ ಸಾರಿಗೆ ಬಂದರು ಮತ್ತು ಹೆದ್ದಾರಿ ಸಚಿವಾಲಯಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿತ್ತು. ಇಲ್ಲಿನ ಟ್ರಾಫಿಕ್ ಜಾಮ್ ವಸ್ತುಸ್ಥಿತಿ ವಿವರಿಸಿ, ಸುಗಮ ವಾಹನ ಸಂಚಾರಕ್ಕೆ ಗ್ರೇಡ್ ಸಪರೇಟರ್ ನಿರ್ಮಿಸುವಂತೆ ಮನವಿ ಸಲ್ಲಿಸಲಾಗಿತ್ತು. 120 ಕೋಟಿ ರೂಪಾಯಿಗಳ ಈ ಯೋಜನೆಯನ್ನು ಇನ್ನು ಎರಡು ವರ್ಷದೊಳಗೆ ಪೂರ್ಣಗೊಳಿಸುವ ಗುರಿ ಹೊಂದಿದ್ದು, ಕಾಮಗಾರಿ ತ್ವರಿತವಾಗಿ ಸಾಗುವಂತೆ ನಾನು ಇದರ ಮೇಲ್ವಿಚಾರಣೆ ವಹಿಸಿಕೊಳ್ಳುತ್ತೇನೆ. ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಸರ್ವೀಸ್ ರಸ್ತೆ, ಸೇತುವೆ ಹೀಗೆ ಹಲವು ಸಮಸ್ಯೆಗಳಿವೆ. ಇದನ್ನು ಹಂತ–ಹಂತವಾಗಿ ಪರಿಹಾರ ಮಾಡಲಾಗುವುದು.
>
> **–ಯದುವೀರ್ ಒಡೆಯರ್, ಸಂಸದ, ಮೈಸೂರು–ಕೊಡಗು.**

ಡ್ರಗ್ಸ್ ದಂಧೆಯಲ್ಲಿ ಮೈಸೂರು ಪೊಲೀಸರು ಶಾಮೀಲಾಗಿದ್ದಾರಾ...!

ಸಂಸದ ಯದುವೀರ್ ಸಂಶಯ

● ಹೊರ ರಾಜ್ಯದ ಪೊಲೀಸರು ಹೇಗೆ ಪತ್ತೆ ಮಾಡುತ್ತಾರೆ ● ಸ್ಥಳೀಯ ಪೊಲೀಸರ ಅರಿವಿಗೇಕೆ ಬರುವುದಿಲ್ಲ ● ಎನ್‌ಸಿಬಿ ಡ್ರಗ್ಸ್ ಪತ್ತೆ ಮಾಡಿದರೂ ಅಲ್ಲಗಳೆಯುವ ಪೊಲೀಸರು ● ಡಾ.ಪರಮೇಶ್ವರ್, ಸೀಮಾ ಲಾಟ್ಕರ್‌ರಿಂದಲೂ ತಪ್ಪು ಮಾಹಿತಿ

ಮೈಸೂರು, ಜ.31(ಬಿಎಲ್‌ಯು)– ಮೈಸೂರಿನಲ್ಲಿ ಡ್ರಗ್ಸ್ ತಯಾರಾಗುತ್ತಿರುವ ಒಂದೊಂದೇ ಪ್ರಕರಣಗಳು ಹೊರ ರಾಜ್ಯದ ಪೊಲೀಸರಿಂದ ಬಯಲಾಗುತ್ತಿರುವುದನ್ನು ಸೂಕ್ಷ್ಮವಾಗಿ ಗಮನಿಸಿದರೆ ಡ್ರಗ್ಸ್ ಜಾಲದಲ್ಲಿ ಮೈಸೂರು ಪೊಲೀಸರೂ ಶಾಮೀಲಾಗಿರುವ ಬಗ್ಗೆ ಅನುಮಾನ ಮೂಡುತ್ತಿದೆ ಎಂದು ಸಂಸದ ಯದುವೀರ್ ಕೃಷ್ಣರಾಜ ಒಡೆಯರ್ ಸಂಶಯ ವ್ಯಕ್ತಪಡಿಸಿದ್ದಾರೆ.

ಮೈಸೂರಿನ ಕಾಡಾ ಕಚೇರಿ ಸಂಕೀರ್ಣದ ತಮ್ಮ ಕಚೇರಿಯಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದ ರಾಸಾಯನಿಕ ಕಾರ್ಖಾನೆಯಲ್ಲಿ ಡ್ರಗ್ಸ್ ತಯಾರಾಗುವುದನ್ನು ಎನ್‌ಸಿಬಿ ಅಧಿಕಾರಿಗಳು ಮೊನ್ನೆ ಪತ್ತೆ ಮಾಡಿದ್ದಾರೆ. ನಗರದ ರಿಂಗ್ ರಸ್ತೆಯ ಬೆಲವತ್ತ ಬಳಿ ಕೋಟ್ಯಾಂತರ ರೂಪಾಯಿ ಮೌಲ್ಯದ ಡ್ರಗ್ಸ್ ಫ್ಯಾಕ್ಟರಿಯ ದೊಡ್ಡ ಜಾಲವನ್ನು ಮಹಾರಾಷ್ಟ್ರ ಪೊಲೀಸರು ಇತ್ತೀಚೆಗೆ ಬಯಲು ಮಾಡಿದ್ದಾರೆ. ಹೊರ ರಾಜ್ಯದ ಪೊಲೀಸರು ಮೈಸೂರಿನಲ್ಲಿರುವ ಡ್ರಗ್ಸ್ ಫ್ಯಾಕ್ಟರಿ ಪತ್ತೆ

▶ 10ನೇ ಪುಟಕ್ಕೆ

> ಮೈಸೂರಿನ ನರಸಿಂಹರಾಜ ಕ್ಷೇತ್ರದ ಉದ್ಯಾನವನಗಳಲ್ಲಿ ಸಲ್ಯೂಷನ್ ಸೇವಿಸುವವರು ಸೇರಿಕೊಂಡು ನಶೆಯಲ್ಲಿ ತೇಲಾಡುತ್ತಿರುತ್ತಾರೆ ಎಂದು ಸಾರ್ವಜನಿಕರು ನಿರಂತರವಾಗಿ ದೂರುತ್ತಿದ್ದಾರೆ. ಆ ಉದ್ಯಾನವನಗಳನ್ನು ಸಲ್ಯೂಷನ್ ಪಾರ್ಕ್ ಹೆಸರಿನಿಂದಲೇ ಗುರುತಿಸಲಾಗುತ್ತಿದೆ. ಆ ಭಾಗದಲ್ಲಿ ಡ್ರಗ್ಸ್ ಮಾರಾಟವೂ ರಾಜಾರೋಷವಾಗಿ ನಡೆಯುತ್ತಿದೆ. ಇದು ಅಲ್ಲಿನ ಪೊಲೀಸರ ಅರಿವಿಗೆ ಬಂದಿಲ್ಲವೇ?. ಡ್ರಗ್ಸ್ ಜಾಲ ವ್ಯಾಪಕವಾಗುತ್ತಿರುವ ಕಾರಣ ಎನ್‌ಸಿಬಿ ಪೊಲೀಸ್ ಠಾಣೆ ತೆರೆಯುವಂತೆ ಕೇಂದ್ರ ಸರ್ಕಾರವನ್ನು ಆಗ್ರಹಿಸುತ್ತೇನೆ. ಬಜೆಟ್ ಅಧಿವೇಶನದ ಸಂದರ್ಭದಲ್ಲಿ ಈ ಬಗ್ಗೆ ಕೇಂದ್ರ ಸರ್ಕಾರದ ಗಮನ ಸೆಳೆಯುತ್ತೇನೆ.
>
> –ಯದುವೀರ್

ನಕ್ಕರೆ ಅದೇ ಸ್ವರ್ಗ

ಟೀಚರ್ : ಯಾರದ್ದೋ ತಪ್ಪಿಗೆ, ಇನ್ಯಾರಿಗೋ ಶಿಕ್ಷೆ. ಇದಕ್ಕೊಂದು ಉದಾಹರಣೆ ಕೊಡು?

ವಿದ್ಯಾರ್ಥಿ : ಹುಡುಗಿಗೆ ಲೈನ್ ಹೊಡೆದದ್ದು ಕಣ್ಣು! ಉದುರಿದ್ದು ಹಲ್ಲು!!

ಮೈಸೂರು ಮಿತ್ರ

ಭಾನುವಾರ, ಫೆಬ್ರವರಿ 1, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಗಿಡದಲ್ಲಿ ಎಷ್ಟೇ ಮುಳ್ಳುಗಳು ಇದ್ದರೂ ಅದರಲ್ಲಿ ಹೂ ಅರಳಬೇಕು. ಹಾಗೆಯೇ ಮನಸ್ಸಿನಲ್ಲಿ ಎಷ್ಟೇ ನೋವಿದ್ದರೂ ಮುಖದಲ್ಲಿ ನಗು ತುಂಬಿರಬೇಕು.

ವೇದ ಸುಳ್ಳಾದರೂ } ಸಾವಿರ ಚಿತ್ತಾರವನ್ನು
ಗಾದೆ ಸುಳ್ಳಾಗದು } ಒಂದು ಮಸಿ ನುಂಗಿತ

ನಿಮ್ಮ ಪತ್ರಗಳು

ಮೈಸೂರಿನ ಕೆರೆಗಳ ಸಂರಕ್ಷಣೆ ಅಗತ್ಯ

ಮಾನ್ಯರೆ,

ಮರಣ ಶಯ್ಯೆಯಲ್ಲಿರುವ ಲಿಂಗಾಂಬುದಿ ಕೆರೆ ವಿಶೇಷ ವರದಿ ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ರಾಜಕಾಲುವೆಯಲ್ಲಿ ಉಕ್ಕುತ್ತಿರುವ ಒಳ ಚರಂಡಿ ನೀರು, ಜೀವನಾಡಿಗಳಿಗೆ ಸಂಚಕಾರ, ರಾಜರಾಜೇಶ್ವರಿ ನಗರ, ದಟ್ಟಗಳ್ಳಿ, ಕನಕದಾಸ ನಗರ ಸೇರಿದಂತೆ ವಿವಿಧ ಬಡಾವಣೆಗಳಿಂದ ಬರುವ ಒಳ ಚರಂಡಿ ಪೈಪ್ ಒಡೆದು ರಾಜ ಕಾಲುವೆಯಲ್ಲಿ ಉಕ್ಕುತ್ತಿರುವ ಒಳಚರಂಡಿ ನೀರು, ಅಕ್ಕಪಕ್ಕದ ನಿವಾಸಿಗಳು, ಶಾಲಾ ಮಕ್ಕಳಿಗೆ ದುರ್ವಾಸನೆ, ಸೊಳ್ಳೆಗಳ ಕಾಟದಿಂದ ನಿವಾಸಿಗಳು ಹೈರಾಣ. ಒತ್ತುವರಿಯಿಂದ ಕೆರೆಯ ಬಫರ್ ವಲಯ ನಲುಗಿದೆ. ರಾಜ ಕಾಲುವೆ ಪಕ್ಕದ ಉದ್ಯಾನ ಸೊರಗಿದೆ. ಕೆರೆಯ ಮಾಲಿನ್ಯದಿಂದ ಪಕ್ಷಿಗಳ ವಲಸೆಗೆ ಆತಂಕ ಎದುರಾಗಿದೆ. 198 ವರ್ಷದ ಐತಿಹಾಸಿಕ ಕೆರೆ, 150 ಎಕರೆ ಜಲರಾಶಿ ಹಾಗೂ ನೂರು ಎಕರೆ ಅರಣ್ಯ ಹೊಂದಿದೆ. ಎಂದು ಹೇಳಲಾಗಿದೆ. ಕೆರೆ ಒತ್ತುವರಿಯಾಗಿದೆಯೇ ಇಲ್ಲವೇ ಎನ್ನುವುದನ್ನು ಪರಿಶೀಲಿಸಬೇಕು ಎನ್ನುವ ವರದಿ ಪ್ರಕಟವಾಗಿತ್ತು.

ವರದಿ ಪ್ರಕಟವಾದ ಮಾರನೇ ದಿನವೇ ಶಾಸಕ ಜಿ.ಟಿ.ದೇವೇಗೌಡರು ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿದರು. ಹಾಜರಿದ್ದ ಪಾಲಿಕೆ ಆಯುಕ್ತರಿಗೆ ರಾಜ ಕಾಲುವೆ ಸ್ವಚ್ಛಗೊಳಿಸುವ ಬಗ್ಗೆ, ಕಾಲುವೆಗೆ ಸೇರುತ್ತಿರುವ ಪ್ಲಾಸ್ಟಿಕ್ ತ್ಯಾಜ್ಯಗಳನ್ನು ತೆರವುಗೊಳಿಸಿ ಕ್ರಮ ಕೈಗೊಳ್ಳುವಂತೆ ತಿಳಿಸಿದರು. ಕೆರೆಯ ಪಕ್ಕದ ಉದ್ಯಾನವನವನ್ನು ಖಾಸಗಿ ಶಾಲೆಯವರು ಆಟದ ಮೈದಾನ ಮತ್ತು ಪಾರ್ಕಿಂಗ್ ಮಾಡಿಕೊಂಡಿರುವುದನ್ನು ತೆರವುಗೊಳಿಸುವುದಾಗಿ ಆಯುಕ್ತರು ಭರವಸೆ ನೀಡಿದರು. ಹಾಗೆಯೇ ಕೆರೆ ಒತ್ತುವರಿಯನ್ನು ತೆರವುಗೊಳಿಸಬೇಕು. ಇದು ಆಗಬೇಕಾದ ಕೆಲಸ. ಇದೇ ರೀತಿ ಕುಕ್ಕರಹಳ್ಳಿ ಕೆರೆ ಮತ್ತು ಮೈಸೂರಿನ ಹೆಬ್ಬಾಳ ಕೆರೆ ಕೂಡ ಕಲುಷಿತಗೊಂಡಿವೆ.

ಬೆಂಗಳೂರಿನ ಲಾಲ್‌ಬಾಗ್ ಕೆರೆಯಲ್ಲಿ ಕಲುಷಿತಗೊಂಡ ನೀರನ್ನು ಸ್ವಚ್ಛಗೊಳಿಸಲು, ಕೆರೆಯ ಮೇಲೆ ತೇಲುವ ತೋಟದಲ್ಲಿ ಗಿಡಗಳನ್ನು ಬೆಳೆಸಲಾಗಿದೆ. ಕೆರೆಯ ನೀರನ್ನು ಆಕ್ಸಿಜನ್‌ಯುಕ್ತಗೊಳಿಸಲು ಹಾಗೂ ಶುದ್ಧೀಕರಿಸಲು ಯಂತ್ರೋಪಕರಣಗಳನ್ನು ಅಳವಡಿಸಲಾಗಿದೆ. ಇದೇ ರೀತಿ ಮೈಸೂರಿನ ಕೆರೆಗಳನ್ನು ಶುದ್ಧೀಕರಣಗೊಳಿಸಲು ಪಾಲಿಕೆ ಕ್ರಮ ವಹಿಸುವುದು ಅಗತ್ಯವಾಗಿದೆ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಮೈಸೂರು ನಶಾ ಮುಕ್ತವಾಗಿರಲಿ

ಮಾನ್ಯರೆ,

ಪಾರಂಪರಿಕ ನಗರಿ ಎಂದು ಖ್ಯಾತಿ ಪಡೆದಿರುವ ನಮ್ಮ ಮೈಸೂರು, ಅರಮನೆ, ದಸರಾ ಇನ್ನಿತರ ವಿಚಾರಗಳಿಂದ ವಿಶ್ವದಲ್ಲೇ ಪ್ರಖ್ಯಾತಿ ಪಡೆದ ನಗರವಾಗಿದೆ. ಇದಕ್ಕೆ ಹಲವಾರು ಹಿರಿಮೆ–ಗರಿಮೆಗಳಿವೆ. ಇಂತಹ ನಗರಕ್ಕೆ ಡ್ರಗ್ಸ್ ಜಾಲ ಕಾಲಿಟ್ಟಿದ್ದು ಅಕ್ರಮಗಳ ತಾಣವಾಗುತ್ತಿರುವುದು ನಿತ್ಯ ಮಾಧ್ಯಮದಲ್ಲಿ ವರದಿಯಾಗುತ್ತಿದೆ. ಇದು ನಿಜಕ್ಕೂ ಆತಂಕಕಾರಿ.

ಮೈಸೂರಿನ ಪೊಲೀಸರು ಸಮರ್ಥರಿದ್ದಾರೆ. ಇವರು ಪ್ರಾಮಾಣಿಕವಾಗಿ ಪ್ರಯತ್ನ ಮಾಡಿದರೆ ಮಾದಕ ಜಾಲ ಮಟ್ಟ ಹಾಕುವುದು ಕಷ್ಟವೇನಲ್ಲ. ಮೈಸೂರು ಜಿಲ್ಲೆಯ ಹೆಸರನ್ನು ಹಾಳು ಮಾಡಲು ಬಿಡಬೇಡಿ. ಈ ಹಿಂದೆ ಮೈಸೂರಿನ ಯುವಕನೋರ್ವ ಸಂಸತ್ತಿನಲ್ಲಿ ಸ್ಮೋಕ್ ಬಾಂಬ್ ದಾಳಿ ನಡೆಸಿ ಕಳಂಕ ತಂದಿದ್ದ. ಈಗ ಮಾದಕ ದ್ರವ್ಯ ಜಾಲದ ಕಳಂಕ ಅಂಟಿಸುತ್ತಿದ್ದಾರೆ. ಇದು ಬೇಸರದ ಸಂಗತಿ. ರಾಷ್ಟ್ರೀಯ ಮಾದಕ ನಿಯಂತ್ರಣ ಬ್ಯೂರೋ ಡ್ರಗ್ಸ್ ಜಾಲ ಬಯಲು ಮಾಡುತ್ತಿದ್ದು, ಇದು ಅಭಿನಂದನಾರ್ಹ ಕಾರ್ಯ. ಈ ಜಾಲ ಸಂಪೂರ್ಣ ನಿರ್ನಾಮವಾಗಬೇಕು ಜಾಲದಲ್ಲಿ ಇರುವವರನ್ನು ಪತ್ತೆ ಹಚ್ಚಿ ಕಠಿಣ ಶಿಕ್ಷೆಗೆ ಗುರಿಪಡಿಸಬೇಕು. ಆ ಮೂಲಕ ಮೈಸೂರಿನ ಪ್ರಖ್ಯಾತಿ ಉಳಿಯುವಂತಾಗಲಿ.

–ದಡದಹಳ್ಳಿ ರಮೇಶ್, ಚಂದಕವಾಡಿ ಹೋಬಳಿ. ಚಾಮರಾಜನಗರ ಜಿಲ್ಲೆ.

ಹಿಟ್ಲರ್ ಮತ್ತು ಒಂದು ಕೋಳಿಯ ಕಥೆ!

ಮಾನ್ಯರೆ,

ಒಂದು ದಿನ ಹಿಟ್ಲರ್ ಒಂದು ಕೋಳಿಯನ್ನು ಕೈಯ್ಯಲ್ಲಿ ಹಿಡಿದು ಸಚಿವ ಸಂಪುಟ ಸಭೆಗೆ ಬಂದನು. ಕೋಳಿಯ ತಲೆಯನ್ನು ತನ್ನ ಕೈಯಲ್ಲಿ ಬಿಗಿಯಾಗಿ ಹಿಡಿದಿದ್ದ. ನಡೆಯುತ್ತಾ ಹೋಗುವಾಗ, ಅದರ ರೆಕ್ಕೆಗಳನ್ನು ಒಂದೊಂದಾಗಿ ಕೀಳಲು ಆರಂಭಿಸಿದ. ಕೋಳಿ ನೋವಿನಿಂದ ಕಿರುಚುತ್ತಾ ತಪ್ಪಿಸಿಕೊಳ್ಳಲು ಪ್ರಯತ್ನಿಸಿತು. ಆದರೆ ಹಿಟ್ಲರ್ ಬಿಡಲಿಲ್ಲ; ಅದರ ಕಿರುಚಾಟಕ್ಕೂ ಗಮನ ಕೊಡದೆ ರೆಕ್ಕೆಗಳನ್ನು ಕೀಳುತ್ತಲೇ ಇದ್ದ.

ಸಚಿವರುಗಳು ಅವನಿಗೆ ಹೇಳಿದರು; 'ಆ ಬಡ ಪ್ರಾಣಿಯನ್ನು ಹಿಂಸಿಸಬೇಡಿ. ಅದನ್ನು ಬಿಡಿ'. ಆದರೆ ಹಿಟ್ಲರ್ ಯಾರ ಮಾತಿಗೂ ಕಿವಿಗೊಡಲಿಲ್ಲ.

ಕೊನೆಗೆ ಎಲ್ಲಾ ರೆಕ್ಕೆಗಳನ್ನು ಕಿತ್ತ ನಂತರ, ಅವನು ಕೋಳಿಯನ್ನು ನೆಲಕ್ಕೆ ಎಸೆದ. ನಂತರ ತನ್ನ ಜೇಬಿನಿಂದ ಕೆಲವು ಧಾನ್ಯಗಳನ್ನು ತೆಗೆದು ಕೋಳಿಗೆ ತಿನ್ನಲು ಕೊಟ್ಟನು. ಆ ಸ್ಥಿತಿಯಲ್ಲಿ ಆಹಾರಕ್ಕೆ ತೀವ್ರವಾಗಿ ಹಾತೊರೆಯುತ್ತಿದ್ದ ಕೋಳಿ ಮತ್ತೆ ಹಿಟ್ಲರ್ ಕೈ ಕಡೆ ನೋಡಲು ಆರಂಭಿಸಿತು.

ಹಿಟ್ಲರ್ ಧಾನ್ಯ ತೋರಿಸಿ ಕೋಳಿಯನ್ನು ಹತ್ತಿರಕ್ಕೆ ಕರೆಯಲಾರಂಭಿಸಿದ. ಸ್ವಲ್ಪ ಹೊತ್ತಿನ ನಂತರ ಕೋಳಿ ಅವನ ಬಳಿಗೆ ಬಂದು, ಆ ಕೆಲವೇ ಧಾನ್ಯಗಳನ್ನು ತಿನ್ನಲು ಆರಂಭಿಸಿತು. ಇಷ್ಟರವರೆಗೆ ತಪ್ಪಿಸಿಕೊಳ್ಳಲು ಹೋರಾಡುತ್ತಿದ್ದ ಅದೇ ಕೋಳಿ, ಈಗ ಮತ್ತೆ ಅವನ ಪಕ್ಕದಲ್ಲೇ ಕುಳಿತಿತ್ತು. ಕೇವಲ ಕೆಲ ಧಾನ್ಯಗಳಿಗಾಗಿ.

ಇದನ್ನು ನೋಡಿ ಸಚಿವರು ಆಶ್ಚರ್ಯದಿಂದ ಕೇಳಿದರು; ಸರ್, ಇದೇನಿದು?

ಹಿಟ್ಲರ್ ಉತ್ತರಿಸಿದ; ಮತದಾರರೂ ಹೀಗೆಯೇ. ನಾಲ್ಕೂವರೆ ವರ್ಷ ನಾವು ಅವರ ರೆಕ್ಕೆಗಳನ್ನು ಕೀಳುತ್ತೇವೆ. ನಂತರ ಕೊನೆಯ ಆರು ತಿಂಗಳಲ್ಲಿ ಅವರಿಗೆ ಕೆಲ ಧಾನ್ಯಗಳನ್ನು ಎಸೆಯುತ್ತೇವೆ. ಆ ಕೆಲ ಧಾನ್ಯಗಳಿಗಾಗಿ, ನಾಲ್ಕೂವರೆ ವರ್ಷ ನಾವು ಮಾಡಿದ ಅನ್ಯಾಯಗಳನ್ನು ಅವರು ಮರೆತು ಮತ್ತೆ ನಮಗೆ ಮತ ಹಾಕುತ್ತಾರೆ.

–ಸಾಮಾಜಿಕ ಜಾಲತಾಣ

ಅಪೂರ್ಣ ಹೆದ್ದಾರಿಗೆ ಸುಂಕ ಯಾಕೆ?

ಮಾನ್ಯರೆ,

ರಾಷ್ಟ್ರೀಯ ಹೆದ್ದಾರಿ ಸಂಖ್ಯೆ 766 ಕೊಳ್ಳೇಗಾಲದಿಂದ ಕೇರಳ ಗಡಿಯವರೆಗಿನ ರಸ್ತೆ ಇನ್ನೂ ನಿರ್ಮಾಣ ಹಂತದಲ್ಲಿದೆ. ಕಡಕೊಳದ ಬಳಿ ಟೋಲ್ ತೆತ್ತು ಮುಂದೆ ನಂಜನಗೂಡಿನಿಂದ ಗುಂಡ್ಲುಪೇಟೆವರೆಗೆ ಅನೇಕ ಕಡೆ ರಸ್ತೆ ತಿರುವು ಪಡೆದು ಕಲ್ಲು ಧೂಳು ತುಂಬಿದ ರಸ್ತೆಯಲ್ಲಿ ವಾಹನ ಚಲಾಯಿಸಬೇಕು. ಇಂತಹ ಅಪೂರ್ಣ ರಸ್ತೆಯ ಯಾತನಾಮಯ ಪಯಣಕ್ಕೆ ಟೋಲ್ ಹೇರುವುದು ಯಾವ ನ್ಯಾಯ? ರಸ್ತೆ ಪೂರ್ಣ ತಯಾರು ಆಗುವ ತನಕ ಟೋಲ್‌ರಹಿತ ಮುಕ್ತ ಪ್ರಯಾಣಕ್ಕೆ ಅವಕಾಶ ಮಾಡಿ ಕೊಡಬೇಕಾಗಿ ಮನವಿ.

–ಲಕ್ಷ್ಮಣ್ ಗೋರ್ಲಕಟ್ಟೆ, ಬಡಾವಣೆ ಬೋಗಾದಿ, ಮೈಸೂರು



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ಹೆಣ್ಣು ಸಂಸಾರದ ಕಣ್ಣು...!

ಪ್ರಕೃತಿ–ಪುರುಷ ಈರ್ವರೂ ಜಗತ್ತಿನ ಸೃಷ್ಟಿಕ್ರಿಯೆಗೆ, ಅದರ ಮುಂದುವರೆಯುವಿಕೆಗೆ ಇರುವ ಅನಿವಾರ್ಯ ಅಂಗಗಳು. ಪ್ರಾಣಿ, ಪಕ್ಷಿಗಳನ್ನು ಒಳಗೊಂಡ ಸರ್ವ ಜೀವಿಗಳಲ್ಲೂ ತಮ್ಮ ವಂಶವನ್ನು ಮುಂದುವರೆಸಲು, ಸೃಷ್ಟಿ ಕಾರ್ಯಕ್ಕಾಗಿ ಈ ಎರಡೂ ಸಂತತಿಗಳು ಇರುವುದು ಸರ್ವ ವಿದಿತ. ಅಂದ ಮೇಲೆ ಭಗವಂತನ ಸೃಷ್ಟಿಯಾದ ಈ ಎರಡೂ ಮಕ್ಕಳಲ್ಲಿ ತಾರತಮ್ಯ ಭಾವ ಅದೇಕೆ ಬಂದಿತೋ ತಿಳಿಯದು.

ಗಂಡು, ಹೆಣ್ಣಿಗಿಂತ ದೈಹಿಕವಾಗಿ ಬಲಾಢ್ಯ ಎಂಬುದು ಕಾರಣವಾಗಿರಬಹುದೇ? ಹೆಣ್ಣು ಗಂಡಿಗಿಂತ ದೈಹಿಕವಾಗಿ ಅಶಕ್ತಳಾಗಿದ್ದಿರಬಹುದು, ಆದರೆ ಮಾನಸಿಕವಾಗಿ ಅವಳ ದೃಢತೆಯು ಅಚ್ಚರಿ ಹುಟ್ಟಿಸುವಂತಹುದು ಎಂಬುದೂ ವಾಸ್ತವವೇ. ಇತಿ ಹಾಸದತ್ತ ಕಣ್ಣು ಹಾಯಿಸಿದರೆ, ವೇದಗಳ ಕಾಲದಲ್ಲಿ ಪುರುಷರ ಸಮ ಸಮಕ್ಕೂ ಹೆಜ್ಜೆ ಹಾಕಿರುವ ಮೈತ್ರಿ. ಗಾರ್ಗೇಯಿ ಮುಂತಾದ ಮೇಧಾವಿ ಹೆಣ್ಣುಗಳು ಕಾಣಿಸುವಂತೆಯೇ, ಕೇವಲ ಭೋಗದ ವಸ್ತು ಎಂದು ಪರಿಗಣಿತವಾಗಿ ತೀರಾ ಶೋಷಣೆಗೆ ಒಳಗಾದ ಅಬಲೆಯರ ಚಿತ್ರವೂ ಸಿಗುತ್ತದೆ. ಹೆಣ್ಣು ಬೌದ್ಧಿಕವಾಗಿ ತನಗಿಂತ ಎತ್ತರ ಬೆಳೆಯುವುದನ್ನು ಸಹಿಸದ ಮನಗಳೂ ಶೋಷಣೆ ಮಾಡಿರುವ ಸಾಧ್ಯತೆಯನ್ನಂತೂ ತಳ್ಳಿಹಾಕಲು ಸಾಧ್ಯ ಇಲ್ಲ. ಈ ಆಧುನಿಕ ಯುಗದಲ್ಲೂ, ವಿದ್ಯಾವಂತರು, ಬುದ್ಧಿವಂತರು ಎಂದು ಅನಿಸಿಕೊಂಡವರ ಮನೆಯಲ್ಲೂ ಸಹ ವರದಕ್ಷಿಣೆಗಾಗಿ ಹೊಸದಾಗಿ ಬಂದ ವಧುವನ್ನು ಹಿಂಸಿಸುವುದು, ಜೀವಂತವಾಗಿ ದಹಿಸಿ ಬಿಡುವುದು ಇವೆಲ್ಲಾ ನಮ್ಮ ಕಣ್ಣ ಮುಂದೆಯೇ ನಡೆದಿರುವುದಕ್ಕೆ ನಾವು ಸಾಕ್ಷಿ ಆಗಿದ್ದೇವಲ್ಲ? ಅದೆಷ್ಟು ಹೆಣ್ಣು ಮಕ್ಕಳು ಇಂತಹ ಶೋಷಣೆಯನ್ನು, ಮಾನಸಿಕ, ದೈಹಿಕ ಚಿತ್ರಹಿಂಸೆಯನ್ನು ತಡೆಯಲಾಗದೆ ಗೋಳಾಡಿದ್ದಾರೋ, ಲೆಕ್ಕ ಇಟ್ಟವರಾರು?

ನಾನು ಹತ್ತಿರದಿಂದ ಬಲ್ಲಂಥ ಒಂದು ಅತ್ಯಂತ ಸುಶಿಕ್ಷಿತ ಕುಟುಂಬ ಒಂದರಲ್ಲಿ ಇಬ್ಬರು ಗಂಡು ಮಕ್ಕಳು ಇದ್ದರು. ತಂದೆ ತಾಯಿಗಳು ಅದೆಷ್ಟು ಶಿಸ್ತಿನಿಂದ ಅವರನ್ನು ಬೆಳೆಸಿದ್ದರೆಂದರೆ, ತಂದೆ–ತಾಯಿ ಹಾಕಿದ ಗೆರೆಯನ್ನು ಆ ಮಕ್ಕಳು ದಾಟುತ್ತಿರಲಿಲ್ಲ ಅಥವಾ ದಾಟುವಂತಿರಲಿಲ್ಲ.

ಹಿರಿ ಸೊಸೆಯ ತಂದೆ–ತಾಯಿಯರು ಮಗಳು ಪದವೀಧರೆ ಎಂದು ಸುಳ್ಳು ಹೇಳಿ ಮದುವೆ ಮಾಡಿದ್ದರೆಂಬುದು ಅವರಿಗೆ ಗೊತ್ತಾಯಿತು. ಪದವಿಯಲ್ಲಿ ಅವಳು ಫೇಲಾಗಿದ್ದಳು ಅಷ್ಟೆ. ಆದರೆ, ಅದಕ್ಕಾಗಿ ಅವಳ ಬಗ್ಗೆ ಅವರ ಅಸಮಾಧಾನ ತೀವ್ರಗೊಳ್ಳುತ್ತಲೇ ಹೋಯಿತು. ಅದು ನಾನಾ ರೀತಿ ಪ್ರಕಟಗೊಳ್ಳುತ್ತಾ ಅವಳು ಮಾಡಿದ ಎಲ್ಲದರಲ್ಲೂ ತಪ್ಪನ್ನು ಅರಸುವ ಮಟ್ಟಕ್ಕೆ ಹೋಯಿತು. ಕೊನೆಗೆ ಮಗನಿಂದ ಅವಳ ಕೆನ್ನೆಗೆ ಹೊಡೆಸುವ ಮಟ್ಟಕ್ಕೂ ಹೋಯಿತು.

ಅವಳು ಅಳುತ್ತಾ ಅಪ್ಪನಿಗೆ ಫೋನ್ ಮಾಡಿ, ಅವರನ್ನು ಕರೆಸಿದಾಗ ಆ ಮಹಾ ತಪ್ಪಿತಸ್ಥನಿಂದ ಕ್ಷಮೆ ಕೇಳಿಸಿಕೊಂಡರೂ, ನಮ್ಮ ಮನೆಗೆ ಬಂದ ಸೊಸೆಯನ್ನು ಏನು ಬೇಕಾದರೂ ಮಾಡುತ್ತೇವೆ, ಅದು ನಮ್ಮ ಇಷ್ಟ ಎಂದು ಹೇಳುವ ದಾರ್ಷ್ಟ್ಯವನ್ನು ಆ ಪದವೀಧರಳಾದ ತಾಯಿ ತೋರಿದ್ದಳು. ಇಂತಹ ಕೇಸುಗಳಲ್ಲಿ ಹೆಣ್ಣೇ ಹೆಣ್ಣನ್ನು ಅರ್ಥ ಮಾಡಿಕೊಳ್ಳದಿರುವುದು, ಮತ್ತೊಬ್ಬರ ಮನೆಗೆ ಹೊಸದಾಗಿ ಬಂದ ಹೆಣ್ಣಿನ ಮನಸ್ಥಿತಿ ಅರ್ಥ ಮಾಡಿಕೊಳ್ಳದಿರುವುದು ದುರಂತ. ತಾನೂ ಒಮ್ಮೆ ನವ ವಧುವಾಗೇ ಬಂದದ್ದು ಎಂಬುದನ್ನು ಮರೆತೇ ಬಿಡುವುದು ತೀರಾ ಶೋಚನೀಯವೇ ಹೌದು.

ಜಗತ್ತಿನ ಯಾವುದೇ ಮುಂದುವರೆದ ದೇಶ ಎಂದು ತಮ್ಮನ್ನು ತಾವು ಕರೆದುಕೊಳ್ಳುವ ದೇಶಗಳ ಕತೆಯೂ ಇದೇ. ಹೆಂಡತಿಯರನ್ನು ಹೊಡೆಯುವ, ಬಡಿಯುವ ಗಂಡಂದಿರು ಎಲ್ಲ ಕಾಲ, ದೇಶಗಳಲ್ಲೂ ಕಾಣಸಿಗುತ್ತಾರೆ. ಇಂತಹವು ಸಂಭವಿಸಲು ಕೇವಲ ದೈಹಿಕ ದಾರ್ಢ್ಯತೆ ಅಥವಾ ಮಾನಸಿಕ ಅಸ್ವಸ್ಥತೆ, ಕೀಳರಿಮೆಗಳೇ ಕಾರಣ ಇರಬಹುದು ಎಂದು ಅನ್ನಿಸುತ್ತದೆ. ಆದರೆ ಹೆಣ್ಣು ಇಂತಹ ಹಿಂಸೆಗಳನ್ನು ತಾಳಿಕೊಳ್ಳುವುದೂ ಕಾರಣ ಆಗಬಹುದು. ಪುರುಷನಿಗೆ ಎದುರು ನಿಲ್ಲುವ ಶಕ್ತಿಯ, ಮಾನಸಿಕ ಸಿದ್ಧತೆಯ, ತಿಳುವಳಿಕೆಯ ಕೊರತೆ ಹೆಣ್ಣಿನಲ್ಲಿ ಇದ್ದಾಗಲೂ ಇಂಥವು ಸಂಭವಿಸಬಹುದು.

ಇಂದು ಅಕ್ಷರಶಃ ಎಲ್ಲ ರಂಗಗಳಲ್ಲೂ ಗಂಡಿಗೆ ಸಮ–ಸಮ ನಾಗಿ ಹೆಜ್ಜೆ ಹಾಕುತ್ತಿರುವ ಹೆಣ್ಣುಗಳನ್ನು ನೋಡುತ್ತಿದ್ದೂ ಮನೆ, ಮಕ್ಕಳು ಮತ್ತು ತನ್ನ ಉದ್ಯೋಗ ಮೂರನ್ನೂ ಸಂಭಾಳಿಸುತ್ತಿರುವ ಅವಳ ಜವಾಬ್ದಾರಿ ಗಂಡಿಗಿಂತಾ ಹೆಚ್ಚಿನದೇ ಎಂಬುದರಲ್ಲಿ ಸಂದೇಹವಿಲ್ಲ. ಗಗನ ಯಾತ್ರಿಕರಿಂದ ಹಿಡಿದು ವಿಜ್ಞಾನ, ವೈದ್ಯಕೀಯ, ಇಂಜಿನಿಯರಿಂಗ್, ಪತ್ರಿಕೋದ್ಯಮ, ಡ್ರೈವರ್, ಕಂಡಕ್ಟರ್‌ವರೆಗೆ ಎಲ್ಲಾ ಕ್ಷೇತ್ರಗಳಲ್ಲೂ ಇಂದು ಸ್ತ್ರೀಯರನ್ನು ಕಾಣ ಬಹುದು. ಇಂದಿನ ಮಹಿಳೆಯ ಕ್ಷಮತೆ, ಪ್ರತಿಭೆ, ಎಲ್ಲಕಿಂತ ಹೆಚ್ಚಾಗಿ ಅವಳ ಆತ್ಮಸ್ಥೈರ್ಯ ಕಂಡಾಗ ಬಹಳ ಸಂತೋಷ ಆಗುತ್ತದೆ.

> “ ಇಂದು ಅಕ್ಷರಶಃ ಎಲ್ಲ ರಂಗಗಳಲ್ಲೂ ಗಂಡಿಗೆ ಸಮ–ಸಮನಾಗಿ ಹೆಜ್ಜೆ ಹಾಕುತ್ತಿರುವ ಹೆಣ್ಣುಗಳನ್ನು ನೋಡುತ್ತಿದ್ದೂ ಮನೆ, ಮಕ್ಕಳು ಮತ್ತು ತನ್ನ ಉದ್ಯೋಗ ಮೂರನ್ನೂ ಸಂಭಾಳಿಸುತ್ತಿರುವ ಅವಳ ಜವಾಬ್ದಾರಿ ಗಂಡಿಗಿಂತಾ ಹೆಚ್ಚಿನದೇ ಎಂಬುದರಲ್ಲಿ ಸಂದೇಹವಿಲ್ಲ. ಗಗನ ಯಾತ್ರಿಕರಿಂದ ಹಿಡಿದು ವಿಜ್ಞಾನ, ವೈದ್ಯಕೀಯ, ಇಂಜಿನಿಯರಿಂಗ್, ಪತ್ರಿಕೋದ್ಯಮ, ಡ್ರೈವರ್, ಕಂಡಕ್ಟರವರೆಗೆ ಎಲ್ಲಾ ಕ್ಷೇತ್ರಗಳಲ್ಲೂ ಇಂದು ಸ್ತ್ರೀಯರನ್ನು ಕಾಣಬಹುದು. ಇಂದಿನ ಮಹಿಳೆಯ ಕ್ಷಮತೆ, ಪ್ರತಿಭೆ, ಎಲ್ಲಕಿಂತ ಹೆಚ್ಚಾಗಿ ಅವಳ ಆತ್ಮಸ್ಥೈರ್ಯ ಕಂಡಾಗ ಬಹಳ ಸಂತೋಷ ಆಗುತ್ತದೆ.




ಸಂಗೀತ ಕ್ಷೇತ್ರದಲ್ಲೂ ರಾಗ–ತಾನ–ಪಲ್ಲವಿಗಳನ್ನು ಹೆಂಗಸರು ಹಾಡುವಂತಿರದಿದ್ದ ಕಾಲ ಒಂದಿತ್ತು. ಡಿ.ಕೆ.ಪಟ್ಟಮ್ಮಾಳ್, ಎಂ.ಎಸ್. ಸುಬ್ಬಲಕ್ಷ್ಮಿ, ಎಂ.ಎಲ್.ವಸಂತಕುಮಾರಿ ಮುಂತಾದ ವಿದುಷಿಯರು ಆ ಕ್ಷೇತ್ರಕ್ಕೆ ಧೈರ್ಯವಾಗಿ ಲಗ್ಗೆ ಇಟ್ಟಿದ್ದರಿಂದ ಇಂದು ಅಂತಹ ನಿರ್ಬಂಧಗಳು ಎಲ್ಲೋ ಮೂಲೆಯಲ್ಲಿ ಅಡಗಿಕೊಂಡು ಕೂತಿವೆ.

ಉತ್ತಮ ಕುಲದವರು ಕನಸಿನಲ್ಲೂ ತಮ್ಮ ಹೆಣ್ಣುಮಕ್ಕಳು ನರ್ತಿಸುವುದನ್ನು ಊಹಿಸಲೂ ಆಗದಿದ್ದ ಕಾಲದಲ್ಲಿ ಅದನ್ನು ತಮ್ಮ ಮೂವತ್ತನೆಯ ವಯಸ್ಸಿನಲ್ಲಿ ಕಲಿತು, ಅದರ ಮುಕ್ತ ಪ್ರವೇಶಕ್ಕೆ ದಾರಿ ಮಾಡಿಕೊಟ್ಟ ರುಕ್ಮಿಣಿ ಅರುಂಡೇಲ್ ಅವರು ಅಂದು ಆ ದೃಢ ಹೆಜ್ಜೆ ಇಡದಿದ್ದಲ್ಲಿ, ಇಂದು ಭರತನಾಟ್ಯ ಕ್ಷೇತ್ರದಲ್ಲಿ ಅಸಂಖ್ಯ ಹೆಣ್ಣುಮಕ್ಕಳು ತಮ್ಮನ್ನು ತೊಡಗಿಸಿಕೊಂಡು, ಉತ್ತಮ ನರ್ತಕಿಯರಾಗುವ ಕನಸನ್ನು ಕಾಣಲಾಗುತ್ತಿರಲಿಲ್ಲ.

ಇಂತಹ ಯಾವ ವಿಶೇಷ ಪ್ರತಿಭೆ ಇಲ್ಲದಿದ್ದರೂ ಸುಶಿಕ್ಷಿತರಲ್ಲದ ಹೆಣ್ಣುಗಳು ತಮ್ಮ ಸ್ವಾಭಿಮಾನದಿಂದ ತಾವು ಸಂಸಾರಕ್ಕೆ ಹೊರೆ ಆಗಬಾರದು ಎಂಬ ದೃಷ್ಟಿಯಿಂದ, ತಮ್ಮಿಂದ ನಾಕು ಕಾಸು ಸಹಾಯ ಆಗಲಿ ಎಂಬ ಕಾರಣಕ್ಕಾಗಿ ಎಪ್ಪತ್ತೈದರ ಇಳಿವಯಸ್ಸಿನಲ್ಲೂ ಯಾವುದಾದರೂ ಒಂದು ಉದ್ಯೋಗಕ್ಕೆ ಆತುಕೊಂಡಿರುವುದನ್ನು ನೋಡಿದಾಗ ನನ್ನ ಮನಸ್ಸು ಹೆಮ್ಮೆಯಿಂದ ಬೀಗುತ್ತದೆ.

ಮೈಸೂರಿನ ಒಂಟಿಕೊಪ್ಪಲಿನ ಲಾಯಲ್ ವರ್ಲ್ಡ್ ಪಕ್ಕದಲ್ಲಿ ಬೆಳಗಿನಿಂದ ಸಂಜೆವರೆಗೆ ಇದ್ದಲಿನ ಹಳೆ ಮಾದರಿಯ ಇಸ್ತ್ರಿಪೆಟ್ಟಿಗೆಯಲ್ಲಿ ಇಸ್ತ್ರಿ ಮಾಡುತ್ತಾ ನಿಂತಿರುವ, ಆಯಾಸವಾದರೆ, ಅಲ್ಲೇ ಕುಳಿತು ಕಾಲುಚಾಚಿ ಸುಧಾರಿಸಿಕೊಳ್ಳುವ ಜಯಮ್ಮನನ್ನು ಎಷ್ಟೋ ಬಾರಿ ನೀವು ನೋಡಿರಬಹುದು. ಮಗ, ಸೊಸೆ ಅವರನ್ನು ಚೆನ್ನಾಗಿಯೇ ನೋಡಿಕೊಂಡರೂ ಅವರು ಈ ವಯಸ್ಸಿನಲ್ಲಿ ಏಕೆ ದುಡಿಯಬೇಕು ಎಂದು ಕೇಳಿ ನೋಡಿ. ತನ್ನ ಔಷಧಿಯ ಖರ್ಚನ್ನು ಮಗನ ಮೇಲೆ ಹಾಕಲು ಇಷ್ಟಪಡದೆ ಈ ಕೆಲಸವನ್ನು ಮಾಡುತ್ತಿದ್ದೇನೆಂಬ ಉತ್ತರ ನಿಮಗೆ ದೊರೆಯುತ್ತದೆ.

ಅಲ್ಲೇ ಒಂದು ಬೃಹತ್ ಅಪಾರ್ಟಮೆಂಟಿನಲ್ಲಿ ಹಲವಾರು ಮನೆಗಳಲ್ಲಿ ಮನೆಗೆಲಸ ಮಾಡುವ ಮತ್ತೊಬ್ಬ ಜಯಮ್ಮನಿಗೆ ಇಬ್ಬರು ಗಂಡು ಮಕ್ಕಳು, ಒಂದು ಹೆಣ್ಣು. ಮೂವರು ಮಕ್ಕಳಿಗೂ



ಮದುವೆ ಮಾಡಿದ್ದಾಳೆ. ಹಿರಿ ಮಗನ ಹೆಂಡತಿ ತೀರಿಕೊಂಡಿರುವುದಲ್ಲದೆ ಅವನಿಗೆ ತೀವ್ರ ಸಕ್ಕರೆ ಖಾಯಿಲೆ. ಅವನೋ ಕೆಲಸ ಸಿಕ್ಕಾಗ ಪೇಂಟ್ ಹೊಡೆಯುತ್ತಾನೆ. ಇರದಿದ್ದಾಗ ಮನೆಯಲ್ಲೇ ಮಲಗಿರುತ್ತಾನೆ. ಅವನ ಸಲುವಾಗಿ ಈ ಮಾತೃಹೃದಯ ಮಿಡಿಯುತ್ತದೆ.

ಅದಕ್ಕಾಗಿ ಈ ಎಪ್ಪತ್ತರ ವಯೋವೃದ್ಧೆ ಮನೆ ಮನೆಯಲ್ಲಿ ಕಸ ಗುಡಿಸಿ, ಪಾತ್ರೆ ತೊಳೆಯುತ್ತಾಳೆ. ಅವಳ ಗಂಡ ಬದುಕಿದ್ದಾಗ ತರಕಾರಿ ಮಾರುತ್ತಿದ್ದ ಈಕೆ, ಈಗ ಈ ಉದ್ಯೋಗ ಮಾಡುತ್ತಾಳೆ. ಮತ್ತೊಬ್ಬ ಮಗ ಸೊಸೆ, ಇವನನ್ನು ಎಲ್ಲಿ ತುಚ್ಛವಾಗಿ ನೋಡುತ್ತಾರೋ ಎಂಬ ಆತಂಕ ಆಕೆಗೆ. ಅದು ಆಗದಿರಲು, ಅವನಿಗಾಗಿ ಈ ದುಡಿತ. ಅವನ ಔಷಧಿ, ಆಸ್ಪತ್ರೆ ಇತ್ಯಾದಿ ಖರ್ಚುಗಳಿಗೆ ಅವಳೇ ಹೊಣೆ. ಹೀಗೆ ತಮ್ಮ ಸ್ವಾಭಿಮಾನ ಮೆರೆವ ಹೆಣ್ಣುಗಳ ಬಗ್ಗೆ ಯಾರಿಗೆ ತಾನೆ ಸಂತೋಷ ಆಗುವುದಿಲ್ಲ ಹೇಳಿ. ಎಲ್ಲಿ ನಾರಿಯರು ಪೂಜಿಸಲ್ಪಡುತ್ತಾರೋ ಅಲ್ಲಿ ದೇವತೆಗಳು ರಮಿಸುತ್ತಾರೆ.

ಪೈಪ್‌ಲೈನ್ ಅಳವಡಿಸಲು ಅಗೆದ ರಸ್ತೆ ಸರಿಯಾಗಿ ಮುಚ್ಚದೆ ಸವಾರರ ಪರದಾಟ

ಮೈಸೂರು: ಮೈಸೂರಿನ ಶ್ರೀರಾಂಪುರ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಹಲವು ಬಡಾವಣೆಗಳಲ್ಲಿ ಹದಗೆಟ್ಟ ರಸ್ತೆಗಳಿಂದ ವಾಹನ ಸವಾರರು ಹೈರಾಣಾಗಿದ್ದಾರೆ.

ಶ್ರೀರಾಂಪುರ ಪಟ್ಟಣ ಪಂಚಾಯಿತಿ ವ್ಯಾಪ್ತಿಯ ಚಾಮುಂಡೇಶ್ವರಿ ಬಡಾವಣೆ, ಶಿವಪುರ ಬಡಾವಣೆಗಳ ರಸ್ತೆಗಳಲ್ಲಿ ಪೈಪ್‌ಲೈನ್ ಅಳವಡಿಸಲು ರಸ್ತೆಗಳನ್ನು ಅಗೆಯಲಾಗಿದ್ದು, ಕಾಮಗಾರಿ ವಿಳಂಬದಿಂದ ಅಗೆದ ಗುಂಡಿಗಳು ಹಾಗೆಯೇ ಉಳಿದಿವೆ. ಗುಂಡಿಬಿದ್ದ ರಸ್ತೆಗಳಲ್ಲಿ ಸಂಚರಿಸಲು ವಾಹನ ಸವಾರರು ಪರದಾಡುವಂತಹಾ ದುಸ್ಥಿತಿ ನಿರ್ಮಾಣವಾಗಿದೆ.





ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಬಡಾವಣೆಯ ನಿವಾಸಿಗಳು ಆಕ್ರೋಶ ವ್ಯಕ್ತಪಡಿಸಿದ್ದಾರೆ. ರಸ್ತೆ ದುರಸ್ಥಿ ಕಾಮಗಾರಿಗೆಂದು ರಾಶಿ ರಾಶಿ ಮಣ್ಣನ್ನು ರಸ್ತೆಗಳಲ್ಲಿ ಸುರಿಯಲಾಗಿದೆ. ಪೈಪ್ ಲೈನ್ ಅಳವಡಿಕೆಗೆಂದು ಅಗೆದ ರಸ್ತೆಗಳು ಗುಂಡಿ ಬಿದ್ದಿವೆ. ಇದರಿಂದ ರಸ್ತೆಗಳಲ್ಲಿ ಶಾಲಾ ವಾಹನಗಳು, ದ್ವಿಚಕ್ರ ವಾಹನಗಳು, ಸಾರ್ವಜನಿಕರು, ಹಿರಿಯ ನಾಗರಿಕರು ಸಂಚರಿಸಲು ಪರದಾಡುವಂತಾಗಿದೆ. ರಸ್ತೆಗಳಲ್ಲಿ ಬೀದಿದೀಪಗಳು ಇಲ್ಲದೇ ಇರುವುದರಿಂದ ರಾತ್ರಿ ಸಂದರ್ಭದಲ್ಲಿ ಸಂಚಾರ ಮಾಡುವಾಗ ಅಪಘಾತಗಳು ಉಂಟಾಗುತ್ತಿವೆ ಎಂದು ಸ್ಥಳೀಯರು ತಮ್ಮ ಅಳಲನ್ನು ತೋಡಿಕೊಂಡಿದ್ದಾರೆ.

ಅರ್ಜಿ ಆಹ್ವಾನ

ಮೈಸೂರು: ಶ್ರೀಲಂಕಾ–ಭಾರತ ಯುವ ವಿನಿಮಯ ಕಾರ್ಯಕ್ರಮದಡಿ ಭಾರತವನ್ನು ಪ್ರತಿನಿಧಿಸಲು ಅರ್ಜಿ ಆಹ್ವಾನಿಸಲಾಗಿದೆ. ಇಂಡಿಯನ್ ಫೌಂಡೇಷನ್ ಫಾರ್ ಗ್ಲೋಬಲ್ ಪೀಸ್, ದ ನ್ಯಾಷನಲ್ ಯೂತ್ ಸರ್ವಿಸ್ ಕೌನ್ಸಿಲ್ ಮತ್ತು ಯುವಜನ ಸೇವಾ ವ್ಯವಹಾರಗಳ ಸಚಿವಾಲಯ ಶ್ರೀಲಂಕಾ ನಡುವಿನ ಒಪ್ಪಂದದಂತೆ ಮಾ.7ರಿಂದ 13ರವರೆಗೆ ನಡೆಯುವ ಯುವ ವಿನಿಮಯ ಕಾರ್ಯಕ್ರಮದಡಿ 15ಮಂದಿ ಯುವಕ, ಯುವತಿಯರನ್ನು ಶ್ರೀಲಂಕಾಗೆ ಆಹ್ವಾನಿಸಿದ್ದು, ವಿಶೇಷ ಪ್ರತಿಭೆ ಹೊಂದಿರುವ 18ರಿಂದ 28 ವರ್ಷದೊಳಗಿನವರು ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ 94489 88746, 6362147286 ಸಂಪರ್ಕಿಸಬಹುದು.

ಅಧಿಕಾರಿಗಳ ಕಾಮಗಾರಿ ಪರಿಗೆ ಪರಿತಪಿಸುತ್ತಿರುವ ಪ್ರವಾಸಿಗರು!





ಮೈಸೂರು ಅರಮನೆಯ ವೀಕ್ಷಣೆಗೆ ಟಿಕೆಟ್ ಪಡೆದು ಪ್ರವೇಶ ಪಡೆಯುವ ವರಾಹ ಗೇಟ್ ಎದುರು ಜಲ್ಲಿಕಲ್ಲು ಹರಡಿ, ನಿತ್ಯವೂ ಪ್ರವಾಸಿಗರು ಪರದಾಡುವಂತಾಗಿದೆ.

ಮೈಸೂರು,ಜ.31(ಎಂಕೆ)–ಮೈಸೂರಿನ ಮುಖ್ಯ ಆಕರ್ಷಣೆಯಾದ ಭವ್ಯ ಅಂಬಾ ವಿಲಾಸ ಅರಮನೆ ವೀಕ್ಷಣೆಗೆ ಆಗಮಿಸುವ ಸಹಸ್ರಾರು ಪ್ರವಾಸಿಗರಿಗೆ ಒಂದು ರೀತಿ ಪ್ರಾಣ ಸಂಕಟ ಎದುರಾಗಿದೆ...!

ಇದು ಅಂತಿಂಥಾ ಸಂಕಟವಲ್ಲ... ಜೀವವನ್ನೇ ಹಿಂಡುವ, ಸಂಭ್ರಮವನ್ನೇ ಕಸಿದುಕೊಳ್ಳುವ ಸಂಕಟ. ಅರಮನೆಯ ವೀಕ್ಷಣೆಗೆ ಟಿಕೆಟ್ ಪಡೆದು ಪ್ರವೇಶ ಪಡೆಯುವ ವರಾಹ ಗೇಟ್ ಎದುರು ಅಭಿವೃದ್ಧಿ ಹೆಸರಿನಲ್ಲಿ ಜಲ್ಲಿಕಲ್ಲು ಹರಡಿ, ಪ್ರವಾಸಿಗರು ಪರದಾಡುವಂತೆ ಮಾಡಲಾಗಿದೆ.

ವರಹಾ ಗೇಟ್ ಬಳಿ ಇದ್ದಂತಹ ಅನಧಿಕೃತ ಅಂಗಡಿ–ಮುಂಗಟ್ಟುಗಳನ್ನು ತೆರವುಗೊಳಿಸಿ, ರಸ್ತೆ ಅಭಿವೃದ್ಧಿ ಮಾಡುವ ಉದ್ದೇಶದಿಂದ ಜಲ್ಲಿ ತಂದು ಹರಡಿ ತಿಂಗಳಾದರೂ ಸಮತಟ್ಟು ಮಾಡಿ, ಟೈಲ್ ಅಥವಾ ಡಾಂಬರ್ ಹಾಕಿ ಪ್ರವಾಸಿಗರು ನಡೆದಾಡುವುದಕ್ಕೆ ಅನುಕೂಲ ಮಾಡಿಕೊಡುವ ಕನಿಷ್ಠ ಮನಸ್ಥಿತಿಯು ಸಂಬಂಧಪಟ್ಟ ಅಧಿಕಾರಿ–ಸಿಬ್ಬಂದಿಗೆ ಇಲ್ಲವಾಗಿದೆ.

ನೆಚ್ಚಿನ ಪ್ರವಾಸಿ ತಾಣ ವೀಕ್ಷಣೆಗೆ ಪ್ರತಿನಿತ್ಯ ಆಗಮಿಸುವ ಪ್ರವಾಸಿಗರ ಅಧಿಕಾರಿ ವರ್ಗದ ಅಸಡ್ಡೆ ಮನಸ್ಥಿತಿಯಿಂದ ಜಲ್ಲಿ ಕಲ್ಲಿನ ನಡುವೆ ಹೆಜ್ಜೆ ಇಡುತ್ತಾ ಕಷ್ಟಪಟ್ಟು ತಿರುಗಾಡುವಂತಾಗಿದೆ. ಹೆಂಗಸರು, ಮಕ್ಕಳು ಮತ್ತು ವಯಸ್ಸಾದವರ ಪಾಡಂತೂ ಹೇಳತೀರದಾಗಿದ್ದು, ದೈಹಿಕ ಮತ್ತು ಮಾನಸಿಕವಾಗಿ ಸಂಕಟ ಅನುಭವಿಸುವಂತಾಗಿದೆ.

ತಿಂಗಳಿಂದಲೂ ಜಲ್ಲಿ ಕಲ್ಲಿನ ಮೇಲೇ ತಿರುಗಾಡುತ್ತಿರುವ ಪ್ರವಾಸಿಗರು, ಮೈಸೂರು ಅರಮನೆ ಮುಖ್ಯ ದ್ವಾರದ ರಸ್ತೆ ಎಷ್ಟೊಂದು ಕೆಟ್ಟದಾಗಿದೆ. ಪ್ರವಾಸಿ ತಾಣಕ್ಕೆ ಇದೆಂತಹ ಹೀನಾಯ ಪರಿಸ್ಥಿತಿ ಬಂದಿದೆ ಎಂದು ಗೊಣಗುತ್ತಾ ಮೈಸೂರಿನ ಮರ್ಯಾದೆ ಹರಾಜು ಹಾಕುತ್ತಿದ್ದಾರೆ.

ಅನಾವಶ್ಯಕ ಕಾಮಗಾರಿಗಳು ತ್ವರಿತವಾಗಿ ಪೂರ್ಣಗೊಳಿಸುವ ಮೈಸೂರು ಪಾಲಿಕೆ ಹಾಗೂ ಅರಮನೆ ಮಂಡಳಿ ಅಧಿಕಾರಿಗಳು ಅತೀ ಮುಖ್ಯವಾದ ರಸ್ತೆಯನ್ನು ಅಭಿವೃದ್ಧಿ ಹೆಸರಲ್ಲಿ ಹಾಳು ಮಾಡಿ, ಕಾಲಹರಣ ಮಾಡುತ್ತಿರುವುದಾದರೂ ಏಕೆ ಎಂದು ಮೈಸೂರಿನ ಪ್ರಜ್ಞಾವಂತ ನಾಗರಿಕರು ಪ್ರಶ್ನಿಸಿದ್ದು, ಅಧಿಕಾರಿಗಳ ಬೇಜವಾಬ್ದಾರಿ ವರ್ತನೆಗೆ ಛೀಮಾರಿ ಹಾಕುತ್ತಿದ್ದಾರೆ.

ಲಕ್ಷಾಂತರ ಪ್ರವಾಸಿಗರು ಭೇಟಿ ನೀಡುವ ಮೈಸೂರು ಅರಮನೆ ಬಳಿಯೇ ಈ ಪರಿಸ್ಥಿತಿ ಆದರೆ ಮೈಸೂರಿನ ಇನ್ನಿತರೆ ಪ್ರವಾಸಿ ತಾಣಗಳ ಪರಿಸ್ಥಿತಿ ಹೇಗಿರಬಹುದು. ವಿಶ್ವವಿಖ್ಯಾತಿ ಪಡೆದಿರುವ ಮೈಸೂರಿನ ಮರ್ಯಾದೆಯನ್ನು ಅಧಿಕಾರಿಗಳೇ ಹರಾಜಾಕುತ್ತಿದ್ದಾರೆ. ಇದೇ ರೀತಿಯಾದರೆ ಮೈಸೂರು ಪ್ರವಾಸೋದ್ಯಮ ಪಾತಾಳಕ್ಕೆ ಕುಸಿಯಲಿದೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಕರ್ನಾಟಕ ರಾಜ್ಯ ಮುಕ್ತ ವಿವಿ ಘಟಿಕೋತ್ಸವದಲ್ಲಿ ಎಂಟು ಮಂದಿಗೆ ಗೌರವ ಡಾಕ್ಟರೇಟ್, 68 ಸಂಶೋಧಕರಿಗೆ ಪಿಹೆಚ್.ಡಿ, 10 ಸಾವಿರಕ್ಕೂ ಹೆಚ್ಚು ಅಭ್ಯರ್ಥಿಗಳಿಗೆ ವಿವಿಧ ಪದವಿ ಪ್ರದಾನ

● ದಶಕದಿಂದ 30 ಸಾವಿರ ಅಭ್ಯರ್ಥಿಗಳಿಗೂ ಪ್ರಮಾಣ ಪತ್ರ ● ಉದ್ಯಮಶೀಲತೆ, ಕೌಶಲ್ಯಾಭಿವೃದ್ಧಿಗೆ ಆದ್ಯತೆ ನೀಡಲು ರಾಜ್ಯಪಾಲರ ಸಲಹೆ

ಮೈಸೂರು,ಜ.31(ಎಂಟಿವೈ)– ಸ್ವಾವಲಂಬಿ ಮತ್ತು ಅಭಿವೃದ್ಧಿ ಹಾದಿಯಲ್ಲಿರುವ ಭಾರತದಲ್ಲಿ ನಾವೀನ್ಯತೆ, ಉದ್ಯಮಶೀಲತೆ ಮತ್ತು ಕೌಶಲ್ಯಾಭಿವೃದ್ಧಿಗೆ ಆದ್ಯತೆ ನೀಡಬೇಕಾಗಿದೆ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹಲೋಟ್ ಹೇಳಿದರು.

ಮೈಸೂರಿನ ಮುಕ್ತ ಗಂಗೋತ್ರಿಯಲ್ಲಿರುವ ಘಟಿಕೋತ್ಸವ ಭವನದಲ್ಲಿ ಶನಿವಾರ ನಡೆದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 21ನೇ ಘಟಿಕೋತ್ಸವದಲ್ಲಿ ವಿವಿಧ ಪದವಿ ಪ್ರದಾನ ಮಾಡಿದ ಬಳಿಕ ಮಾತನಾಡಿದ ಅವರು, ನವೋದ್ಯಮ ಸಂಸ್ಕೃತಿ, ಗ್ರಾಮೀಣ ಉದ್ಯಮಶೀಲತೆ, ಸಾಮಾಜಿಕ ಉದ್ಯಮ ಸೇರಿದಂತೆ ಹಲವು ಕ್ಷೇತ್ರಗಳು ವಿಫುಲ ಅವಕಾಶ ಸೃಷ್ಟಿಸಿವೆ ಎಂದರು.

ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಉನ್ನತ ಶಿಕ್ಷಣ ಪಡೆಯಲು ಮುಂದಾಗುವ ಅಭ್ಯರ್ಥಿಗಳಿಗೆ ವಯಸ್ಸಿನ ಮಿತಿ ನಿಗದಿಪಡಿಸಿಲ್ಲ. ಕೆಲವರು ವಿವಿಧ ಉದ್ಯೋಗದಲ್ಲಿದ್ದುಕೊಂಡೇ ಉನ್ನತ ಶಿಕ್ಷಣ ಪಡೆದರೆ, ಮತ್ತೆ ಕೆಲವರು ಸಾಂಸಾರಿಕ ಜೀವನದ ನಡುವೆಯೂ ಉನ್ನತ ಶಿಕ್ಷಣ ಪಡೆದಿದ್ದಾರೆ. ಕಲಿಕಾ ಪ್ರಕ್ರಿಯೆ ನಿರಂತರವಾಗಿದ್ದು, ಇದಕ್ಕೆ ವಯಸ್ಸು ಎಂದಿಗೂ ಅಡ್ಡಿಯಾಗದು ಎಂದು ಹೇಳಿದರು.

ವಿವಿಧ ಪದವಿ ಪಡೆದವರು ತಮ್ಮ ವೈಯಕ್ತಿಕ ಜೀವನದ ಏಳಿಗೆ ಜೊತೆಗೆ ದೇಶದ ಅಭಿವೃದ್ಧಿಗೂ ಶ್ರಮಿಸಬೇಕು. ಶಿಕ್ಷಣ ಮತ್ತು ಜ್ಞಾನವನ್ನು ವೈಯಕ್ತಿಕ ಸಾಧನೆಗಾಗಿ ಮಾತ್ರವಲ್ಲದೆ ರಾಷ್ಟ್ರ, ಸಮಾಜದ ಕಲ್ಯಾಣಕ್ಕಾಗಿಯೂ ಬಳಸಬೇಕು. ದೂರ ಶಿಕ್ಷಣ ಪೂರ್ಣಗೊಳಿಸಿದ ವಿದ್ಯಾರ್ಥಿಗಳು ಕೃತಕ ಬುದ್ಧಿಮತ್ತೆ ಡಿಜಿಟಲ್ ಕ್ರಾಂತಿ ಮತ್ತು ಹಸಿರು ತಂತ್ರಜ್ಞಾನ ಸೇರಿದಂತೆ ಜೀವನ ಮತ್ತು ಉದ್ಯೋಗವನ್ನು ಪರಿವರ್ತಿಸುವ ವಿಚಾರಗಳ ಬಗ್ಗೆ ಜ್ಞಾನ ವೃದ್ಧಿಸಿಕೊಳ್ಳಬೇಕು. ನಿರಂತರ ಕಲಿಕೆಯ ಮನೋಭಾವ ಅಳವಡಿಸಿಕೊಂಡು ರಾಷ್ಟ್ರ ನಿರ್ಮಾಣದಲ್ಲಿ ಸಕ್ರಿಯ ಪಾತ್ರ ವಹಿಸಬೇಕು ಎಂದು ಕಿವಿಮಾತು ಹೇಳಿದರು.

ದೂರ ಶಿಕ್ಷಣ ವ್ಯವಸ್ಥೆಯು ಇದೀಗ ಡಿಜಿಟಲ್ ವೇದಿಕೆಗಳ ಮೂಲಕ ಹೆಚ್ಚು ಪರಿಣಾಮಕಾರಿಯಾಗುತ್ತಿದೆ. ಭವಿಷ್ಯದಲ್ಲಿ ಕೌಶಲ ಆಧಾರಿತ ಕೋರ್ಸ್‌ಗಳು, ಉದ್ಯೋಗ–ಆಧಾರಿತ ತರಬೇತಿ ಮತ್ತು ಸಂಶೋಧನೆಯನ್ನು ಮತ್ತಷ್ಟು ಬಲಪಡಿಸಬೇಕು ಎಂದು ಇದೇ ವೇಳೆ ಸಲಹೆ ನೀಡಿದರು.

ವಿದೇಶಿ ವಿವಿಗಳೊಂದಿಗೆ ಒಡಂಬಡಿಕೆ: ಇದಕ್ಕೂ ಮುನ್ನ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಮಾತನಾಡಿ, ಜಾಗತಿಕ ಶೈಕ್ಷಣಿಕ ಏಕೀಕರಣದ ಅನ್ವೇಷಣೆಯಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಫ್ರಾನ್ಸ್, ರಷ್ಯಾದ ಪ್ರಮುಖ ಅಂತಾರಾಷ್ಟ್ರೀಯ ವಿಶ್ವವಿದ್ಯಾಲಯಗಳೊಂದಿಗೆ ಒಡಂಬಡಿಕೆ ಮಾಡಿಕೊಂಡಿದೆ. ಇದರಿಂದ ಸಂಶೋಧನೆ, ಅಧ್ಯಾಪಕರ ವಿನಿಮಯಕ್ಕೆ ಸಹಕಾರಿಯಾಗಿದೆ. ಶೈಕ್ಷಣಿಕ ಬೆಳವಣಿಗೆಗೆ ಅನುದಾನವನ್ನೂ ನೀಡಿದ್ದು, ಹಜ್ ಭವನದಲ್ಲಿರುವ ವಿವಿಯ ಅಲ್ಪಸಂಖ್ಯಾತರ ಪ್ರಾದೇಶಿಕ ಕೇಂದ್ರಕ್ಕೆ 10 ಕೋಟಿ ರೂ., ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ 9.5 ಕೋಟಿ ರೂ., ಬೀದರ್ ಕೇಂದ್ರಕ್ಕೆ 3 ಕೋಟಿ ರೂ. ಮಂಜೂರು ಮಾಡಲಾಗಿದೆ ಎಂದು ತಿಳಿಸಿದರು.

ಮುಕ್ತ ವಿವಿಯಲ್ಲಿ 80 ಶೈಕ್ಷಣಿಕ ಕಾರ್ಯಕ್ರಮಗಳು, 10 ಆನ್‌ಲೈನ್ ಕೋರ್ಸ್‌ಗಳನ್ನು ನಡೆಸಲಾಗುತ್ತಿದೆ. ವಿದ್ಯಾರ್ಥಿಗಳ ಪ್ರವೇಶಾತಿ ಮೂರು ಪಟ್ಟು ಹೆಚ್ಚಾಗಿದೆ. ವಿದ್ಯಾರ್ಥಿಗಳ ಸಂಖ್ಯೆ 1.5 ಲಕ್ಷ ಮೀರಿದೆ. ರಾಷ್ಟ್ರೀಯ ವೃತ್ತಿಪರ ಶಿಕ್ಷಣ ಮತ್ತು ತರಬೇತಿ ಮಂಡಳಿಯ ನೋಡಲ್ ಏಜೆನ್ಸಿಯಾಗಿದ್ದು, ರಾಷ್ಟ್ರೀಯ ಕೌಶಲ ಅಭಿವೃದ್ಧಿ ನಿಗಮ ಸಹಯೋಗದೊಂದಿಗೆ ಸೆಂಟರ್ ಫಾರ್ ಫ್ಯೂಚರ್ ಸ್ಕಿಲ್ಸ್ ಸ್ಥಾಪಿಸಲಾಗಿದೆ ಎಂದು ಹೇಳಿದರು.

ಸಚಿವರು ಗೈರು: ಘಟಿಕೋತ್ಸವ ಭಾಷಣ ಮಾಡಬೇಕಾಗಿದ್ದ ಕೇಂದ್ರ ಶಿಕ್ಷಣ ಮತ್ತು ಈಶಾನ್ಯ ಪ್ರದೇಶದ ಅಭಿವೃದ್ಧಿ ಖಾತೆಯ ರಾಜ್ಯ ಸಚಿವ ಡಾ.ಸುಕಾಂತ ಮಜುಂದಾರ್ ಗೈರಾಗಿದ್ದರು. ಇವರು ಘಟಿಕೋತ್ಸವಕ್ಕೆ ಶುಭಕೋರಿದ ಎರಡು ನಿಮಿಷದ ಅವರ ವಿಡಿಯೋವನ್ನು ಪ್ರದರ್ಶಿಸಲಾಯಿತು. ಅಲ್ಲದೆ, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಸಹ ಗೈರಾಗಿದ್ದರು. ಕಾರ್ಯಕ್ರಮದಲ್ಲಿ ವಿವಿ ಕುಲಸಚಿವ (ಆಡಳಿತ) ಪ್ರೊ.ಎಸ್.ಕೆ.ನವೀನ್‌ಕುಮಾರ್, ಮೌಲ್ಯಮಾಪನ ಕುಲಸಚಿವ ಡಾ.ಸಿ.ಎಸ್.ಆನಂದ ಕುಮಾರ್, ಡೀನ್(ಶೈಕ್ಷಣಿಕ) ಪ್ರೊ.ಎಂ.ರಾಮನಾಥಂ ನಾಯ್ಡು ಉಪಸ್ಥಿತರಿದ್ದರು.





ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 21ನೇ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಮಾತನಾಡಿದರು. ಮತ್ತೊಂದು ಚಿತ್ರದಲ್ಲಿ ಪಿಹೆಚ್.ಡಿ ಪದವಿ, ಸ್ನಾತಕೋತ್ತರ, ಸ್ನಾತಕ ಪದವಿ ಸ್ವೀಕರಿಸಲು ಆಸೀನರಾಗಿರುವ ಅಭ್ಯರ್ಥಿಗಳನ್ನು ಕಾಣಬಹುದು.

ಮೂರು ಶೈಕ್ಷಣಿಕ ಸಾಲಿನ ಅಭ್ಯರ್ಥಿಗಳಿಗೆ ಪ್ರಮಾಣ ಪತ್ರ

ಇಂದು ನಡೆದ 21ನೇ ಘಟಿಕೋತ್ಸವದಲ್ಲಿ 2023–23ನೇ ಸಾಲಿನ 68 ಮಂದಿಗೆ ಪಿಹೆಚ್‌ಡಿ, 65 ಮಂದಿಗೆ ಚಿನ್ನದ ಪದಕ, 62 ಮಂದಿಗೆ ನಗದು ಬಹುಮಾನ ನೀಡಲಾಯಿತು. ಇವರೊಂದಿಗೆ 3987 ಪುರುಷರು ಹಾಗೂ 6704 ಮಹಿಳಾ ಅಭ್ಯರ್ಥಿಗಳು ಸೇರಿದಂತೆ ಒಟ್ಟು 10,691 ಮಂದಿಗೆ ವಿವಿಧ ಪದವಿ ಹಾಗೂ ಸ್ನಾತಕೋತ್ತರ ಪದವಿ ಪ್ರದಾನ ಮಾಡಲಾಯಿತು. ಅಲ್ಲದೆ, ಯುಜಿಸಿ ಮಾನ್ಯತೆ ರದ್ದತಿಯಿಂದ ಉಂಟಾಗಿದ್ದ ಗೊಂದಲ ನಿವಾರಣೆಯಾದ ಹಿನ್ನೆಲೆಯಲ್ಲಿ 2013–14 ಹಾಗೂ 2014–15ನೇ ಸಾಲಿನ ಪದವಿ ಹಾಗೂ ಸ್ನಾತಕೋತ್ತರ ಪದವಿ ಪರೀಕ್ಷೆಗೆ ಹಾಜರಾಗಿದ್ದ 64,102 ಅಭ್ಯರ್ಥಿಗಳಲ್ಲಿ, ತೇರ್ಗಡೆಯಾಗಿದ್ದ 30,515 ಅಭ್ಯರ್ಥಿಗಳಿಗೂ ಪದವಿ ಪ್ರಮಾಣ ಪತ್ರ ವಿತರಿಸಲಾಯಿತು.

ಪಿಹೆಚ್‌ಡಿ ಪದವಿ ಸ್ವೀಕರಿಸಿದ ಮಾಜಿ ಸಚಿವ ಸಿ.ಟಿ.ರವಿ



ರಾಜ್ಯಪಾಲರಿಂದ ಪಿಹೆಚ್‌ಡಿ ಪದವಿ ಸ್ವೀಕರಿಸಿದ ಮಾಜಿ ಸಚಿವ ಸಿ.ಟಿ.ರವಿ.

ಮಾಜಿ ಸಚಿವ ಸಿ.ಟಿ.ರವಿ ಸೇರಿದಂತೆ ಘಟಿಕೋತ್ಸವದಲ್ಲಿ 68 ಮಂದಿಗೆ ಪಿಹೆಚ್‌ಡಿ ಪದವಿ ಪ್ರದಾನ ಮಾಡಲಾಯಿತು. ಈ ವೇಳೆ ಪತ್ರಕರ್ತರೊಂದಿಗೆ ಮಾತನಾಡಿದ ಸಿ.ಟಿ.ರವಿ, ಈ ಹಿಂದೆ ನಾನು ಎನ್‌ಡಿಎ ಹಾಗೂ ಯುಪಿಎ ನೇತೃತ್ವದ ಸರ್ಕಾರಗಳ ಬಗ್ಗೆ ಸುದೀರ್ಘವಾಗಿ ಅಧ್ಯಯನ ಮಾಡಿ, ಮಂಡಿಸಿದ ಮಹಾಪ್ರಬಂಧಕ್ಕೆ ಪಿಹೆಚ್‌ಡಿ ಪದವಿ ದಕ್ಕಿದೆ. ಮೊದಲಿನಿಂದಲೂ ಓದುವುದು ನನ್ನ ಅಭ್ಯಾಸ. ನಾನು ರಾಜಕೀಯ ಕ್ಷೇತ್ರದಲ್ಲಿ ಇದ್ದೇನೆ. ಆ ಕಾರಣದಿಂದ ಆ ವಿಷಯವನ್ನೇ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದ್ದೆ. ಇದಕ್ಕಾಗಿ ನಾಲ್ಕು ವರ್ಷ ಅಧ್ಯಯನ ಮಾಡಿದ್ದೇನೆ. ಈಗ ಪಿಹೆಚ್‌ಡಿ ಲಭಿಸಿರುವುದು ಸಂತೋಷ ತಂದಿದೆ ಎಂದರು.

ಮಹಿಳಾ ಐಪಿಎಸ್ ಅಧಿಕಾರಿಗೆ ಪಿಹೆಚ್‌ಡಿ ಪದವಿ



'ಮೈಸೂರು ಜಿಲ್ಲಾ ಪೊಲೀಸ್ ಸಾಂಸ್ಕೃತಿಕ ಅಧ್ಯಯನ' ವಿಷಯದಲ್ಲಿ ಪ್ರೊ.ರಂಗಸ್ವಾಮಿ ಅವರ ಮಾರ್ಗದರ್ಶನದಲ್ಲಿ ಅಧ್ಯಯನ ಮಾಡಿ ಪಿಹೆಚ್‌ಡಿ ಪದವಿ ಪಡೆದಿದ್ದೇನೆ. ಪೊಲೀಸ್ ಸೇವೆಗೆ ಸೇರುವ ಮುನ್ನ ಕಾಲೇಜೊಂದರಲ್ಲಿ ಸಹಾಯಕ ಪ್ರಾಧ್ಯಾಪಕಿಯಾಗಿ ಕಾರ್ಯ ನಿರ್ವಹಿಸುತ್ತಿದ್ದೆ. ಆಗಿನಿಂದಲೂ ಪಿಹೆಚ್.ಡಿ ಮಾಡಬೇಕೆಂಬ ಆಸೆ ಇತ್ತು. ಮೈಸೂರಲ್ಲಿ ಡಿಸಿಪಿಯಾಗಿ ಸೇವೆ ಸಲ್ಲಿಸಿದ ಅವಧಿಯಲ್ಲಿ ಅಧ್ಯಯನಕ್ಕೆ ಬೇಕಾದ ವಸ್ತುವಿಷಯವನ್ನು ಸಂಗ್ರಹಿಸಿದ್ದೆ. ಜೊತೆಗೆ 15 ವರ್ಷಗಳ ಸೇವಾನುಭ ನೆರವಾಯಿತು. ಪೊಲೀಸ್ ಇಲಾಖೆಯ ವಿವಿಧ ವಿಭಾಗ, ವಿವಿಧ ಗ್ರಂಥಾಲಯದಲ್ಲೂ ಸಾಕಷ್ಟು ಮಾಹಿತಿ ಸಂಗ್ರಹಿಸಿದ್ದೆ ಆಸೆ ಈಡೇರಿದ್ದು ಖುಷಿ ತುದಿದೆ

-ಗೀತಾ ಪ್ರಸನ್ನ, ಎಸ್ಪಿ ಬೆಂಗಳೂರು ಮೆಟ್ರೋಪಾಲಿಟನ್ ಟಾಸ್ಕ್‌ಫೋರ್ಸ್ (ಬಿಎಂಟಿಎಫ್)

8 ಮಂದಿಗೆ 'ಗೌರವ ಡಾಕ್ಟರೇಟ್' ಪ್ರದಾನ



ವಿವಿಧ ಕ್ಷೇತ್ರದ ಎಂಟು ಮಂದಿಗೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಿದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ವಿವಿಧ ಕ್ಷೇತ್ರದ 8 ಮಂದಿಗೆ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ 'ಗೌರವ ಡಾಕ್ಟರೇಟ್' ಪ್ರದಾನ ಮಾಡಿದರು. ಬೆಂಗಳೂರಿನ ಹರ್ಷ ಸಂಸ್ಥೆಯ ಎಸ್.ಶಿವಕುಮಾರ್, ತುಮಕೂರಿನ ಕಿಡ್ಸ್ ಇಂಟರ್‌ನ್ಯಾಷನಲ್ ಸ್ಕೂಲ್‌ನ ಸಂಸ್ಥಾಪಕ ಸತೀಶ್‌ಕುಮಾರ್ ಡಿ.ಕೆಗ್ಗೆರೆ, ಬ್ರಹ್ಮಕುಮಾರಿ ಈಶ್ವರಿ ವಿಶ್ವವಿದ್ಯಾಲಯದ ಲಕ್ಷ್ಮೀಜಿ, ಮೈಸೂರು ಕೈಗಾರಿಕೆ ಮತ್ತು ವಾಣಿಜ್ಯ ಸಂಘದ ಅಧ್ಯಕ್ಷ ಕೆ.ಬಿ.ಲಿಂಗರಾಜು, ಶ್ರೀ ಯೋಗನರಸಿಂಹಸ್ವಾಮಿ ದೇವಸ್ಥಾನದ ಪ್ರೊ.ಭಾಷ್ಯಂ ಸ್ವಾಮೀಜಿ, ಬೀದರ್ ಐಟಿಐ ಕಾಲೇಜಿನ ನಿವೃತ್ತ ಪ್ರಾಂಶುಪಾಲ ಶಿವಶಂಕರ್ ಟೊಕರೆ, ಹಾಸನದ ಜ್ಯೋತಿಷಿ ಬಿ.ಎಸ್.ನಾಗಭೂಷಣ ಅತ್ರಿ, ನಿವೃತ್ತ ಐಎಎಸ್ ಅಧಿಕಾರಿ ಡಾ.ಸಿ.ಸೋಮಶೇಖರ್ ಅವರು 'ಗೌರವ ಡಾಕ್ಟರೇಟ್' ಪದವಿ ಸ್ವೀಕರಿಸಿದರು. ಪ್ರೊ.ಭಾಷ್ಯಂ ಸ್ವಾಮೀಜಿ 2024ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಗೌರವ ಡಾಕ್ಟರೇಟ್‌ಗೂ ಭಾಜನರಾಗಿದ್ದಾರೆ.

ಕಿರುರಂಗಮಂದಿರದಲ್ಲಿ ಸಂಚಲನ ದಶಮಾನೋತ್ಸವಕ್ಕೆ ಚಾಲನೆ

ಮೈಸೂರು, ಜ.31(ಎಸ್‌ಪಿಎನ್)– ಮೈಸೂರು ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಸಂಚಲನ ಮೈಸೂರು, ಬೆಂಗಳೂರು ಅರಳಿ ಸೇವಾ ಟ್ರಸ್ಟ್ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದೊಂದಿಗೆ ಏರ್ಪಡಿಸಿದ್ದ ಏಳು ದಿನಗಳ 'ಸಂಚಲನ ದಶಮಾನೋತ್ಸವ'ಕ್ಕೆ ಶನಿವಾರ ರಂಗಾಯಣ ಮಾಜಿ ನಿರ್ದೇಶಕ ಎಚ್.ಜನಾರ್ಧನ್(ಜನ್ನಿ) ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಅವರು, ಸಾಹಿತ್ಯ ಮತ್ತು ಕಲೆ ಪ್ರಭುದ್ದವಾಗಿದ್ದ ಜಾಗದಲ್ಲಿ ಸಮಾಜ ಆರೋಗ್ಯ ಪೂರ್ಣವಾಗಿರುತ್ತದೆ. ಆದರೆ ಈ ದೇಶ ಆರೋಗ್ಯ ಪೂರ್ಣವಾಗಿದೆ ಎಂದು ನಮಗೆ ಭಾಸವಾಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಹಾಗಾಗಿಯೇ ಈ ನಾಟಕೋತ್ಸವಗಳು ಪದೇ ಪದೇ ನಿರಂತರವಾಗಿ ಪ್ರದರ್ಶನಗೊಳ್ಳುತ್ತ, ಸಮಾಜವನ್ನು ಮುನ್ನಡೆಸಬೇಕು. ಆ ಮೂಲಕ ಸತ್ಯವನ್ನು ಹೊರಹಾಕುವ ಚಿಂತನೆಗೆ ಕಲೆ ದಾರಿ ಮಾಡಿಕೊಡುತ್ತದೆ. ನಾಟಕಗಳಿರುವುದು ಸತ್ಯವನ್ನು ಬಿತ್ತರಿಸಲು ಎಂದು ವಿಶ್ಲೇಷಣೆ ಮಾಡಿದರಲ್ಲದೆ, ಕಲೆ ಮಾತ್ರ ಮನುಷ್ಯನನ್ನು, ಮನುಷ್ಯನನ್ನಾಗಿ ಇಂದಿಗೂ ಕೈ ಬಿಡದೆ ತನ್ನೊಟ್ಟಿಗೆ ಕರೆದುಕೊಂಡು ಹೋಗುತ್ತಿದೆ ಎಂದರು.




ಏಳು ದಿನಗಳ 'ಸಂಚಲನ ದಶಮಾನೋತ್ಸವ'ಕ್ಕೆ ಶನಿವಾರ ರಂಗಾಯಣ ಮಾಜಿ ನಿರ್ದೇಶಕ ಎಚ್.ಜನಾರ್ಧನ್(ಜನ್ನಿ) ಚಾಲನೆ ನೀಡಿದರು.

ಕಲೆ ಕಲಿಯುವುದು ಅದೊಂದು ಪ್ರಜ್ಞಾವಂತಿಕೆಯ ನುಡಿಗಟ್ಟು. ಮಕ್ಕಳು ನಾಟಕ, ಸಾಹಿತ್ಯ, ಹಾಡು, ನೃತ್ಯದ ಕಡೆಗೆ ಆಸಕ್ತಿ ತೋರಿದರೆ, ಅದು ಪ್ರಜ್ಞೆ ಮತ್ತು ಜ್ಞಾನವನ್ನು ಬೆಳೆಸುತ್ತದೆ. ಚಿಕ್ಕ ವಯಸ್ಸಿನಿಂದಲೇ ರಂಗ ಕಲೆಗಳನ್ನು ಕಲಿಯುವಲ್ಲಿ ಮಕ್ಕಳು ನಿರತರಾಗಬೇಕು. ಅದರಿಂದ ಈ ಮಣ್ಣಿನಿಂದ ದೂರವಾಗದಂತಹ ಕಲಾತ್ಮಕ ಕಲೆಗಳನ್ನು ಕಲಿಯಬೇಕು. ಹಾಗಾಗಿ ಕಲೆ ಪ್ರಜ್ಞಾವಂತಿಕೆಯ ನುಡಿಗಟ್ಟಿದಂತೆ ಎಂದರು.

ಈ ವೇಳೆ ಸಾಮಾಜಿಕ ಹೋರಾಟಗಾರ ಶಿವಲಿಂಗಯ್ಯ, ಶಕ್ತಿಧಾಮ ವಿದ್ಯಾಸಂಸ್ಥೆ ಮುಖ್ಯಸ್ಥೆ ಉಷಾ, ಮೈಸೂರು ಡಯಟ್ ಸಂಸ್ಥೆಯ ಉಪನ್ಯಾಸಕಿ ಬಿ.ಎನ್ ನಳಿನಾಕ್ಷಿ, ಸಂಚಲನ ಟ್ರಸ್ಟ್‌ನ ಮುಖ್ಯಸ್ಥ ದೀಪಕ್ ಮೈಸೂರು ಸೇರಿದಂತೆ ಇತರರಿದ್ದರು.

ಜಿ.ಡಿ.ಹರೀಶ್‌ಗೌಡರಿಗೆ ಹುಟ್ಟುಹಬ್ಬದ ಶುಭಾಶಯ



ಹುಣಸೂರು ಕ್ಷೇತ್ರದ ಶಾಸಕರಾದ ಜಿ.ಡಿ.ಹರೀಶ್‌ಗೌಡರಿಗೆ ಚಾಮುಂಡಿಬೆಟ್ಟದಲ್ಲಿ ಅಭಿನಂದಿಸಿ, ಹುಟ್ಟುಹಬ್ಬದ ಶುಭಾಶಯ ಕೋರಲಾಯಿತು. ಈ ವೇಳೆ ಮೈಮುಲ್‌ನ ಮಾಜಿ ಅಧ್ಯಕ್ಷ, ಹಾಲಿ ನಿರ್ದೇಶಕರಾದ ಎ.ಟಿ.ಸೋಮಶೇಖರ್, ಕೆ.ಉಮಾಶಂಕರ್, ಮೈಸೂರು ತಾಲೂಕು ವೀರಶೈವ ಲಿಂಗಾಯಿತ ಮಹಾಸಭಾ ಅಧ್ಯಕ್ಷ ಬ್ಯಾತಹಳ್ಳಿ ನಾಗರಾಜ, ಯುವ ಮುಖಂಡ ಸತೀಶ್ ಇನ್ನಿತರರಿದ್ದರು.

ಮೈಸೂರು–ಕುಶಾಲನಗರ ರೈಲ್ವೆ ಯೋಜನೆಗೆ ನಾವು ನಯಾ ಪೈಸೆ ಹಣ ನೀಡಲ್ಲ

ನೈರುತ್ಯ ರೈಲ್ವೆಗೆ ಕರ್ನಾಟಕ ರಾಜ್ಯ ಸರ್ಕಾರದ ಪತ್ರ

ಮೈಸೂರು, ಜ.31(ಬಿಎಲ್‌ಯು)– ಮೈಸೂರು– ಕುಶಾಲನಗರ ರೈಲ್ವೆ ಯೋಜನೆಯನ್ನು ಕೈಗೆತ್ತಿಕೊಳ್ಳಲು ತನ್ನ ಪಾಲಿನ ಯೋಜನಾ ವೆಚ್ಚ ಭರಿಸಲು ಒಪ್ಪದ ರಾಜ್ಯ ಸರ್ಕಾರ ನೈರುತ್ಯ ರೈಲ್ವೆಗೆ ಪತ್ರ ಬರೆದು, ಈ ಬಗ್ಗೆ ಸ್ಪಷ್ಟಪಡಿಸಿದೆ. ಈ ಸಂಬಂಧ ಏಪ್ರಿಲ್ 29, 2024ರಂದು ರಾಜ್ಯ ಸರ್ಕಾರದ ಮೂಲ ಸೌಕರ್ಯ ಅಭಿವೃದ್ಧಿ ಬಂದರು ಮತ್ತು ಒಳನಾಡು ಜಲ ಸಾರಿಗೆ ಇಲಾಖೆಯ ಕಾರ್ಯದರ್ಶಿ, ನೈರುತ್ಯ ರೈಲ್ವೆಯ ಮುಖ್ಯ ಆಡಳಿತಾಧಿಕಾರಿಗೆ ಪತ್ರ ಬರೆದಿದ್ದಾರೆ.



ತನ್ನ ಪಾಲಿನ ಯೋಜನಾ ವೆಚ್ಚ ಭರಿಸುವುದರ ಜೊತೆಗೆ ಭೂಸ್ವಾಧೀನಪಡಿಸಿಕೊಂಡು ರಾಜ್ಯ ಸರ್ಕಾರ ಅಗತ್ಯ ಭೂಮಿ ನೀಡಿದ್ದರೆ ಇಷ್ಟೊತ್ತಿಗೆ ಮೈಸೂರು–ಕುಶಾಲನಗರ ರೈಲ್ವೆ ಯೋಜನೆ ಕಾಮಗಾರಿ ಪ್ರಗತಿಯಲ್ಲಿರುತ್ತಿತ್ತು. ಈ ಯೋಜನೆ ಅನುಷ್ಠಾನ ಸಂಬಂಧ ಕೇಂದ್ರ ಸರ್ಕಾರದ ಜೊತೆ ಸಮಾಲೋಚನೆ ನಡೆಸುತ್ತೇನೆ. ಇದಕ್ಕೆ ವೆಚ್ಚ ಹಂಚಿಕೆ ಮಾಡಿ, ಅಗತ್ಯ ಭೂಮಿ ನೀಡಲು ರಾಜ್ಯ ಸರ್ಕಾರ ಕೂಡ ಸಕರಾತ್ಮಕವಾಗಿ ಸ್ಪಂದಿಸಬೇಕು. ಲಾಭ, ನಷ್ಟ ಲೆಕ್ಕ ಹಾಕದೆ ಎರಡು ಸರ್ಕಾರ ಕೈ ಜೋಡಿಸಿದರೆ ಜನರ ಹಿತಾಸಕ್ತಿಯ ದೃಷ್ಟಿಯಿಂದ ಈ ಯೋಜನೆ ಅನುಷ್ಠಾನ ಮಾಡಬಹುದು.

–ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸಂಸದ

ರಾಜ್ಯದಲ್ಲಿ ಪ್ರಗತಿಯಲ್ಲಿರುವ 9 ರೈಲ್ವೆ ಯೋಜನೆಯಲ್ಲಿ ರಾಜ್ಯ ಸರ್ಕಾರದ ಪಾಲು 5,757.27 ಕೋಟಿ ಆಗಿದ್ದು, ಇದರಲ್ಲಿ ಈಗಾಗಲೇ 2,245.61 ಕೋಟಿ ಬಿಡುಗಡೆ ಮಾಡಲಾಗಿದೆ. ಇನ್ನುಳಿದ 3,521.66 ಕೋಟಿ ಬಿಡುಗಡೆ ಮಾಡಬೇಕಿದೆ ಎಂದು ಪತ್ರದಲ್ಲಿ ತಿಳಿಸಿದ್ದಾರೆ ಇದಲ್ಲದೆ 7 ಯೋಜನೆಗಳ ಭೂ ಸ್ವಾಧೀನದ ಸಂಪೂರ್ಣ ವೆಚ್ಚವನ್ನು ರಾಜ್ಯ ಸರ್ಕಾರವೇ ಭರಿಸಬೇಕಾಗಿದೆ. ಈ ಹಿನ್ನೆಲೆಯಲ್ಲಿ ಈಗಾಗಲೇ 9 ರೈಲ್ವೆ ಯೋಜನೆ ಪೂರ್ಣಗೊಳಿಸಬೇಕಾಗಿರುವುದು ನಮ್ಮ ಮೊದಲ ಆದ್ಯತೆಯಾಗಿದೆ ಎಂದು ರಾಜ್ಯ ಸರ್ಕಾರ ಹೇಳಿದೆ. ಈ ಕಾರಣದಿಂದ ಮೈಸೂರು–ಕುಶಾಲನಗರ ರೈಲ್ವೆ ಯೋಜನೆಯ ತನ್ನ ಪಾಲಿನ ವೆಚ್ಚ ಭರಿಸುವುದು ಸಾಧ್ಯವಿಲ್ಲ ಎಂದು ಯೋಜನೆ ರಾಜ್ಯ ಸರ್ಕಾರದ ಕಾರ್ಯದರ್ಶಿ ಪತ್ರದಲ್ಲಿ ಸ್ಪಷ್ಟಪಡಿಸಿದ್ದಾರೆ.

ಇಶಾನ್ ಕಿಶನ್ ಅಮೋಘ ಶತಕ; 4–1 ಅಂತರದಿಂದ ಭಾರತಕ್ಕೆ ಸರಣಿ ಗೆಲುವು

ತಿರುವನಂತಪುರಂ, ಜ.31 (ವಿವಿಹೆಚ್)– ಇಶಾನ್ ಕಿಶನ್ ಅವರ ಚೊಚ್ಚಲ ಟಿ20 ಶತಕದ ನೆರವಿನಿಂದ ಪ್ರವಾಸಿ ನ್ಯೂಜಿಲೆಂಡ್ ತಂಡವನ್ನು 46 ರನ್‌ಗಳಿಂದ ಮಣಿಸಿದ ಭಾರತ, ಇತ್ತಂಡಗಳ ನಡುವಣ 5 ಟಿ20 ಪಂದ್ಯಗಳ ಸರಣಿಯನ್ನು 4–1 ಅಂತರದಿಂದ ವಶಪಡಿಸಿಕೊಂಡಿತು.

ಇಲ್ಲಿನ ಗ್ರೀನ್ ಫೀಲ್ಡ್ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟ್ ಮಾಡಿದ ಭಾರತ ನಿಗದಿತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 271 ರನ್ ಗಳ ಬೃಹತ್ ಗುರಿ ನೀಡಿತು. ಈ ಮೊತ್ತ ಬೆನ್ನತ್ತುವಲ್ಲಿ ವಿಫಲವಾದ ಪ್ರವಾಸಿ ನ್ಯೂಜಿಲೆಂಡ್ ತಂಡ 19.4 ಓವರ್‌ಗಳಲ್ಲಿ 225 ರನ್‌ಗೆ ಸರ್ವಪತನ ಕಂಡಿತು.

ಇಶಾನ್–ಸೂರ್ಯ ಮೋಡಿ; ಮೊದಲು ಬ್ಯಾಟ್ ಮಾಡಿದ ಭಾರತ ತಂಡಕ್ಕೆ ಇಶಾನ್ ಕಿಶನ್ ಹಾಗೂ ನಾಯಕ ಸೂರ್ಯಕುಮಾರ್ ಯಾದವ್ ಉತ್ತಮ ಜೊತೆಯಾಟವಾಡುವ ಮೂಲಕ ಬೃಹತ್ ಮೊತ್ತ ಕಲೆಹಾಕುವಲ್ಲಿ ಸಹಕರಿಸಿದರು. ಈ ಜೋಡಿ 60 ಎಸೆತಗಳಲ್ಲಿ ಬರೋಬ್ಬರಿ 137 ರನ್‌ಗಳ ಜೊತೆಯಾಟವಾಡಿತು.

ಇಶಾನ್ 43 ಎಸೆತಗಳಲ್ಲಿ 6 ಬೌಂಡರಿ ಹಾಗೂ ಭರ್ಜರಿ 10 ಸಿಕ್ಸರ್ ಮೂಲಕ 103 ರನ್ ಗಳಿಸಿ ಟಿ20ಯಲ್ಲಿ ಮೊದಲ ಶತಕ ದಾಖಲಿಸಿದರೆ, ನಾಯಕ ಸೂರ್ಯ 30 ಎಸೆತ ಎದುರಿಸಿ 4 ಬೌಂಡರಿ, 6 ಸಿಕ್ಸರ್ ಸಹಿತ 63 ರನ್ ಬಾರಿಸಿದರು. ಆ ಮೂಲಕ ಸರಣಿಯಲ್ಲಿ 3ನೇ ಅರ್ಧಶತಕ ದಾಖಲಿಸಿದರು.

ಡೆತ್ ಓವರ್‌ನಲ್ಲಿ ಅಬ್ಬರಿಸಿದ ಹಾರ್ದಿಕ್ ಪಾಂಡ್ಯ 17 ಎಸೆತಗಳಲ್ಲಿ 42 ರನ್ ಚಚ್ಚಿದರು. ಉಳಿದಂತೆ ಸಂಜು ಸ್ಯಾಮ್ಸನ್ 6, ಅಭಿಷೇಕ್ ಶರ್ಮಾ 30, ರಿಂಕು ಮತ್ತು ಶಿವಂ ದುಬೆ ಔಟಾಗದೆ ಕ್ರಮವಾಗಿ 8 ಮತ್ತು 7 ರನ್ ಬಾರಿಸಿದರು.

ನ್ಯೂಜಿಲೆಂಡ್ ಪರ ಲೂಕಿ ಫರ್ಗ್ಯೂಸನ್ 2, ಡಫಿ ಜೇಮಿಸನ್ ಹಾಗೂ ನಾಯಕ ಸ್ಯಾಂಟ್ನರ್ ತಲಾ ಒಂದೊಂದು ವಿಕೆಟ್ ಪಡೆದರು.

ಬೃಹತ್ ಮೊತ್ತ ಬೆನ್ನತ್ತಿದ ಕಿವೀಸ್‌ಗೆ ಫಿನ್ ಆಲೆನ್ ಹೊರತುಪಡಿಸಿ ಬೇರ್‍ಯಾರಿಂದಲೂ ಉತ್ತಮ ಆಟ ಕಂಡುಬರಲಿಲ್ಲ. ಟೀಂ ಇಂಡಿಯಾದ ಕರಾರುವಾಕ್ಕಾದ ಬೌಲಿಂಗ್‌ನಿಂದ ಕಿವೀಸ್ ಪಡೆ ಬೃಹತ್ ಮೊತ್ತ ಬೆನ್ನತ್ತುವಲ್ಲಿ ವಿಫಲವಾಯಿತು.

ಆಲೆನ್ 38 ಎಸೆತಗಳಲ್ಲಿ 8 ಬೌಂಡರಿ, 6 ಸಿಕ್ಸರ್ ಸಹಿತ 80 ರನ್ ಗಳಿಸಿ ಅಬ್ಬರಿಸಿದರು. ಇವರ ನಿರ್ಗಮನದ ನಂತರ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ಎಡವಿದ ಕಾರಣ ಕಿವೀಸ್ ಪಂದ್ಯ ಕೈ ಚೆಲ್ಲಿತು. ರಚಿನ್ ರವೀಂದ್ರ 30, ಡ್ಯಾರೆಲ್ ಮಿಚೆಲ್ 26, ಹಾಗೂ ಇಶ್ ಸೋಧಿ 33ರನ್ ಹೊರತುಪಡಿಸಿ ಮತ್ಯಾರಿಂದಲೂ ಎರಡಂಕಿ ಮೊತ್ತ ಕಲೆಹಾಕಲು ಸಾಧ್ಯವಾಗಲಿಲ್ಲ.

ಉಳಿದಂತೆ ಸೈಫರ್ಟ್ 5, ಗ್ಲೇನ್ ಫಿಲಿಪ್ಸ್ 7, ನಾಯಕ ಸ್ಯಾಂಟ್ನರ್ ಟಕ್‌ಔಟ್, ಜಾಕೋಬ್ಸ್ 7, ಕೈಲ್ ಜಾಮಿಸನ್ 9, ಫರ್ಗ್ಯೂಸನ್ 3ರನ್ ಗಳಿಸಿದರೆ, ಜಾಕೋಬ್ ಡಫಿ ಔಟಾಗದೇ 9 ರನ್ ಗಳಿಸಿದರು.

ಟೀಂ ಇಂಡಿಯಾ ಪರ ಅರ್ಶ್‌ದೀಪ್ ಸಿಂಗ್ ಪ್ರಮುಖ 5 ವಿಕೆಟ್ ಕಬಳಿಸಿ ಮಿಂಚಿದರು. ಅಕ್ಷರ್ ಪಟೇಲ್ 3, ವರುಣ್ ಚಕ್ರವರ್ತಿ ಮತ್ತು ರಿಂಕು ಸಿಂಗ್ ತಲಾ ಒಂದೊಂದು ವಿಕೆಟ್ ಪಡೆದರು.

ಕೊನೆಯ ಪಂದ್ಯದಲ್ಲಿ ಭರ್ಜರಿ ಶತಕ ಬಾರಿಸಿದ ಇಶಾನ್ ಕಿಶನ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು. ಸರಣಿಯಲ್ಲಿ 3 ಅರ್ಧಶತಕ ದಾಖಲಿಸಿ ಸರಣಿ ಗೆಲುವಿಗೆ ಪ್ರಮುಖ ಪಾತ್ರ ವಹಿಸಿದ ಟೀಂ ಇಂಡಿಯಾ ನಾಯಕ ಸೂರ್ಯಕುಮಾರ್ ಯಾದವ್ ಸರಣಿ ಶ್ರೇಷ್ಠ ಪಡೆದರು.



ಟ್ರೋಫಿಯೊಂದಿಗೆ ಭಾರತ ತಂಡದ ಆಟಗಾರರ ಸಂಭ್ರಮ



ಟೀಂ ಇಂಡಿಯಾ ನಾಯಕ ಸೂರ್ಯಕುಮಾರ್ ಯಾದವ್ ಅವರು ಅಂತಾರಾಷ್ಟ್ರೀಯ ಟಿ20ಯಲ್ಲಿ ಅತೀ ಕಡಿಮೆ ಎಸೆತದಲ್ಲಿ 3000 ರನ್ ಪೂರೈಸಿದ ವಿಶ್ವದ ಮೊದಲ ಆಟಗಾರ ಎಂಬ ದಾಖಲೆ ಬರೆದರು. 1822 ಎಸೆತಗಳಲ್ಲಿ 3 ಸಾವಿರ ರನ್ ಬಾರಿಸುವ ಮೂಲಕ ಅಗ್ರಸ್ಥಾನ ಕಾಯ್ದುಕೊಂಡಿದ್ದಾರೆ. ಜೊತೆಗೆ ಟಿ20ಯಲ್ಲಿ 3 ಸಾವಿರ ರನ್ ಪೂರೈಸಿದ ಭಾರತದ 3ನೇ ಆಟಗಾರ ಹೆಗ್ಗಳಿಕೆಯೂ ಇವರದ್ದಾಗಿದೆ.

ಮೈಸೂರು ಮಿತ್ರ

ಭಾನುವಾರ 1 ಫೆಬ್ರವರಿ 2026

ಸಿಲ್ಕ್ ಇಂಡಿಯಾ: ರೇಷ್ಮೆ ಸೀರೆಗಳ ಪ್ರದರ್ಶನ, ಮಾರಾಟಕ್ಕೆ ಬಿಗಬಾಸ್ ನಟಿ ರಿಷಾ ಗೌಡ ಚಾಲನೆ



ನಟಿ ರಿಷಾ ಗೌಡ ಸಿಲ್ಕ್ ಇಂಡಿಯಾ–2026ರ ಮೇಳ ಉದ್ಘಾಟಿಸಿದರು.

ಮೈಸೂರು, ಜ.31(ವಿವಿಹೆಚ್)– ಅಭಿವೃದ್ಧಿ ಸಂಸ್ಥೆ ವತಿಯಿಂದ ಇದೇ ಜ.30ರಿಂದ ಫೆ.8ರವರೆಗೆ ಮೈಸೂರಿನ ನಂಜರಾಜ ಬಹದ್ದೂರ್ ಛತ್ರದಲ್ಲಿ ಆಯೋಜಿಸಿರುವ ಸಿಲ್ಕ್ ಇಂಡಿಯಾ–2026 ಪರಿಶುದ್ಧ ರೇಷ್ಮೆ ಸೀರೆಗಳ ಪ್ರದರ್ಶನ ಮತ್ತು ಮಾರಾಟ ಮೇಳವನ್ನು ಶುಕ್ರವಾರ ಬಿಗ್‌ಬಾಸ್ ಖ್ಯಾತಿಯ ನಟಿ ರಿಷಾ ಗೌಡ ಉದ್ಘಾಟಿಸಿದರು.

ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮೈಸೂರಿನಲ್ಲಿ ಸೀರೆ ಉತ್ಸವ ಆಯೋಜಿಸಿರುವುದು ಹೆಮ್ಮೆಯ ಸಂಗತಿ. ಸೀರೆ ಎಂಬುದು ಹೆಣ್ಣು ಮಕ್ಕಳಿಗೆ ಅರಿಶಿಣ, ಕುಂಕುಮದಷ್ಟೆ ಪ್ರಾಮುಖ್ಯತೆ ಇರುವ ಅಂಶ. ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಸುಮಾರು 17 ರಾಜ್ಯಗಳಲ್ಲಿನ ವಿವಿಧ ಕಲಾತ್ಮಕ ಸೀರೆಗಳನ್ನು ಇಲ್ಲಿ ಕಣ್ತುಂಬಿಕೊಳ್ಳಬಹುದಾಗಿದೆ ಎಂದರು.

ಶಿವರಾತ್ರಿ ಹಬ್ಬ ಸಮೀಪಿಸುತ್ತಿದ್ದು, ಹೆಣ್ಣು ಮಕ್ಕಳಿಗೆ ಬಹಳ ರಿಯಾಯಿತಿ ದರದಲ್ಲಿ ಉತ್ತಮ ಗುಣಮಟ್ಟದ ಸೀರೆಗಳನ್ನು ಇಲ್ಲಿ ಖರೀದಿಸಬಹುದಾಗಿದೆ. ನೇಯ್ಗೆ ಮೂಲಕ 10 ದಿನಗಳ ಕಾಲಾವಕಾಶದಲ್ಲಿ ತಯಾರಿಸಲಾದ ಸೀರೆಗಳು ಇವಾಗಿದ್ದು, ಈ ಮೇಳದಲ್ಲಿ ಭಾಗವಹಿಸಿ ಎಂದರು.

ಬಿಗ್‌ಬಾಸ್ ಬಳಿಕ ಹಲವಾರು ಅವಕಾಶಗಳು ಬರುತ್ತಿವೆ. ತಾವು ರಂಗಭೂಮಿ ಕಲಾವಿದೆಯಾಗಿದ್ದು, ಬೆಳ್ಳಿ ತೆರೆಯಲ್ಲಿ ಕಾಣಿಸಿಕೊಳ್ಳುವ ಸಲುವಾಗಿ ಒಂದಷ್ಟು ತಯಾರಿ ನಡೆಸಲಾಗುತ್ತಿದೆ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಅಭಿವೃದ್ಧಿ ಸಂಸ್ಥೆ ವ್ಯವಸ್ಥಾಪಕ ಅಭಿನಂದನ್, ಮ್ಯಾನೇಜರ್ ಸೋನು ಗೋಸ್ವಾಮಿ ಉಪಸ್ಥಿತರಿದ್ದರು.

ಯಾವೆಲ್ಲಾ ಸೀರೆಗಳು ಲಭ್ಯ: ಮೈಸೂರಲ್ಲಿ ಇಂದಿನಿಂದ 10 ದಿನಗಳ ಕಾಲ ಆಯೋಜಿಸಿರುವ ಸಿಲ್ಕ್ ಇಂಡಿಯಾ 2026ರಲ್ಲಿ 17 ರಾಜ್ಯಗಳಿಂದ ರೇಷ್ಮೆ ಸೀರೆ ಉತ್ಪಾದಕರು, ರೇಷ್ಮೆ ಸೀರೆ ವಿನ್ಯಾಸಗಾರರು ಮತ್ತು ರೇಷ್ಮೆ ಸಹಕಾರ ಸಂಘಗಳಿಂದ 60ಕ್ಕೂ ಹೆಚ್ಚಿನ ಮಳಿಗೆಗಳಲ್ಲಿ ತಮ್ಮ ರಾಜ್ಯದ ಸಾಂಪ್ರದಾಯಿಕ ರೇಷ್ಮೆ ಸೀರೆ ಮತ್ತು ಉತ್ಪನ್ನಗಳನ್ನು ಪ್ರದರ್ಶನ ಮತ್ತು ಮಾರಾಟ ಮಾಡುತ್ತಿದ್ದಾರೆ.

ಮೇಳದಲ್ಲಿ ರೇಷ್ಮೆ ಸೀರೆಗಳು, ಕ್ರೇಪ್ ಮತ್ತು ಜಾರ್ಜೆಟ್ ಸಿಲ್ಕ್ ಸೀರೆಗಳು, ಅರಿಣಿ ರೇಷ್ಮೆ ಸೀರೆಗಳು, ಧರ್ಮಾವರಂ ಸೀರೆಗಳು, ಕಾಂಚಿಪುರಂ ಸಿಲ್ಕ್ ಮತ್ತು ಮದುವೆ ಸೀರೆಗಳು, ರಾ ಸಿಲ್ಕ್ ಮತ್ತು ಕೋಸಾ ಸೀರೆಗಳು, ಕಲ್ಲೊತ್ತಾ ಗಣಪತಿ ಸೀರೆಗಳು, ಢಾಕ ಸೀರೆಗಳು, ಡಿಸೈನರ್ ಎಂಬ್ರಾಯಿಡರಿ ಸೀರೆ ಮತ್ತು ಡ್ರೆಸ್, ಬಲ್ಲೂರಿ ರೇಷ್ಮೆ, ಮಟ್ಕಾ ಸೀರೆಗಳು, ಪ್ರಿಂಟೆಡ್ ಸೀರೆಗಳು, ಪಶ್ರೀನಾ ಸೀರೆಗಳು, ಡಿಸೈನರ್ ಡ್ರೆಸ್ ಮೇಟಿರಿಯಲ್ ಮತ್ತು ಸೀರೆಗಳು, ಬಾಗಲ್ಪುರ್ ರೇಷ್ಮೆ ಸೀರೆ ಮತ್ತು ಡ್ರೆಸ್, ಉಪ್ಪಡಾ ಮತ್ತು ಗೊಡ್ಡಾಲ್ ಸೀರೆಗಳು, ಮಹೇಶ್ವರಿ ಮತ್ತು ಕೋಟಾ ಸಿಲ್ಕ್, ಟೆಂಪಲ್ ಬಾರ್ಡರ್ ಉಳ್ಳ ಮುಲ್ಮಾರಿ ಸಿಲ್ಕ್, ಕಲೋತ್ತಾ ರೇಷ್ಮೆ ಸೀರೆಗಳು, ಬನಾರಸ್ ಮತ್ತು ಜಮ್ಮಾನಿ ರೇಷ್ಮೆ ಶಿಫಾನ್ ಸೀರೆಗಳು, ಬುಟ್ಟಿ ಸೀರೆಗಳು, ಚಂದೇರಿ ಸಿಲ್ಕ್ ಮತ್ತು ಕೈ ಅಚ್ಚಿನ ಸೀರೆಗಳು ಪ್ರದರ್ಶನಗೊಳ್ಳಲಿವೆ.

ಸಾಹಿತ್ಯದ ಮೂಲಕ ಜಡ ಮನಸುಗಳ ಜಾಗೃತಿಗೊಳಿಸಿದ ಕವಿ ಕುವೆಂಪು

ಕುವೆಂಪು ಜನ್ಮ ದಿನೋತ್ಸವದಲ್ಲಿ ಮೈಸೂರು ವಿವಿ ಕುಲಪತಿ ಪ್ರೊ.ಲೋಕನಾಥ್ ಬಣ್ಣನೆ



ಮೈಸೂರಿನ ವಿಶ್ವವಿದ್ಯಾಲಯದ ಪ್ರಸಾರಾಂಗದ ಕುವೆಂಪು ಸಭಾಂಗಣದಲ್ಲಿ ಆಯೋಜಿಸಿದ್ದ ರಾಷ್ಟ್ರಕವಿ ಕುವೆಂಪು ಜನ್ಮ ದಿನೋತ್ಸವವನ್ನು ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಉದ್ಘಾಟಿಸಿದರು.

ಮೈಸೂರು,ಜ.31(ಜಿಎ)–ತಮ್ಮ ಸಾಹಿತ್ಯ ಕೃಷಿ ಮೂಲಕವೇ ಜಡ ಮನಸುಗಳನ್ನು ಜಾಗೃತಗೊಳಿಸಿದ ಮಹಾನ್ ಕವಿ ಕುವೆಂಪು ಎಂದು ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ತಿಳಿಸಿದರು.

ಮೈಸೂರಿನ ವಿಶ್ವವಿದ್ಯಾಲಯದ ಪ್ರಸಾರಾಂಗದ ಕುವೆಂಪು ಸಭಾಂಗಣದಲ್ಲಿ ಆಯೋಜಿಸಿದ್ದ ರಾಷ್ಟ್ರಕವಿ ಕುವೆಂಪು ಜನ್ಮ ದಿನೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕುವೆಂಪು ಅವರು ಸಾಹಿತ್ಯವನ್ನು ವೈಜ್ಞಾನಿಕ ಮತ್ತು ವೈಚಾರಿಕ ನೆಲೆಗಟ್ಟಿನ ಮೇಲೆ ಸಾಮಾಜಿಕ ಉದ್ದೇಶಗಳಿಗೆ ಮಾಧ್ಯಮವಾಗಿ ಬಳಸಿಕೊಂಡ ಲೇಖಕರಾಗಿದ್ದರು ಎಂದರು.

ಕುವೆಂಪು ಸಾಹಿತ್ಯ ಇಂದಿಗೂ ಪ್ರಸ್ತುತ. ಎಲ್ಲಾ ಪ್ರಕಾರಗಳಲ್ಲಿಯೂ ಕೃತಿ ರಚಿಸಿದ್ದಾರೆ. ಒಂದೊಂದು ಸಾಹಿತ್ಯದ ಕೃತಿಯೂ ವಸ್ತು ಧೋರಣೆಯಿಂದ ವಿಶಿಷ್ಟವೂ, ವೈವಿಧ್ಯವೂ ಆಗಿದೆ. ಕುವೆಂಪು ನಮ್ಮ ನೆಲ ಮೂಲದ ಶ್ರೇಷ್ಠ ಕವಿ, ಸಾಹಿತಿ ಹಾಗೂ ಮಹಾ ಮಾನವತಾವಾದಿ. ಕನ್ನಡದಲ್ಲಿ ಅವರಿಗೆ ಸಾರಿಸಾಟಿಯಾದ ವಿದ್ವಾಂಸ ಮೊತ್ತೊಬ್ಬರಿಲ್ಲ. ಸಾಹಿತ್ಯ ಸಂವೇದನೆ ಬಹುಮುಖವಾದುದು. ನಮ್ಮ ಚೇತನವು ಜಾತಿ, ಮತಗಳ ಕಟ್ಟುಪಾಡುಗಳನ್ನು ಒಡೆದು ದಾಟಿ 'ಅನಿಕೇತನ' ಆಗಬೇಕು ಎಂಬುದು ಅವರ ಆಶಯವಾಗಿತ್ತು ಎಂದು ತಿಳಿಸಿದರು.

ಮೈಸೂರು ವಿ.ವಿ ಕುಲಪತಿಗಳಾಗಿದ್ದ ಕೇವಲ ನಾಲ್ಕೈದು ವರ್ಷಗಳಲ್ಲಿ ಇಡೀ ವಿಶ್ವವಿದ್ಯಾಲಯದ ಸ್ವರೂಪವೇ ಬದಲಾಗಿತ್ತು. ಕನ್ನಡಕ್ಕೆ ಒಮ್ಮೆಲೇ ಪ್ರಾಮುಖ್ಯತೆ ದೊರಕಿತು. ಪ್ರಸಾರಾಂಗ ಅವರ ಕನಸಿನ ಕೂಸಾಗಿತ್ತು ಎಂದು ಸ್ಮರಿಸಿದರು.

ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಪ್ರೊ.ರಾಮೇಗೌಡ ಮಾತನಾಡಿ, ಕುವೆಂಪು ಅವರ ಕೃತಿಗಳನ್ನು ಓದಿದಾಗ ನಾವು ಜೀವನವನ್ನು ನೋಡುವ ದೃಷ್ಟಿಕೋನವೇ ಬದಲಾಗುತ್ತದೆ. ನಮ್ಮ ಬದುಕಿನ ದಿಕ್ಕು ಮತ್ತು ಚಿಂತನೆಗಳನ್ನು ಬದಲಾಯಿಸುವ ಶಕ್ತಿ ಕೃತಿಗಳಲ್ಲಿ ಅಡಕವಾಗಿದೆ ಎಂದರು.

ಇಂದಿನ ಯುವಪೀಳಿಗೆ ಕುವೆಂಪು ಅವರ ಪುಸ್ತಕಗಳನ್ನು ಅಧ್ಯಯನ ಮಾಡಬೇಕು. ಕಾವ್ಯಗಳಲ್ಲಿರುವ ಮಾನವೀಯ ಮೌಲ್ಯಗಳನ್ನು ಅರಿತು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಅವರ ಬದುಕು, ಬರಹ ಹಾಗೂ ಆದರ್ಶಗಳು ಸರ್ವರಿಗೂ ದಾರಿದೀಪವಾಗಿದೆ. ಕುವೆಂಪು ತಮ್ಮ ಸಾಹಿತ್ಯದಲ್ಲಿ ವೈಚಾರಿಕತೆಗೆ ಹೆಚ್ಚಿನ ಒತ್ತು ನೀಡಿ ವಿಶ್ವಮಾನವ ಸಂದೇಶ ಸಾರಿದರು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಪ್ರಸಾರಾಂಗ ನಿರ್ದೇಶಕ ಪ್ರೊ.ಎಂ. ನಂಜಯ್ಯ ಹೊಂಗನೂರು, ಅಧೀಕ್ಷಕ ಚನ್ನಬಸಪ್ಪ ಇನ್ನಿತರರು ಉಪಸ್ಥಿತರಿದ್ದರು.

ವಾರ್ಷಿಕೋತ್ಸವ...



ಮೈಸೂರಿನ ಹೋಟೆಲ್ ಕಲ್ಯಾಣಿಯಲ್ಲಿ ಸನ್ಮತಿ ಲೇಡಿಸ್ ಫೌಂಡೇಶನ್ 7ನೇ ವಾರ್ಷಿಕೋತ್ಸವ ಸಮಾರಂಭ ನಡೆಯಿತು. ಈ ವೇಳೆ ಮೈಸೂರಿನ ಜಯಚಾಮರಾಜೇಂದ್ರ ಮೃಗಾಲಯದಲ್ಲಿ ಒಂದು ಪ್ರಾಣಿಯನ್ನು ದತ್ತು ಪಡೆದು ಪೋಷಿಸಲು ನಿರ್ಧರಿಸಲಾಯಿತು. ಸನ್ಮತಿ ಲೇಡಿಸ್ ಫೌಂಡೇಶನ್ ಪದಾಧಿಕಾರಿಗಳು, ಸದಸ್ಯರು ಈ ವೇಳೆ ಉಪಸ್ಥಿತರಿದ್ದರು.

ಕಬಿನಿ, ಬಂಡಿಪುರ, ನಾಗರಹೊಳೆ ವಲಯದಲ್ಲಿ ಪರಿಸರ ಉಲ್ಲಂಘನೆ ತಡೆಗೆ ತುರ್ತು ಕ್ರಮಕ್ಕೆ ಆಗ್ರಹ

ಮೈಸೂರು, ಜ.31– ಕಬಿನಿ ಮತ್ತು ಬಂಡೀಪುರ–ನಾಗರಹೊಳೆ ಪರಿಸರ ಸೂಕ್ಷ್ಮ ವಲಯದಲ್ಲಿ ನಡೆಯುತ್ತಿರುವ ಗಂಭೀರ ಪರಿಸರ ಉಲ್ಲಂಘನೆ ಚಟುವಟಿಕೆಗಳನ್ನು ತಡೆಯಲು ತುರ್ತು ಕ್ರಮ ವಹಿಸುವಂತೆ ಆಗ್ರಹಿಸಿ, ಸೇವ್ ಕಬಿನಿ ತಂಡವು ಮೈಸೂರು ಪ್ರಾದೇಶಿಕ ಆಯುಕ್ತರಿಗೆ ಮನವಿ ಸಲ್ಲಿಸಿದೆ.

ಬಂಡೀಪುರ–ನಾಗರಹೊಳೆ–ಕಬಿನಿ ಪರಿಸರ ಸೂಕ್ಷ್ಮ ವಲಯ(ಇಎಸ್‌ಝಡ್)ದ ಮೇಲ್ವಿಚಾರಣಾ ಸಮಿತಿ ಅಧ್ಯಕ್ಷರಿಗೆ, ಸೇವ್ ಕಬಿನಿ ತಂಡದ ಪರವಾಗಿ ವಕೀಲ ವಿ.ರವಿಕುಮಾರ್ ಎರಡು ದೂರುಗಳನ್ನು ಸಲ್ಲಿಸಿ, ಕಬಿನಿ ಇಎಸ್‌ಝಡ್ ವಲಯದ ಅಕ್ರಮ ಮರಳು ಮತ್ತು ಮಣ್ಣು ಗಣಿಗಾರಿಕೆ ಹಾಗೂ ಬಂಡೀಪುರ ಇಎಸ್‌ಝಡ್ ವಲಯದ ಅಕ್ರಮ ನಿರ್ಮಾಣ ಮತ್ತು ಪ್ಲಾಸ್ಟಿಕ್ ತ್ಯಾಜ್ಯದ ಅಪಾಯದ ಬಗ್ಗೆ ವಿವರಣೆ ನೀಡಿದ್ದಾರೆ.

ನಾಗರಹೊಳೆ–ಕಬಿನಿ ಪರಿಸರ ಸೂಕ್ಷ್ಮ ವಲಯದಲ್ಲಿ ಅಕ್ರಮವಾಗಿ ಭಾರೀ ಪ್ರಮಾಣದ ಮರಳು ಮತ್ತು ಮಣ್ಣು ತೆಗೆಯಲಾಗುತ್ತಿದೆ. ಕಬಿನಿ ಜಲಾಶಯ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್, 2026ರ ಜ.17ರಂದು ಕಾನೂನು ಬಾಹಿರವಾಗಿ ಮಾಜಿ ಶಾಸಕ ಚಿಕ್ಕಣ್ಣ ಅವರಿಗೆ 135 ಘನ ಮೀಟರ್ ಮಣ್ಣು ತೆಗೆಯಲು ಅನುಮತಿ ನೀಡಿದ್ದಾರೆ. ಆದರೆ ಅವರು ನೀರಾವರಿ ಇಲಾಖೆ ಅಧಿಕಾರಿಗಳ ಸಹಕಾರದಿಂದ ಕಬಿನಿ ಹಿನ್ನೀರು ಪ್ರದೇಶದಲ್ಲಿ 1000 ಘನ ಮೀಟರ್‌ಗಿಂತ ಹೆಚ್ಚು ಮಣ್ಣು/ಮರಳು ತೆಗೆದಿದ್ದಾರೆ. ನಿಷೇಧಿತ ವಲಯದಲ್ಲಿ ಭಾರೀ ಯಂತ್ರೋಪಕರಣಗಳನ್ನು ಬಳಸಲಾಗುತ್ತಿದೆ. ಪರವಾನಗಿ ಇಲ್ಲದ, ನೋಂದಣಿ ಸಂಖ್ಯೆಯಿಲ್ಲದ ಟ್ರ್ಯಾಕ್ಟರ್‌ಗಳಲ್ಲಿ ಸಾಗಣೆ ಮಾಡಲಾಗುತ್ತಿದೆ. ಸಮಯ ಮಿತಿ, ವಾಹನ ವಿವರ, ಮೇಲ್ವಿಚಾರಣೆ ಯಾವುದೂ ಇಲ್ಲ. ಮೇಲ್ವಿಚಾರಣೆ ಸಮಿತಿ ಅನುಮತಿ ಇಲ್ಲದೆ ಕೃಷಿಯ ಹೆಸರಿನಲ್ಲಿ ವಾಣಿಜ್ಯ ಗಣಿಗಾರಿಕೆ ನಡೆಯುತ್ತಿದೆ. ಕಳೆದ 13 ದಿನಗಳಿಂದ ಈ ಅಕ್ರಮ ಚಟುವಟಿಕೆ ನಡೆಯುತ್ತಿದ್ದರೂ ಯಾವುದೇ ಕ್ರಮ ವಹಿಸದೆ ಅಧಿಕಾರಿಗಳು ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ದೂರಿನಲ್ಲಿ ಆರೋಪಿಸಿದ್ದಾರೆ.

ಹೀಗೆಯೇ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಖಾಸಗಿ ರಿಸಾರ್ಟ್‌ನಲ್ಲಿ ಸುಮಾರು 30 ಹೆಚ್ಚುವರಿ ಕಾಟೇಜ್‌ಗಳನ್ನು ಅಕ್ರಮವಾಗಿ ನಿರ್ಮಿಸುತ್ತಿರುವ ಆರೋಪವಿದೆ. ರೆಸಾರ್ಟ್ ಆವರಣದಲ್ಲಿ ಪ್ಲಾಸ್ಟಿಕ್ ತ್ಯಾಜ್ಯವನ್ನು ಗುಂಡಿ ತೋಡಿ ಹೂತು ಹಾಕಲಾಗುತ್ತಿದೆ. ಇದು ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ನಿಯಮಗಳು ಹಾಗೂ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನಿಯಮಗಳ ಸ್ಪಷ್ಟ ಉಲ್ಲಂಘನೆಯಾಗಿದೆ. ಪ್ಲಾಸ್ಟಿಕ್ ಕಚ್ಚಿಕೊಂಡು ಸಂಚರಿಸುವ ಜಿಂಕೆಗಳ ಗುಂಪು(ಸ್ಪಾಟೆಡ್ ಡೀರ್) ಕಂಡು ಬಂದಿದ್ದು, ಇದು ವನ್ಯಜೀವಿಗಳಿಗೆ ತೀವ್ರ ಅಪಾಯಕಾರಿಯಾಗಿದೆ. ಕೂಡಲೇ ಈ ಬಗ್ಗೆ ಗಂಭೀರ ಕ್ರಮ ವಹಿಸಿ, ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು ಎಂದು ಆಗ್ರಹಿಸಿದ್ದಾರೆ.

ಅವಧಿ ವಿಸ್ತರಣೆ

ಮೈಸೂರು: ಜಿಲ್ಲಾ ಅಧಿಕಾರಿಗಳ ಕಾರ್ಯಾಲಯ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು, ಪ್ರವರ್ಗ–1 ಅಲೆಮಾರಿ, ಅರೆ ಅಲೆಮಾರಿ ವಿದ್ಯಾರ್ಥಿಗಳಿಂದ ಅರ್ಜಿ ಸಲ್ಲಿಸಲು ಫೆ.15ರವರೆಗೆ ವಿಸ್ತರಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯವಾಣಿ ಸಂಖ್ಯೆ: 8050770004 ಸಂಪರ್ಕಿಸಬಹುದು.

ಖಾಸಗಿ ಆಸ್ಪತ್ರೆಗಳ ಸಂಘದ ಅಧ್ಯಕ್ಷ ಡಾ.ಯೋಗಣ್ಣರ ಮೇಲೆ ಹಲ್ಲೆ ನಡೆಸಿದವರ ಬಂಧನಕ್ಕೆ ಆಗ್ರಹ

ಮೈಸೂರು,ಜ.31(ಜಿಎ)–ಮೈಸೂರಿನ ಸುಯೋಗ್ ಆಸ್ಪತ್ರೆ ಮುಖ್ಯಸ್ಥರು ಹಾಗೂ ಖಾಸಗಿ ಆಸ್ಪತ್ರೆಗಳ ಸಂಘದ ಅಧ್ಯಕ್ಷರೂ ಆದ ಡಾ.ಎಸ್.ಪಿ.ಯೋಗಣ್ಣ ಅವರ ಮೇಲೆ ಹಲ್ಲೆ ಮಾಡಿರುವುದು ಖಂಡನಾರ್ಹ. ಕೂಡಲೇ ಪೊಲೀಸರು ಆರೋಪಿಗಳನ್ನು ಬಂಧಿಸುವಂತೆ ಮೈಸೂರು ನಗರ ಸಂಘ–ಸಂಸ್ಥೆ, ಸಾಹಿತ್ಯ ಒಕ್ಕೂಟ ಒತ್ತಾಯಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಹಿರಿಯ ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ ಈ ವಿಷಯ ತಿಳಿಸಿ, ಜ.19ರಂದು ದಟ್ಟಗಳ್ಳಿಯಲ್ಲಿರುವ ನಯನಕುಮಾರ್ ಆಸ್ಪತ್ರೆಯಲ್ಲಿ ಯುವಕನೊಬ್ಬ ಅಪೆಂಡಿಕ್ಸ್‌ನಿಂದ ಸಾವನ್ನಪ್ಪಿದ ಹಿನ್ನೆಲೆಯಲ್ಲಿ ರೋಗಿಯ ಕಡೆಯವರು ಆಸ್ಪತ್ರೆ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದರು. ವಿಷಯ ತಿಳಿದ ತಕ್ಷಣ ಖಾಸಗಿ ಆಸ್ಪತ್ರೆಗಳ ಸಂಘದ ಅಧ್ಯಕ್ಷ ಡಾ.ಎಸ್.ಪಿ. ಯೋಗಣ್ಣ ಆಸ್ಪತ್ರೆಗೆ ತೆರಳಿ ರೋಗಿ ಬಗ್ಗೆ ಮಾಹಿತಿ ಪಡೆದುಕೊಳ್ಳಲು ಕೇಸ್‌ಶೀಟ್ ಓದುತ್ತಿದ್ದಾಗ ಅವರ ಮೇಲೆ ಹಲ್ಲೆ ಮಾಡಿದ್ದಾರೆ ಎಂದು ಹೇಳಿದರು.

ಹಲ್ಲೆ ಮಾಡಿದ ಕರ್ನಾಟಕ ರಕ್ಷಣಾ ವೇದಿಕೆ ಪದಾಧಿಕಾರಿಗಳು ಎಂದು ಹೇಳಿಕೊಳ್ಳುವ ಸ್ಮಿತಾ, ಪವನ್ ಸಿದ್ದರಾಮಯ್ಯ, ಬಸವರಾಜ್ ಮತ್ತಿತರರ ವಿರುದ್ಧ ಕುವೆಂಪು ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ. ಇವರನ್ನು ಬಂಧಿಸಿ, ಕಾನೂನು ಕ್ರಮ ಜರುಗಿಸಬೇಕು ಎಂದು ಆಗ್ರಹಿಸಿದರು. ಗೋಷ್ಠಿಯಲ್ಲಿ ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಹಿಮಾಲಯ ಪ್ರತಿಷ್ಠಾನ ಅಧ್ಯಕ್ಷ ಅನಂತ್, ಡಾ.ಕೃಷ್ಣ ಮೂರ್ತಿ ಸಂಶೋಧನಾ ಪ್ರತಿಷ್ಠಾನ ನಿರ್ದೇಶಕ ಡಾ.ಕೆ.ಲೀಲಾ ಪ್ರಕಾಶ್, ಕರ್ನಾಟಕ ಸೇನಾಪಡೆ ಅಧ್ಯಕ್ಷ ತೇಜಸ್ ಲೋಕೇಶ್‌ಗೌಡ ಉಪಸ್ಥಿತರಿದ್ದರು.

ನಿಧನ



ನಯಾಜ್ ಅಹಮದ್ ಷರೀಫ್

ಮೈಸೂರು, ಜ. 31– ಮೈಸೂರಿನ ಬನ್ನಿಮಂಟಪದ ನೂರ್ ಮಸೀದಿ ಹಿಂಭಾಗದ ಎ ಲೇಔಟ್ ನಿವಾಸಿ ನಯಾಜ್ ಅಹಮದ್ ಷರೀಫ್ (71) ಇಂದು (ಜ. 31) ನಿಧನರಾದರು. ಮೃತರು ಇಬ್ಬರು ಪುತ್ರಿಯರು, ಮೂವರು ಸಹೋದರಿಯರು, ಇಬ್ಬರು ಸಹೋದರರು ಮತ್ತು ಅಪಾರ ಬಂಧುಗಳು, ಸ್ನೇಹಿತರು ಹಾಗೂ ಹಿತೈಷಿಗಳನ್ನು ಅಗಲಿದ್ದಾರೆ. ಇಂದು ಅಸರ್ ಸಲಾತ್ ನಂತರ ಈದ್ಗಾ ಮಸೀದಿ, ಮಿಷನ್ ಆಸ್ಪತ್ರೆ ರಸ್ತೆ, ಮೈಸೂರು ಇಲ್ಲಿ ನಮಾಜ್–ಎ–ಜನಾಜಾ (ಅಂತ್ಯಕ್ರಿಯೆಯ ಪ್ರಾರ್ಥನೆ) ನೆರವೇರಿಸಿ, ಬಳಿಕ ಮೈಸೂರಿನ ಟಿಪ್ಪು ಸರ್ಕಲ್ ಬಳಿ ಇರುವ ಮುಸ್ಲಿಮರ ರುದ್ರಭೂಮಿ ಗೇಟ್ ನಂ.5ರಲ್ಲಿ ಮೃತರ ಅಂತ್ಯ ಸಂಸ್ಕಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

1.2.2026 ಭಾನುವಾರ, ಮಳೆ ನಕ್ಷತ್ರ: ಶ್ರವಣ 24.01.2026 ರಿಂದ 05.02.2026
ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಶುಕ್ಲ ಪಕ್ಷ,
ತಿಥಿ: ಹುಣ್ಣಿಮೆ, ನಕ್ಷತ್ರ: ಪುಷ್ಯ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

- **ಸಿಲ್ಕ್ ಇಂಡಿಯಾ–2026 :** ಸಿಲ್ಕ್ ಇಂಡಿಯಾ ಸೀರೆ ಪ್ರದರ್ಶನ, ಸ್ಥಳ: ನಂಜರಾಜ ಬಹದ್ದೂರ್ ಛತ್ರ, ವಿನೋಬಾ ರಸ್ತೆ, ಬೆಳಗ್ಗೆ 10ರಿಂದ.
- **ಬೇವಿನ ಮರದ ಶ್ರೀ ಯಲ್ಲಮ್ಮ ದೇವಸ್ಥಾನ:** 78ನೇ ವರ್ಷದ ಮಹೋತ್ಸವ, ವ್ಯಾಸ ಹುಣ್ಣಿಮೆ ದಿನದಂದು ಬೆಳಗ್ಗೆ ಪೂಜೆ, ಮಹಾಭಿಷೇಕ, ಮಧ್ಯಾಹ್ನ 12 ಗಂಟೆಗೆ ಮಹಾಮಂಗಳಾರತಿ, ಸಂಜೆ 7ಕ್ಕೆ ಶ್ರೀ ಯಲ್ಲಮ್ಮ ದೇವರ ಉತ್ಸವ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸ್ಥಳ: ದೇವಸ್ಥಾನ, ನಾಲಾಬೀದಿ, ಕೆಆರ್.ಮೊಹಲ್ಲಾ.
- **ಕಲಾ ಸಂದೇಶ ಪ್ರತಿಷ್ಠಾನ:** ನೃತ್ಯೋಪಾಸನಾ–2026, ಸಂಜೆ 6ರಿಂದ ವಿದುಷಿ ಪವನ್‌ಕುಮಾರ್ ಅವರಿಂದ ಸೋಲೋ ಭರತನಾಟ್ಯ ಗಾಯನ, ಸಂಜೆ 7ರಿಂದ ಸಂದೇಶ್ ಭಾರ್ಗವ್ ಮತ್ತು ಶಿಷ್ಯರಿಂದ ಸಪ್ತನಿಧಿ ನಮನ ಭರತನಾಟ್ಯ ನೃತ್ಯ ನಾಟಕ, ಸ್ಥಳ: ಗಾನಭಾರತೀ ರಮಾಗೋವಿಂದ ಕಲಾವೇದಿಕೆ, ಕುವೆಂಪುನಗರ.
- **ವ್ಯವಸ್ಥಾಪಕರು :** ಭರತ ಹುಣ್ಣಿಮೆ ಅಂಗವಾಗಿ ಓಂ ಶ್ರೀ ಎಲ್ಲಮ್ಮತಾಯಿ ಅಮ್ಮನವರ 22ನೇ ಪೂಜಾ ಮಹೋತ್ಸವ, ಬೆಳಗ್ಗೆ 6 ಗಂಟೆಗೆ ಅಭಿಷೇಕ, ಶ್ರೀ ಗಣಹೋಮ, ನವಗ್ರಹ ಹೋಮ, ಶ್ರೀ ರೇಣುಕಾದೇವಿ ಹೋಮ, ಶ್ರೀ ದುರ್ಗಾ ಹೋಮ, ಮೃತ್ಯುಂಜಯ ಹೋಮ, ಪೂರ್ಣಾಹುತಿ, ಕನ್ಯಾ ಪೂಜೆ, ಶ್ರೀ ಎಲ್ಲಮ್ಮ ಚರಿತ್ರೆ ಮತ್ತು ಚೌಡಿಕೆ ನಾದ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಮಧ್ಯಾಹ್ನ 1ಕ್ಕೆ ಅನ್ನಸಂತರ್ಪಣೆ, ಸ್ಥಳ: ಮನೆ ನಂ. 822, ಶ್ರೀ ರಾಜರಾಜೇಶ್ವರಿ ನಿಲಯ, ರಾಮಾನುಜ ರಸ್ತೆ, ಕೆ.ಆರ್. ಮೊಹಲ್ಲಾ.
- **ಸಂಚಲನ ಮೈಸೂರು:** ಸಂಚಲನ ದಶಮಾನೋತ್ಸವ, ಬೆಳಗ್ಗೆ 11ಕ್ಕೆ ಸಭಾ ಕಾರ್ಯಕ್ರಮ, ಉಪಸ್ಥಿತರು: ಅರಳಿ ಸೇವಾ ಟ್ರಸ್ಟ್ ಸಂಸ್ಥಾಪಕ ಎ.ಎಸ್.ವೆಂಕಟೇಶ್, ಉಪ ಆಯುಕ್ತ ಮಂಜುನಾಥ ಸೋಸಲೆ, ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಂಗೇಗೌಡ, ಕೃಷಿ ಇಲಾಖೆ ನಿವೃತ್ತ ಸಹಾಯಕ ನಿರ್ದೇಶಕ ಡಾ.ಎಸ್.ಟಿ.ಚಂದ್ರೇಗೌಡ; ಮಧ್ಯಾಹ್ನ 3ಕ್ಕೆ ಸಭಾ ಕಾರ್ಯಕ್ರಮ, ಉಪಸ್ಥಿತರು: ಜಾನಪದ ಕಲಾವಿದರ ಒಕ್ಕೂಟದ ಅಧ್ಯಕ್ಷ ಆರ್.ಕೆ. ಸ್ವಾಮಿ, ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ಸದಸ್ಯ ಜಿ.ಬಿ.ಎಸ್. ಸಿದ್ದೇಗೌಡ, ಮೈಸೂರು ಜಿಲ್ಲಾ ಹವ್ಯಾಸಿ ರಂಗಕರ್ಮಿಗಳ ವೇದಿಕೆ ಅಧ್ಯಕ್ಷ ರಾಜೇಶ್ ತಲಕಾಡು, ಉಲ್ಲಾಸ್ ದೇವನೂರು; ಸಂಜೆ 6ಕ್ಕೆ ಸಭಾ ಕಾರ್ಯಕ್ರಮ, ಉಪಸ್ಥಿತರು: ಮಾಜಿ ಶಾಸಕ ಎಲ್.ನಾಗೇಂದ್ರ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ವಕೀಲರ ಸಂಘದ ಅಧ್ಯಕ್ಷ ಲೋಕೇಶ್, ಯುವ ಮುಖಂಡ ಸುರೇಶ್, ಎಂ.ಪಿ.ಹರಿದತ್ತ, ಸ್ಥಳ: ಕಿರು ರಂಗಮಂದಿರ, ಸಂಜೆ 6ಕ್ಕೆ.
- **ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನ, ಶ್ರೀ ಸುಬ್ರಹ್ಮಣ್ಯ ಸ್ವಾಮಿ ಟೆಂಪಲ್ ಟ್ರಸ್ಟ್ :** 60ನೇ ವರ್ಷದ ತೈಪೂಸಂ ಮಹೋತ್ಸವ–2026, ಬೆಳಗ್ಗೆ 4.45ಕ್ಕೆ ಸಂಕಲ್ಪ ಶ್ರೀ ಸ್ವಾಮಿಯವರಿಗೆ ಕ್ಷೀರಾಭಿಷೇಕ, ಪಳನಿ ಪಂಚಾಮೃತ ಅಭಿಷೇಕ, ರುದ್ರಾಭಿಷೇಕ, ವಿಶೇಷ ಅಲಂಕಾರ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಸಂಜೆ 6.30ಕ್ಕೆ ಶ್ರೀ ವಲ್ಲಿದೇವಸೇನಾ ಸಮೇತ ಶ್ರೀ ಸುಬ್ರಹ್ಮಣ್ಯಸ್ವಾಮಿಯವರ ಉತ್ಸವ, ಸ್ಥಳ: ದೇವಸ್ಥಾನದ ಪ್ರಾಂಗಣ, ವಿಶ್ವೇಶ್ವರನಗರ.
- **ಪ್ರೀಮಿಯರ್ ಓಪನ್ ಗ್ರೂಪ್ :** ವಾರ್ಷಿಕೋತ್ಸವ ಸಂಭ್ರಮಾಚರಣೆ, ಸಾಧಕರಿಗೆ ಗೌರವ ಸಮರ್ಪಣೆ, ಅಧ್ಯಕ್ಷತೆ : ಗ್ರೂಪ್‌ನ ಆರ್.ಪಿ. ಚಂದ್ರು, ಉಪಸ್ಥಿತರು : ಶಾಸಕ ಕೆ. ಹರೀಶ್‌ಗೌಡ, ಡಿ. ರವಿಶಂಕರ್, ಬಿ.ಕೆ. ಬಸವರಾಜು, ಪಿ.ವಿಶ್ವನಾಥ್, ಡಾ. ಕೆ.ಬಿ. ಗುರುಮೂರ್ತಿ, ಅಬ್ದುಲ್ ಜಮೀಲ್, ಸ್ಥಳ: ಪ್ರೀಮಿಯರ್ ಓಪನ್ ಗ್ರೂಪ್, ಬೆಳಗ್ಗೆ 10.30ಕ್ಕೆ.
- **ಬಸವ ಸಮಿತಿ:** ಶರಣ ಸಂಗಮ, ನಿವೃತ್ತ ವಾಣಿಜ್ಯ ತೆರಿಗೆ ಅಧಿಕಾರಿ ಬಿ.ವಿ.ಉಮಾಕಾಂತ ಅವರಿಂದ ವಚನ ಧರ್ಮ ಕುರಿತು ಉಪನ್ಯಾಸ, ಅಭಿನಂದಿತರು: ಸಮಿತಿ ಅಧ್ಯಕ್ಷ ಎಂ.ಚಂದ್ರಶೇಖರ್, ಅಧ್ಯಕ್ಷತೆ: ಹೆಚ್.ವಿ. ಬಸವರಾಜು, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ
- **ಸ್ವಜನ್ಯ ಕಲಾ ವೇದಿಕೆ, ಭಾಗೀರಥಿ ಪ್ರಕಾಶನ, ಶ್ರೀ ಶಾರದಾ ಪ್ರಕಾಶನ :** ಶಂಕರನಾರಾಯಣ ಅವರ ಪುರುಷಾರ್ಥ ಹಾಗೂ ಎಸ್.ಶಿಶಿರಂಜನ್ (ಶಿಶಿರ) ಅವರ ಇದೆಂಥಾ ದೇಶಪ್ರೇಮ ರೀ?! ಪುಸ್ತಕಗಳ ಲೋಕಾರ್ಪಣೆ ಸಮಾರಂಭ, ಉದ್ಘಾಟನೆ: ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಕುಮಾರ್, ಕೃತಿಗಳ ಲೋಕಾರ್ಪಣೆ: ಸಾಹಿತಿ ಡಾ.ಕೆ.ಅನಂತರಾಮು, ಅಧ್ಯಕ್ಷತೆ: ಹಿರಿಯ ಪತ್ರಕರ್ತ ಅಂಶಿಪ್ರಸನ್ನಕುಮಾರ್, ಮುಖ್ಯ ಅತಿಥಿಗಳು: ಶಾಸಕ ಟಿ.ಎಸ್.ಶ್ರೀವತ್ಸ, ಮಾಜಿ ಶಾಸಕ ಎಲ್.ನಾಗೇಂದ್ರ, ಮಹಾರಾಜ ಎಜುಕೇಷನಲ್ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ಡಾ.ಮುರಳಿ, ಉಪಸ್ಥಿತರು: ಕೃತಿಕಾರರಾದ ಶಂಕರನಾರಾಯಣ, ಎಸ್.ಶಿಶಿರಂಜನ್, ಸ್ಥಳ: ಗೋಪಾಲಸ್ವಾಮಿ ಪಿಯು ಕಾಲೇಜು, ನಂಜು ಮಳಿಗೆ ಹತ್ತಿರ, ಬೆಳಗ್ಗೆ 10.30ಕ್ಕೆ.
- **ನನ್ನವ್ವ ಸಾಂಸ್ಕೃತಿಕ ಕಲಾತಂಡ:** ಕನ್ನಡ ರಾಜ್ಯೋತ್ಸವ, ರಾಜ್ಯ ಮಟ್ಟದ ಕವಿಗೋಷ್ಠಿ, ಉದ್ಘಾಟನೆ: ಇನ್ವೆಂಟಿಕ್ ಫೌಂಡೇಷನ್ ಸಿಇಓ ಕೆಂಪೇಗೌಡ, ಅಧ್ಯಕ್ಷತೆ: ವಿಶ್ರಾಂತ ಶಿಕ್ಷಕ ಡಾ.ನಾ. ಗಂಗಾಧರಪ್ಪ, ಉಪಸ್ಥಿತರು : ಕನ್ನಡ ಸಾಹಿತ್ಯ ಪರಿಷತ್, ಬನ್ನೂರು ಹೋಬಳಿ ಘಟಕದ ಅಧ್ಯಕ್ಷ ವೈ.ಎ. ಪುಟ್ಟರಾಜು, ಕವಯಿತ್ರಿ ಪ್ರಭ ಶಾಸ್ತ್ರಿ ಜೋಶ್ಯುಲ, ಸ್ಥಳ: ನಮನ ಕಲಾ ಮಂಟಪ, ಅಶೋಕ ವೃತ್ತ, ಬೆಳಗ್ಗೆ 11ಕ್ಕೆ.
- **ವ್ಯವಸ್ಥಾಪಕರು:** ಶ್ರೀ ಪಂಚಶನೇಶ್ವರಸ್ವಾಮಿ ಆರಾಧನಾ ಮಹೋತ್ಸವ ಹಾಗೂ ಮಲೆಯಾಳದ ಹುತ್ತೂರಮ್ಮನ ಜಾತ್ರೆ, ಸಾನ್ನಿಧ್ಯ: ಡಾ. ಶ್ರೀ ನಿಶ್ಚಲಾನಂದನಾಥಸ್ವಾಮೀಜಿ, ಶ್ರೀ ಬಿ.ಎಸ್. ಜ್ಞಾನಾನಂದ ಚೆನ್ನರಾಜೇ ಅರಸ್, ಉದ್ಘಾಟನೆ: ಶ್ರೀ ತ್ರಿನೇತ್ರ ಮಹಾನಂದಯೋಗಿ ಸ್ವಾಮೀಜಿ, ಉಪಸ್ಥಿತರು: ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಸ್ಥಿತರು: ಶಾಸಕ ಟಿ.ಎಸ್.ಶ್ರೀವತ್ಸ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಸಚಿವ ಕೆ.ವೆಂಕಟೇಶ್, ಶಿವಪ್ರಕಾಶ್ ಗುರೂಜಿ, ಕೆ.ಜಿ.ದೇವರಾಜ್, ಎಂ.ಎಸ್.ರಮೇಶ್ ಕುಮಾರ್, ಟಿ.ಶೈಲೇಂದ್ರಕುಮಾರ್, ಮಾ. ವೆಂಕಟರಾಮ್, ಸ್ಥಳ: ಕಮಾನ್ ಗೇಟ್ ಪಕ್ಕದಲ್ಲಿರುವ ಲಲಿತ ಮಹಲ್ ಹೋಟೆಲ್ ಮುಂಭಾಗದ ಹಸಿರು ಚಪ್ಪರದ ಆವರಣ, ಸಿದ್ದಾರ್ಥನಗರ, ಮಧ್ಯಾಹ್ನ 1ಕ್ಕೆ.
- **ಶ್ರೀ ಬಾಲಮುರಳಿ ಮ್ಯೂಸಿಕಲ್ ಗ್ರೂಪ್ :** ಮಧುರ ಗೀತೆಗಳ ಸುಮಧುರ ಸಂಜೆ ಕರೋಕೆ ಗಾಯನ ಕಾರ್ಯಕ್ರಮ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ನಂಜು ಮಳಿಗೆ ಸರ್ಕಲ್, ಸಂಜೆ 4.30ಕ್ಕೆ.
- **ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ :** ಮಧ್ವ–ಪುರಂದರ ನಮನ, ಗಾನಸಿರಿ ವೇದಾಂತ ಲಹರಿ ಭಾಗ– 13ರ ಅಂಗವಾಗಿ 18 ಪುರಾಣಗಳ ವಿಶ್ಲೇಷಣೆಯ ಸಮಗ್ರ ಪುರಾಣ ದರ್ಶನ ಕಾರ್ಯಕ್ರಮ, 'ವಿಷ್ಣುಪುರಾಣ ಮತ್ತು ವಾಮನ ಪುರಾಣ', ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಸಂಜೆ 5 ರಿಂದ.
- **ಸಂಸ್ಕೃತಿ ಟ್ರಸ್ಟ್ :** ನಾದ ನೃತ್ಯೋತ್ಸವ, ಉದ್ಘಾಟನೆ : ನೃತ್ಯಗಿರಿ ನಿರ್ದೇಶಕಿ ಡಾ. ಕೃಪಾ ಫಡ್ಕೆ, ಮುಖ್ಯ ಅತಿಥಿಗಳು : ರಂಗಭೂಮಿ ನಟಿ ಶ್ರೀಮತಿ ಸುಷ್ಮಾ ನಾಣಯ್ಯ, ಸಂಸ್ಕೃತಿ ಸಂಸ್ಥಾಪಕ ಟ್ರಸ್ಟಿ ಶ್ರೀಮತಿ ಡಿ. ಛಾಯಾ, ಶ್ರೀ ರಾಜೇಶ್ವರಿ ವಸ್ತ್ರಾಲಂಕಾರ ಮಾಲೀಕ ಬಿ.ಎಂ. ರಾಮಚಂದ್ರ, ಸ್ಥಳ: ಕೆಎಸ್‌ಜಿಹೆಚ್ ರಂಗಮಂದಿರ, ಅಶೋಕ ವೃತ್ತ, ಸಂಜೆ 5.30 ರಿಂದ.
- **ಸಾಧನಾ ಮಂದಿರ(ಮೈಸೂರು):** ಸರಳವಾಗಿ ಕಲಿತು ಅರ್ಥ, ಸಂಕೇತ, ಮಹತ್ವ ಪ್ರಾಮುಖ್ಯತೆ, ಪ್ರಯೋಜನ ಹಾಗೂ ವಿಧಾನಗಳ ಸಹಿತ ಸರಸ್ವತಿ ಪೂಜೆ ವಿಶೇಷ ತರಬೇತಿ ಸ್ವಾಮಿ ಹಂಸಾನಂದ ಅವರಿಂದ. ಸ್ಥಳ: ಶ್ರೀ ಪ್ರಸನ್ನ ಮಹಾಗಣಪತಿ ದೇವಸ್ಥಾನ, ಗಣಪತಿ ಟೆಂಪಲ್ ರಸ್ತೆ, ಎನ್.ಆರ್.ಮೊಹಲ್ಲಾ, ಸಂಜೆ 6.30ರಿಂದ.
- **ಶ್ರೀ ಮಡಿವಾಳ ಮಾಚಿದೇವರ 926ನೇ ಜಯಂತೋತ್ಸವ ಸಮಿತಿ :** ಶ್ರೀ ಮಡಿವಾಳ ಮಾಚಿದೇವರ 926ನೇ ಜಯಂತೋತ್ಸವ ಕಾರ್ಯಕ್ರಮ, ಬೆಳಗ್ಗೆ 9 ಗಂಟೆಗೆ ಕೋಟೆ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದಿಂದ ಮೆರವಣಿಗೆ, 501 ಕಳಸ, 7 ಸಾಂಸ್ಕೃತಿಕ ತಂಡ, ಶ್ರೀ ಮಡಿವಾಳ ಮಾಚಿದೇವರ ಅಶ್ವರೂಢ ವೇಷಧಾರಿ, ಅನುಭವ ಮಂಟಪ ಸಹಿತ ಸ್ತಬ್ಧಚಿತ್ರಗಳು ಮೆರವಣಿಗೆ, ಮಧ್ಯಾಹ್ನ 12 ಗಂಟೆಗೆ ಶಾಸಕ ಕೆ.ಹರೀಶ್‌ಗೌಡ ಅಧ್ಯಕ್ಷತೆಯಲ್ಲಿ ವೇದಿಕೆ ಕಾರ್ಯಕ್ರಮ, ಸ್ಥಳ: ಕಲಾಮಂದಿರ.
- **ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು:** ಬೆಳದಿಂಗಳ ಸಂಗೀತ –288, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಪಂಡಿತ್ ಎಂ. ವೆಂಕಟೇಶ್‌ಕುಮಾರ್ ಅವರಿಂದ ಗಾಯನ, ಪ್ರೊ. ನರೇಂದ್ರ ಎಲ್. ನಾಯಕ್–ಹಾರ್ಮೋನಿಯಂ, ಪಂಡಿತ್ ಕೇಶವ ಜೋಷಿ–ತಬಲ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6ಕ್ಕೆ.
- **ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನ:** ತಿಂಗಳ ತಿಳಿವು ಉಪನ್ಯಾಸ ಕಾರ್ಯಕ್ರಮ, ದಿವ್ಯ ಆಶೀರ್ವಾದ: ರಾಮಕೃಷ್ಣ ಆಶ್ರಮದ ಅಧ್ಯಕ್ಷ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್, ಜಾನಪದ ವಿದ್ವಾಂಸ ಡಾ.ಪಿ.ಕೆ.ರಾಜಶೇಖರ, ಸಂಜೆ 6ರಿಂದ ಸಂಗೀತ ಕಾರ್ಯಕ್ರಮ, ಉಪಸ್ಥಿತರು: ಮಾಜಿ ಎಂಎಲ್‌ಸಿ ಡಿ.ಮಾದೇಗೌಡ, ಡಾ.ಎಸ್.ಪಿ.ಯೋಗಣ್ಣ, ಬಸವಣ್ಣ, ಕೆ.ಕೆಂಪಲಿಂಗರಾಜು, ಎಸ್.ಪುರುಷೋತ್ತಮ್, ಅಮೃತ, ಬೋರೇಗೌಡ, ಸ್ಥಳ: ಶ್ರೀರಾಮಕೃಷ್ಣ ದಿವ್ಯ ಮಂದಿರ, ರಾಮಕೃಷ್ಣನಗರ, ಸಂಜೆ 6ಕ್ಕೆ.
- **ದೀಕ್ಷಿತ್ ಆರೋಗ್ಯ ಧಾಮ :** ಹುಣ್ಣಿಮೆ ಮಾಸದ ಕಾರ್ಯಕ್ರಮ, ವಿದ್ವಾನ್ ಕೆ. ಭಾಸ್ಕರನ್ ಅವರಿಂದ ಕೊಳಲು ವಾದನ, ನಂದನ್ ಭಾಸ್ಕರನ್–ಮೃದಂಗ, ಡಾ. ಸಿ.ಎಸ್. ಅನಿಲ್ ಕುಮಾರ್ ಅವರಿಂದ ದೀರ್ಘ ಪ್ರಾಣ ಕುರಿತು ಉಪನ್ಯಾಸ, ಸ್ಥಳ: ದೀಕ್ಷಿತ್ ಆರೋಗ್ಯ ಧಾಮ, ವಿಜಯನಗರ 3ನೇ ಹಂತ, ಸಂಜೆ 6 ರಿಂದ.
- **ರಂಗಾಯಣ:** ಭಾರತೀಯ ರಂಗ ಶಿಕ್ಷಣ ಕೇಂದ್ರದ ವಿದ್ಯಾರ್ಥಿಗಳಿಂದ ವಿಗಡ ವಿಕ್ರಮರಾಯ ನಾಟಕ ಪ್ರದರ್ಶನ, ನಿರ್ದೇಶನ: ಸಾಲಿಯಾನ್ ಉಮೇಶ್ ನಾರಾಯಣ, ಸ್ಥಳ: ವನರಂಗ, ರಂಗಾಯಣ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಷಡಕ್ಷರಿ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾ ಯಾನ–ಜನ ಮೆಚ್ಚಿದ ಕನ್ನಡ ಚಿತ್ರಗಳ ನೆನಪಿನ ಮಾಲೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ : ಜಯಂತಿ.ವಿ.ಭಟ್, ವ್ಯಾಖ್ಯಾನ: ಡಾ.ಕಬ್ಬಿನಾಲೆ ವಸಂತಭಾರದ್ವಾಜ್, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ, ಡಾ.ಎಸ್.ಎಲ್.ಭೈರಪ್ಪ ಅವರ ದೂರ ಸರಿದರು ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್.ಎಸ್., 8.30 ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ ಕಣ್ಣಿನ ಪೊರೆ ಲಕ್ಷಣಗಳು ಮತ್ತು ಚಿಕಿತ್ಸೆ ಕುರಿತು ಚನ್ನಪಟ್ಟಣದ ಚಾಮುಂಡೇಶ್ವರಿ ವೈದ್ಯಕೀಯ ಮಹಾ ವಿದ್ಯಾಲಯದ ನೇತ್ರ ತಜ್ಞರಾದ ಡಾ.ಅನನ್ಯ. ಇವರೊಂದಿಗೆ ಭಾಗವಹಿಸುತ್ತಾರೆ– ತೇಜಸ್ವಿನಿ ಗಿರೀಶ್, 10.10 Live Broadcast of the presentation of the union Budjet 2026–27, 2026–27ನೇ ಸಾಲಿನ ಕೇಂದ್ರ ಮುಂಗಡ ಪತ್ರ ಕುರಿತ ನೇರ ದ್ವಿಭಾಷಾ ಚರ್ಚೆ ನಂತರ ಕೇಂದ್ರ ಹಣಕಾಸು ಸಚಿವ ರಾದ ನಿರ್ಮಲಾ ಸೀತಾರಾಮನ್ ಅವರು ಮಂಡಿಸಲಿರುವ 2026–27 ಸಾಲಿನ ಕೇಂದ್ರ ಮುಂಗಡ ಪತ್ರ ಮಂಡನೆಯ ನೇರಪ್ರಸಾರ, 3.10 2026–27ನೇ ಸಾಲಿನ ಕೇಂದ್ರ ಮುಂಗಡ ಪತ್ರ ಕುರಿತ ನೇರ ದ್ವಿಭಾಷಾ ಚರ್ಚೆ, 4.10 2026–27ನೇ ಸಾಲಿನ ಕೇಂದ್ರ ಮುಂಗಡ ಪತ್ರ ಕುರಿತ ನೇರ ದ್ವಿಭಾಷಾ ಚರ್ಚೆ, 5.10 2026–27ನೇ ಸಾಲಿನ ಕೇಂದ್ರ ಮುಂಗಡ ಪತ್ರ ಕುರಿತ ನೇರ ದ್ವಿಭಾಷಾ ಚರ್ಚೆ, 6.15 9.05 ಗರ್ಭಕಂಠದ ಕ್ಯಾನ್ಸರ್ ಕುರಿತ ಜಾಗೃತಿ ಕಾರ್ಯಕ್ರಮ, ಪ್ರಾಯೋಜಕರು : ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಛಾಪ್ಟರ್, 6.51 ಕೃಷಿರಂಗ : ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ: ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ.ಮೈಸೂರು ಉಮೇಶ್, ಕೃಷಿ ಲೋಕ, ಕೃಷಿ ದರ್ಪಣ–ವಾರದ ಕೃಷಿರಂಗ, ಕಿಸಾನ್ ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ: ಆರ್. ಲೋಕೇಶ್ವರಿ, 7.45 ಕೇಂದ್ರ ಮುಂಗಡ ಪತ್ರ ಮಂಡನೆ ಕುರಿತ ವಿಶೇಷ ಕಾರ್ಯಕ್ರಮ, 9.15 2026–27ನೇ ಸಾಲಿನ ಕೇಂದ್ರ ಮುಂಗಡ ಪತ್ರ ಕುರಿತ ನೇರ ದ್ವಿಭಾಷಾ ಚರ್ಚೆ, 10.00 ರವಿವಾರದ ಅಖಿಲ ಭಾರತ ಸಂಗೀತ ಸಭಾ ವಿದುಷಿ ಡಾ.ಕಮಲಾ ಶಂಕರ್ ಅವರ ಹಿಂದೂಸ್ಥಾನಿ ಗಿಟಾರ್ ವಾದನ

ಮುಮ್ಮಡಿ, ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲದಲ್ಲಿ ಚಿತ್ರಕಲೆಗೆ ಮಹತ್ವದ ಕೊಡುಗೆ

ಸರಣಿ ವಿಶೇಷ ಉಪನ್ಯಾಸದಲ್ಲಿ ಕಲಾವಿದೆ ಅನುಪಮಾ ಬಣ್ಣನೆ



ಮೈಸೂರಿನ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಸಭಾಂಗಣದಲ್ಲಿ ಶನಿವಾರ ನಡೆದ ಮಾಸಿಕ ಸರಣಿ ವಿಶೇಷ ಉಪನ್ಯಾಸವನ್ನು ಪ್ರಾದೇಶಿಕ ಶಿಕ್ಷಣ ಸಂಸ್ಥೆಯ ಕಲಾವಿದೆ ಸಿ.ಎಸ್.ಅನುಪಮಾ ಉದ್ಘಾಟಿಸಿದರು.

ಮೈಸೂರು,ಜ.31(ಜಿಎ)–ಮುಮ್ಮಡಿ ಕೃಷ್ಣರಾಜ ಒಡೆಯರ್ ಮತ್ತು ನಾಲ್ವಡಿ ಕೃಷ್ಣರಾಜ ಒಡೆಯರ್ ಕಾಲಘಟ್ಟವು ಚಿತ್ರಕಲೆ ಬೆಳವಣಿಗೆಯಲ್ಲಿ ಮಹತ್ವದ ಕೊಡುಗೆ ನೀಡಿದೆ ಎಂದು ಪ್ರಾದೇಶಿಕ ಶಿಕ್ಷಣ ಸಂಸ್ಥೆಯ ಕಲಾವಿದೆ ಸಿ.ಎಸ್.ಅನುಪಮಾ ಅಭಿಪ್ರಾಯಪಟ್ಟರು.

ಮೈಸೂರಿನ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಸಭಾಂಗಣದಲ್ಲಿ ಶನಿವಾರ ನಡೆದ ಮಾಸಿಕ ಸರಣಿ ವಿಶೇಷ ಉಪನ್ಯಾಸದಲ್ಲಿ 'ಮೈಸೂರಿನ ಅರಮನೆ ಚಿತ್ರಕಲೆಗಳು' ಕುರಿತು ಮಾತನಾಡಿದ ಅವರು, ಅಂಬಾವಿಲಾಸ ಅರಮನೆಯು ಮೈಸೂರು ಸಾಮ್ರಾಜ್ಯದ ಚಿತ್ರಕಲಾ ಇತಿಹಾಸ ಅರಿಯಲು ಮಾರ್ಗದರ್ಶಿಯಾಗಿದ್ದು, ಅರಮನೆಯಲ್ಲಿನ ಚಿತ್ರಕಲೆಗಳು ವಿಜಯನಗರ ಸಾಮ್ರಾಜ್ಯದ ಕಲಾವಿದರ ಪರಂಪರೆಯೊಂದಿಗೆ ಆಧುನಿಕ, ಪಾಶ್ಚಾತ್ಯ ಶೈಲಿಗಳ ಪರಿಚಯವನ್ನೂ ನೀಡುತ್ತವೆ ಎಂದರು.

ವಿಜಯನಗರ ಸಾಮ್ರಾಜ್ಯವು ಸುರಪುರ, ಲೇಪಾಕ್ಷಿ, ತಂಜಾವೂರು, ಗಂಜೀಫಾ, ಮೈಸೂರು ಮತ್ತು ಕಿನಾಲ ಚಿತ್ರಕಲೆಗಳಿಗೆ ಆಶ್ರಯವಾಗಿತ್ತು. ಸಾಮ್ರಾಜ್ಯದ ಪತನದ ನಂತರ ಕಲಾವಿದರಿಗೆ ಆಶ್ರಯ ನೀಡಿದ ಪ್ರಮುಖ ಸಂಸ್ಥಾನ ಮೈಸೂರು. ತಂಜಾವೂರು ಮತ್ತು ಮೈಸೂರು ಚಿತ್ರಕಲೆಗಳಲ್ಲಿ ಸಾಮ್ಯತೆಯನ್ನು ನೋಡಬಹುದು. ಸೂಕ್ಷ್ಮ ಕೆಲಸದಿಂದ ಇವುಗಳು ಪ್ರಸಿದ್ಧಿ' ಎಂದರು.

ಪರ್ಷಿಯಾ ಮೂಲದಿಂದ ಬಂದ ಗಂಜೀಫಾ ಕಲೆಯು ನಾಲ್ವಡಿಯವರ ಕಾಲದಲ್ಲಿ ಮೈಸೂರಿನ ಶೈಲಿಯನ್ನು ಅಳವಡಿಸಿಕೊಂಡು ಅಭಿವೃದ್ಧಿ ಹೊಂದಿತು. ಗೋಡೆ ಚಿತ್ರಕಲೆಯಂತೂ ಮುಮ್ಮಡಿ ಅವರ ಕಾಲದಿಂದಲೇ ಮೈಸೂರಿನ ವಿವಿಧೆಡೆ, ಪ್ರಮುಖವಾಗಿ ದೇವಸ್ಥಾನಗಳ ಗೋಡೆಗಳಲ್ಲಿ ಪ್ರಚಲಿತಕ್ಕೆ ಬಂತು. ಅರಮನೆ ಆವರಣದ ಪ್ರಸನ್ನ ವೇಣುಗೋಪಾಲ ದೇವಸ್ಥಾನದಲ್ಲಿರುವ ಕೃಷ್ಣನ ಲೀಲೆಯ ಚಿತ್ರಗಳು ಇದಕ್ಕೆ ಉದಾಹರಣೆ' ಎಂದರು.

ಶಿಲ್ಪಿ ಸಿದ್ದಲಿಂಗಸ್ವಾಮಿ ಮತ್ತು ರಾಜ ರವಿವರ್ಮ ಅವರು ಮೈಸೂರಿನ ಚಿತ್ರಕಲೆಯನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಅರಮನೆ ಚಾವಣಿಯಲ್ಲಿ ಸಿದ್ದಲಿಂಗಸ್ವಾಮಿ ರಚಿಸಿರುವ ಚಿತ್ರಗಳು, ರಾಜವಂಶಸ್ಥರನ್ನು, ವಿವಿಧ ದೇವತೆಗಳನ್ನು ಪರಿಚಯಿಸುವ ರಾಜ ರವಿವರ್ಮ ಚಿತ್ರಗಳು ಅಪೂರ್ವ ಸಾಧ್ಯತೆಯ ಪ್ರತಿಬಿಂಬವಾಗಿವೆ. ಇಲ್ಲಿನ ಪ್ರತಿ ಚಿತ್ರಗಳು ಪುರಾಣ, ಇತಿಹಾಸದ ಸಾರವನ್ನು ಹೊಂದಿರುವುದನ್ನು ವೀಕ್ಷಕರು ಅರಿಯಬೇಕು ಎಂದರು.

ಇಲಾಖೆ ಆಯುಕ್ತ ಎ.ದೇವರಾಜು ಮಾತನಾಡಿ, ಚಿತ್ರಕಲೆಯನ್ನು ನೋಡಿ ಗ್ರಹಿಸುವುದೂ ಒಂದು ಕಲೆ. ಯಾವುದೇ ಚಿತ್ರಕಲೆಗಳನ್ನು ನೋಡುವ ಮುನ್ನ ಅದರ ರಚನೆ, ಇತಿಹಾಸದ ಬಗ್ಗೆ ಕೊಂಚ ತಿಳಿದುಕೊಳ್ಳುವುದು ಉತ್ತಮ ಅನುಭವ ಪಡೆಯಲು ಸಹಕಾರಿ ಆಗುತ್ತದೆ ಎಂದರು. ಕಾರ್ಯಕ್ರಮದಲ್ಲಿ ಚಾಮರಾಜೇಂದ್ರ ಸರ್ಕಾರಿ ದೃಶ್ಯ ಕಲಾ ಕಾಲೇಜಿನ ಫೋಟೋಗ್ರಫಿ–ಫೋಟೋ ಜರ್ನಲಿಸಂ ವಿಭಾಗದ ಮುಖ್ಯಸ್ಥ ವೀರಣ್ಣ ಅರ್ಕಸಾಲಿ, ಇಲಾಖೆ ಎಂಜಿನಿಯರಿಂಗ್ ವಿಭಾಗದ ಎಇಇ ಅಂಬರೀಶ್ ಇದ್ದರು.

ನೈಪುಣ್ಯ ಶಾಲೆಯಲ್ಲಿ 'ಚಿಣ್ಣರ ಜಾತ್ರೆ' ಸಂಭ್ರಮ





ಮೈಸೂರಿನ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಿಕ್ಷಣ ಸಂಸ್ಥೆಯಲ್ಲಿ ನಡೆದ ಚಿಣ್ಣರ ಜಾತ್ರೆಯಲ್ಲಿ ಮಕ್ಕಳ ಅಜ್ಜ–ಅಜ್ಜಿಯರಿಗೆ ಸಾಂಪ್ರದಾಯಿಕ ತಿನಿಸು ತಯಾರಿಕೆ ಸ್ಪರ್ಧೆ ಆಯೋಜಿಸಲಾಗಿತ್ತು. ಮಕ್ಕಳ ಪೋಷಕರು ಸಾಂಪ್ರದಾಯಿಕ ನೃತ್ಯದೊಂದಿಗೆ ಸಂಭ್ರಮಿಸಿದ್ದನ್ನು ಮತ್ತೊಂದು ಚಿತ್ರದಲ್ಲಿ ಕಾಣಬಹುದು.

ಮಕ್ಕಳು, ಕುಟುಂಬದವರು, ನೆರೆ–ಹೊರೆಯವರ ಸಡಗರ

ಮೈಸೂರು,ಜ.31–ಮೈಸೂರಿನ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಿಕ್ಷಣ ಸಂಸ್ಥೆಯಲ್ಲಿ ಸಂಭ್ರಮದ ಜಾತ್ರೆ ಕಳೆಗಟ್ಟಿತ್ತು.

ಶಿಕ್ಷಣದ ಭಾಗವಾಗಿ ಅಗತ್ಯ ಹಾಗೂ ವೈಶಿಷ್ಟ್ಯಪೂರ್ಣ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡಿದ್ದು, ಇಂದು 'ಫೆಂಟಾಸ್ಟಿಕ್ ಫ್ರಾಲಿಕ್' ಶೀರ್ಷಿಕೆಯಡಿ ಆಯೋಜಿಸಿದ್ದ 'ಚಿಣ್ಣರ ಜಾತ್ರೆ' ನಾಡಿನ ವೈವಿಧ್ಯಮಯ ಪರಂಪರೆಯ ಮಹತ್ವ ಸಾರಿತು.

ಶಾಲೆಯ ಮಕ್ಕಳೊಂದಿಗೆ, ಅವರ ತಂದೆ–ತಾಯಿ, ಅಜ್ಜ–ಅಜ್ಜಿ ಸೇರಿದಂತೆ ಕುಟುಂಬದ ಇತರೆ ಸದಸ್ಯರು, ಸಂಬಂಧಿಕರು, ನೆರೆ–ಹೊರೆಯವರು ಸಾಂಪ್ರದಾಯಿಕ ಉಡುಗೆಯೊಂದಿಗೆ ಜಾತ್ರೆಯಲ್ಲಿ ಪಾಲ್ಗೊಂಡು ಸಂಭ್ರಮಿಸಿದರು. ಜಾತ್ರೆಯಲ್ಲಿ ಭಾಗವಹಿಸಿದ್ದ ಎಲ್ಲರಿಗೂ ಪ್ರತ್ಯೇಕ ವಿಭಾಗಗಳಲ್ಲಿ ವಿಶೇಷ ಸ್ಪರ್ಧೆ, ಆಟೋಟ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು.

ಅಡುಗೆ ಸ್ಪರ್ಧೆಗಾಗಿ ಅಜ್ಜ–ಅಜ್ಜಿಯಂದಿರು ಸಾಂಪ್ರದಾಯಿಕ ವಿಶಿಷ್ಟ ತಿಂಡಿ–ತಿನಿಸು, ಪಾನೀಯಗಳನ್ನು ಮನೆಯಲ್ಲೇ ತಯಾರಿಸಿಕೊಂಡು ತಂದಿದ್ದರು. ಎಲ್ಲಾ ಮಕ್ಕಳು, ಶಿಕ್ಷಕರು, ಪೋಷಕರು, ನೆಂಟರಿಷ್ಟರೆಲ್ಲಾ ಖಾದ್ಯಗಳನ್ನು ವೀಕ್ಷಿಸಿ, ಅವುಗಳ ವಿಶೇಷತೆ ಬಗ್ಗೆ ತಿಳಿದುಕೊಂಡರು. ವಿಜೇತರಾದವರಿಗೆ ಬಹುಮಾನ, ಉಳಿದವರಿಗೆ ಪ್ರಶಂಸನಾ ಪತ್ರ ನೀಡಿ, ಅಭಿನಂದಿಸಲಾಯಿತು.

ಇದೇ ವೇಳೆ ಮಕ್ಕಳು ಹಾಗೂ ಪೋಷಕರು ದೇಶಿ ಆಟೋಟಗಳಲ್ಲಿ ಭಾಗವಹಿಸಿ, ಖುಷಿಪಟ್ಟರು. ಚಿತ್ರಕಲೆ ಸೇರಿದಂತೆ ಚಿಣ್ಣರ ಪ್ರತಿಭೆ ಅನಾವರಣಕ್ಕೂ ವೇದಿಕೆ ಕಲ್ಪಿಸಲಾಗಿತ್ತು ಚಿಣ್ಣರೊಂದಿಗೆ ಆಗಮಿಸಿದ್ದವರು ತಮ್ಮ ಸಾಂಪ್ರದಾಯಿಕ ಹಾಡು–ನೃತ್ಯ ಪ್ರಸ್ತುತಪಡಿಸಿ, ಸಂಭ್ರಮದಲ್ಲಿ ಮಿಂದೆದ್ದರು. ಒಟ್ಟಾರೆ ದೇಶೀಯತೆ ಹಾಗೂ ಆಧುನಿಕತೆಯ ಸಮ್ಮಿಳಿತವಾಗಿದ್ದ ಚಿಣ್ಣರ ಜಾತ್ರೆ ನೈಜ ಶಿಕ್ಷಣದ ಒಂದು ಮಾದರಿಯಾಗಿತ್ತು.

ಈ ವಿಶಿಷ್ಟ ಕಾರ್ಯಕ್ರಮದ ಬಗ್ಗೆ ಮಾತನಾಡಿದ ಸಂಸ್ಥೆಯ ಮುಖ್ಯಸ್ಥ ರಘು ಆರ್.ಕೌಟಿಲ್ಯ ಅವರು, ಭಾರತೀಯ ಸಂಸ್ಕೃತಿ ಹಾಗೂ ಪರಂಪರೆಯನ್ನು ಭವಿಷ್ಯಕ್ಕೆ ಉಳಿಸುವಂತಹ ಹೊಣೆಗಾರಿಕೆ ಚಿಣ್ಣರ ಮೇಲಿದ್ದು, ಈ ನಿಟ್ಟಿನಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಶಿಕ್ಷಣದ ಭಾಗವಾಗಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು.

ಸಾಂಪ್ರದಾಯಿಕ ಜಾತ್ರೆ–ಉತ್ಸವ ನೆನಪಿಸುವಂತಹ ಈ ಚಿಣ್ಣರ ಜಾತ್ರೆಯಲ್ಲಿ ಇಡೀ ಕುಟುಂಬ ಪಾಲ್ಗೊಂಡಿದೆ. ಅವರ ನೆರೆಹೊರೆಯವರೂ ಭಾಗಿಯಾಗಿದ್ದಾರೆ. ಹಿರಿಯರಿಗೆ ಸಾಂಪ್ರದಾಯಿಕ ತಿನಿಸು ತಯಾರಿಸುವ ಸ್ಪರ್ಧೆ ಸೇರಿದಂತೆ ಎಲ್ಲರಿಗೂ ವಿಶಿಷ್ಟ ಆಟೋಟಗಳನ್ನು ನಡೆಸಲಾಗಿದೆ. ಪರಂಪರೆ ಹಾಗೂ ಆಧುನಿಕತೆ ಸಮ್ಮಿಳಿತಗೊಂಡ ವಿಶಿಷ್ಟ ಮೆರಗು ಸೃಷ್ಟಿಯಾಗಿದೆ. ಅಕ್ಷರ ಕಲಿಕೆಯೊಂದಿಗೆ ನಮ್ಮ ಸಂಸ್ಕೃತಿ, ಪರಂಪರೆ, ಆಚರಣೆ, ನಮ್ಮ ಆಚಾರ–ವಿಚಾರ, ಮುಖ್ಯವಾಗಿ ನಮ್ಮ ಕೌಟುಂಬಿಕ ವ್ಯವಸ್ಥೆಯ ಮಹತ್ವ, ಮನೆಯವರು, ಸಂಬಂಧಿಕರು, ನೆರೆಹೊರೆಯವರೆಲ್ಲಾ ಸೇರಿದರೆ ಒಂದು ಸಮಾಜ, ಅದೇ ನಮ್ಮ ಭಾರತೀಯ ಸಂಸ್ಕೃತಿ ಎಂಬುದನ್ನು ಮಕ್ಕಳಿಗೆ ಈ ಕಾರ್ಯಕ್ರಮದ ಮೂಲಕ ಮನದಟ್ಟು ಮಾಡಲಾಗಿದೆ ಎಂದರು.

ನಮ್ಮ ದೇಶ–ನಾಡಿನ ಸಂಸ್ಕೃತಿ ಹಾಗೂ ಪರಂಪರೆಯ ಬಗ್ಗೆ ಮಕ್ಕಳಿಗೆ ಅನುಭವ ನೀಡಬೇಕು. ಈ ಮೂಲಕ ಈ ಆಚಾರ–ವಿಚಾರಗಳನ್ನು ಮುಂದಿನ ಪೀಳಿಗೆಗೆ ಎರೆಯಬೇಕೆಂಬ ಕಾಳಜಿಯಿಂದ ನಮ್ಮ ಸಂಸ್ಥೆಯಲ್ಲಿ ಶಿಕ್ಷಣದ ಭಾಗವಾಗಿ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ವಿದ್ಯಾರ್ಥಿಗಳ ಜೊತೆಗೆ ಪೋಷಕರು, ಶಿಕ್ಷಕರ ಸಹಕಾರದಿಂದ ಇಂತಹ ವೈವಿಧ್ಯಮಯ ಪರಿಕಲ್ಪನೆಗಳು ಸಾಕಾರಗೊಳ್ಳುತ್ತಿವೆ ಎಂದು ಸಂತಸ ವ್ಯಕ್ತಪಡಿಸಿದರು.

ಬೀಳ್ಕೊಡುಗೆ...



ಎಲ್ಐಸಿ ಶಾಖೆ ಒಂದರ (ಬ್ರಾಂಚ್ 1), ಉದ್ಯೋಗಿ ಹೆಚ್.ಎನ್.ಶ್ರೀರಾಂ ಅವರು ಸೇವೆಯಿಂದ ನಿವೃತ್ತಿ ಹೊಂದಿದ ಹಿನ್ನೆಲೆಯಲ್ಲಿ ಅವರನ್ನು ಸನ್ಮಾನಿಸಿ, ಬೀಳ್ಕೊಡಲಾಯಿತು. ಈ ವೇಳೆ ಶಾಖಾಧಿಕಾರಿ ರವೀಂದ್ರ ಬಾಬು, ಎಲ್ಐಸಿಯ ಮೈಸೂರು ವಿಭಾಗದ ಪಿಂಚಣಿದಾರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷ ಪಾರ್ಥಸಾರಥಿ, ಪ್ರಧಾನ ಕಾರ್ಯದರ್ಶಿ ಪಿ.ಪುಟ್ಟಸ್ವಾಮಿ, ಸಹ ಕಾರ್ಯದರ್ಶಿ ಬೂಕನಕೆರೆ ವಿಜೇಂದ್ರ ಸೇರಿದಂತೆ ಸಿಬ್ಬಂದಿ ವರ್ಗದವರು ಹಾಜರಿದ್ದರು.

ರೈತ ರತ್ನ ಪ್ರಶಸ್ತಿಗೆ ಭಾಜನ




ಮೈಸೂರು,ಜ.31–ಬೆಂಗಳೂರಿನ ಓರಿಯೆಂಟಲ್ ಫೌಂಡೇಶನ್ ವತಿಯಿಂದ ಕೃಷಿ ಕ್ಷೇತ್ರಕ್ಕೆ ಕೊಡ ಮಾಡುವ 2025–26ನೇ ಸಾಲಿನ ಪ್ರತಿಷ್ಠಿತ ರೈತ ರತ್ನ ಪ್ರಶಸ್ತಿಗೆ ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ.ಚಂದನ್‌ಗೌಡ ಭಾಜನರಾಗಿದ್ದಾರೆ. ಫೆ.1ರ ಭಾನುವಾರ ಬೆಂಗಳೂರಿನ ಚಾಮರಾಜಪೇಟೆಯ ಪಂಪ ಮಹಾಕವಿ ರಸ್ತೆಯಲ್ಲಿರುವ ಕನ್ನಡ ಸಾಹಿತ್ಯ ಪರಿಷತ್ ಭವನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಫೌಂಡೇಶನ್ ಸಂಸ್ಥಾಪಕ ಅಧ್ಯಕ್ಷ ರವಿಕುಮಾರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುತ್ತೂರು ಶ್ರೀಗಳ ಆಶೀರ್ವಾದ




ಬಸವ ಜಯಂತಿ ಅಧ್ಯಕ್ಷ ಎಂ.ಚಂದ್ರಶೇಖರ್ ಅವರು ಮೈಸೂರಿನ ಸುತ್ತೂರು ಮಠಕ್ಕೆ ಭೇಟಿ ನೀಡಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮೀಜಿಯವರ ಆಶೀರ್ವಾದ ಪಡೆದರು. ಬಸವ ಬಳಗಗಳ ನಿಕಟ ಪೂರ್ವ ಅಧ್ಯಕ್ಷ ಬಿ.ಕೆ.ನಾಗರಾಜು, ಜಿಲ್ಲಾ ಅಧ್ಯಕ್ಷ ಬಸವರಾಜು, ಮಾಜಿ ಅಧ್ಯಕ್ಷ ಕಾನ್ಯ ಶಿವಮೂರ್ತಿ, ಹಡಜನ ಟಿ.ಲಿಂಗರಾಜು, ಕೆ.ಕೆ.ಖಂಡೇಶ್, ಮೂಗೂರು ನಂಜುಂಡಸ್ವಾಮಿ, ಶರತ್ ಪುಟ್ಟಬುದ್ಧಿ, ದೂರ ಶಿವಕುಮಾರ್, ಡಾ.ಕೆ.ವಸಂತಕುಮಾರ್, ವಕೀಲ ಸಿ.ಕೆ.ರುದ್ರಮೂರ್ತಿ, ಜಿಲ್ಲಾ ನಿರ್ದೇಶಕರಾದ ಆಯರಹಳ್ಳಿ ವಿರುಪಾಕ್ಷ, ಗೆಜ್ಜಗಳ್ಳಿ ಮಹೇಶ್, ದಾರಿಪುರ ಡಿ.ಚಂದ್ರಶೇಖರ್, ಎಂ.ಷಡಕ್ಷರಿ, ವೀರೇಶ್, ಶಿವಕುಮಾರ್ ಚಿಕ್ಕಾನ್ಯ, ಮದುಕುಮಾರ್, ಚಿಕ್ಕಹಳ್ಳಿ ಸ್ವಾಮಣ್ಣ, ಮಲ್ಲೇಶ್, ರಂಗಸ್ವಾಮಿ, ರಾಜಣ್ಣ, ಸೇರಿದಂತೆ ಸಮಾಜದ ಅನೇಕ ಮುಖಂಡರು ಈ ವೇಳೆ ಉಪಸ್ಥಿತರಿದ್ದರು.

ಜಿ.ಡಿ.ಹರೀಶ್‌ಗೌಡರಿಗೆ ಹುಟ್ಟುಹಬ್ಬದ ಶುಭಾಶಯ



ಶನಿವಾರ ತಮ್ಮ ಹುಟ್ಟುಹಬ್ಬ ಆಚರಿಸಿಕೊಂಡ ಹುಣಸೂರು ಶಾಸಕರಾದ ಜಿ.ಡಿ. ಹರೀಶ್‌ಗೌಡರಿಗೆ ನಿಖಿಲ್ ಕುಮಾರಸ್ವಾಮಿ ಅಭಿಮಾನಿ ಬಳಗದ ವತಿಯಿಂದ ಶುಭಾಶಯ ಕೋರಲಾಯಿತು. ಈ ವೇಳೆ ಬಳಗದ ಅಧ್ಯಕ್ಷ ಪ್ರದೀಪ್ ಕೃಷ್ಣೇಗೌಡ, ಪ್ರಮೋದ್, ಮಂಜು, ನಾಗರಾಜು, ಚಂದ್ರಶೇಖರ್, ಅಜಂಯ್, ಶ್ರೀನಿವಾಸ್ ಇದ್ದರು.



44ನೇ ವಾರ್ಡ್ ಜೆಡಿಎಸ್ ಮುಖಂಡರು ಶಾಸಕರಾದ ಜಿ.ಡಿ.ಹರೀಶ್‌ಗೌಡರಿಗೆ ಹುಟ್ಟುಹಬ್ಬದ ಶುಭಾಶಯ ಕೋರಿದರು. ಈ ಸಂದರ್ಭದಲ್ಲಿ ಮುಖಂಡರಾದ ಸುರೇಶ್, ಟೆಂಟ್ ಸರ್ಕಲ್ ಕುಮಾರ್, ಶಶಿಧರ್, ಪುಟ್ಟಸ್ವಾಮಿ, ಆರ್‌ಎಕ್ಸ್ ಮಂಜು, ಮಹೇಶ್, ಲೋಕೇಶ್, ಪ್ರಸಾದ್, ಬಸವರಾಜು ಇನ್ನಿತರರಿದ್ದರು.

ಪೈಲ್ವಾನ್ ಟೈಗರ್ ಬಾಲಾಜಿಗೆ ಕಾವೇರಿ ಕ್ರಿಯಾ ಸಮಿತಿಯಿಂದ ಶ್ರದ್ಧಾಂಜಲಿ



ಮೈಸೂರು ಭೂತಪ್ಪನವರ ಗರಡಿಯ ಖ್ಯಾತ ಕುಸ್ತಿಪಟು ಪೈಲ್ವಾನ್ ಟೈಗರ್ ಬಾಲಾಜಿ ಅವರಿಗೆ ಕಾವೇರಿ ಕ್ರಿಯಾ ಸಮಿತಿ ವತಿಯಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮೈಸೂರು,ಜ.31(ಜಿಎ)–ಮೈಸೂರು ಭೂತಪ್ಪನವರ ಗರಡಿಯ ಖ್ಯಾತ ಕುಸ್ತಿಪಟು ಪೈಲ್ವಾನ್ ಟೈಗರ್ ಬಾಲಾಜಿ ಅವರಿಗೆ ಕಾವೇರಿ ಕ್ರಿಯಾ ಸಮಿತಿ ವತಿಯಿಂದ ಶ್ರದ್ಧಾಂಜಲಿ ಸಲ್ಲಿಸಲಾಯಿತು.

ಮೈಸೂರಿನ ಟೌನ್‌ಹಾಲ್ ಮುಂಭಾಗ ಟೈಗರ್ ಬಾಲಾಜಿ ಅವರ ಭಾವಚಿತ್ರಕ್ಕೆ ಪದಾಧಿಕಾರಿಗಳು ಪುಷ್ಪಾರ್ಚನೆ ಮಾಡಿ ನಂತರ ಎಲ್ಲಾ ಪದಾಧಿಕಾರಿಗಳು ಒಂದು ನಿಮಿಷ ಮೌನಾಚರಣೆ ಮಾಡುವ ಮೂಲ ಶ್ರದ್ಧಾಂಜಲಿ ಸಲ್ಲಿಸಿದರು.

ಈ ವೇಳೆ ನಟ, ಕಾವೇರಿ ಕ್ರಿಯಾ ಸಮಿತಿ ಅಧ್ಯಕ್ಷರೂ ಆದ ಜಯ ಪ್ರಕಾಶ್(ಜೆಪಿ) ಮಾತನಾಡಿ, ಟೈಗರ್ ಬಾಲಾಜಿ ಅವರು ನಾಡು ಕಂಡ ಅಪ್ರತಿಮ ಕುಸ್ತಿ ಪಟುವಾಗಿದ್ದರು. ಅವರು ಶಿಸ್ತಿನ ಜೀವನದ ಮೂಲಕ ಹೆಸರುವಾಸಿ ಆಗಿದ್ದರು. ತಾವು ಕುಸ್ತಿ ಮಾಡುವುದನ್ನು ನಿಲ್ಲಿಸಿದ ನಂತರ ನೂರಾರ ಶಿಷ್ಯರಿಗೆ ತರಬೇತಿ ನೀಡಿದ್ದು, ಶಿಷ್ಯರು ಎಲ್ಲೆಡೆ ಉತ್ತಮ ಪ್ರದರ್ಶನ ನೀಡುತ್ತಿದ್ದಾರೆ. ದಸರಾ ಸಂದರ್ಭದಲ್ಲಿ ನಡೆಯುವ ವಜ್ರಮುಷ್ಠಿ ಕಾಳಗದಲ್ಲಿ ನಿಪುಣತೆ ಹೊಂದಿದ್ದ ಅವರು ತಮ್ಮ ಮಕ್ಕಳಿಗೂ ವಜ್ರಮುಷ್ಠಿ ತರಬೇತಿ ನೀಡಿದರು ಎಂದರು.

ಕಾವೇರಿ ನೀರಿಗಾಗಿ ನೂರು ದಿನಗಳ ಕಾಲ ಧರಣಿ ನಡೆಸಿದ್ದಾಗ ಅವರು ಆರೋಗ್ಯದ ಸಮಸ್ಯೆಯನ್ನು ಲೆಕ್ಕಿಸದೇ ಪ್ರತಿದಿನ ಬಂದು ಹೋರಾಟಕ್ಕೆ ಸಾಥ್ ನೀಡುತ್ತಿದ್ದರು. ಹೀಗೆ ನಾಡು, ನುಡಿ, ಜಲದ ವಿಷಯಕ್ಕೆ ಬಂದಾಗ ಅವರು ಭಾಗವಹಿಸುತ್ತಿದ್ದರು ಎಂದು ಸ್ಮರಿಸಿದರು. ಈ ವೇಳೆ ಕರ್ನಾಟಕ ಸೇನಾ ಪಡೆ ಅಧ್ಯಕ್ಷ ತೇಜಸ್ ಲೋಕೇಶ್‌ಗೌಡ, ನೇಹ, ಶಿವಕುಮಾರ್, ಕೃಷ್ಣಪ್ಪ, ಸುಜಾತ್, ರಘುಅರಸ್, ಮಹೇಶ್ ಗೌಡ, ಪ್ರದೀಪ್, ಹನುಮಂತಯ್ಯ ಇದ್ದರು.

ಉಚಿತ ಹೃದ್ರೋಗ ತಪಾಸಣೆ ಶಿಬಿರ

ಮೈಸೂರು,ಜ.31–ಮೈಸೂರಿನ ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆಯಲ್ಲಿ ಫೆ.2ರಿಂದ 7ರವರೆಗೆ ಉಚಿತ ಹೃದ್ರೋಗ ತಪಾಸಣಾ ಶಿಬಿರ ಆಯೋಜಿಸಲಾಗಿದೆ. ಹೃದಯ ಶಸ್ತ್ರಚಿಕಿತ್ಸಾ ತಜ್ಞ ವೈದ್ಯ ಡಾ. ಜಯಕುಮಾರ್ ನೇತೃತ್ವದಲ್ಲಿ ಶಿಬಿರ ನಡೆಯಲಿದೆ. ಶಿಬಿರದಲ್ಲಿ ಉಚಿತ ಸಮಾಲೋಚನೆ ಇದ್ದು, ವೈದ್ಯರು ಸೂಚಿಸುವ ಇಸಿಜಿ, ಲಿಪಿಡ್ ಪ್ರೊಫೈಲ್, ಆರ್‌ಬಿಎಸ್, ಎಕೋ ಸ್ಕ್ರೀನಿಂಗ್, ಟಿ.ಎಂ.ಟಿ ಪರೀಕ್ಷೆಗಳಿಗೆ ವಿಶೇಷ ಪ್ಯಾಕೇಜ್ ಲಭ್ಯವಿರುತ್ತದೆ. ಹೃದಯದ ಸಮಸ್ಯೆಗಳಿರುವವರು ಕೂಡಲೇ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ 0821–2533600, 9986399862 ಸಂಪರ್ಕಿಸಬಹುದಾಗಿದೆ.

ಅಕ್ರಮ ಸಾಗಣೆ : ತೇಗ, ಬೀಟೆ ನಾಟಾಗಳ ಮುಟ್ಟುಗೋಲು

ಮೈಸೂರು,ಜ.31– ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ದಿನಾಂಕ 22–02–2012 ಡಿ.ಬಿ.ಕುಪ್ಪೆ ವ್ಯಾಪ್ತಿಯ ವನ್ಯ ಜೀವಿ ವಲಯದ ಕಾಕನಕೋಟೆ ಶಾಖೆ, ಮಾಸ್ತಿಗುಡಿ ಗಸ್ತು, ಕಬಿನಿ ಹಿನ್ನೀರಿನ ಪ್ರದೇಶದಲ್ಲಿ ಬೆಳಗಿನ ಜಾವ ಗಸ್ತು ಮಾಡುತ್ತಿರುವಾಗ ನಾಡ ದೋಣಿ ನಿಂತಿರುವುದು ಕಂಡುಬಂದಿರುತ್ತದೆ. ಸದರಿ ದೋಣಿಯಲ್ಲಿ 3 ತೇಗದ ಹಾಗೂ 1 ಬೀಟೆ ಮರದ ತುಂಡು ಇರುವುದು ಕಂಡು ಬಂದಿರುತ್ತದೆ. ದೋಣಿಯ ಬಳಿ ಯಾರು ಕಂಡುಬಂದಿರುವುದಿಲ್ಲ.

ಮುಟ್ಟುಗೋಲು ಹಾಕಿದ ವಾಹನ ಮತ್ತು ಸ್ವತ್ತಿನ ವಿವರ, ವಾಹನ : ನಾಡ ದೋಣಿ, ತೇಗದ ನಾಟಾಗಳು :3 ಸಂಖ್ಯೆ=0.301 ಘ.ಮೀ, ಬೀಟೆ ನಾಟಾ : 1 ಸಂಖ್ಯೆ =0.071 ಘ.ಮೀ, ಆದೇಶವನ್ನು ಹೊರಡಿಸಿದ 30 (ಮೂವತ್ತು) ದಿವಸಗಳೊಳಗೆ ಸೆಕ್ಷನ್ 71(ಡಿ) ಪ್ರಕಾರ ಯಾವುದೇ ಮೇಲ್ಮನವಿಯನ್ನು ಸಂಬಂಧಿಸಿದವರು ಸಲ್ಲಿಸದೇ ಇದ್ದಲ್ಲಿ ಇದೇ ಅಂತಿಮ ಆದೇಶವಾಗಿರುತ್ತದೆ.

ಆದೇಶವನ್ನು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಿ, ಉಕ್ತಲೇಖನ ಹೇಳಿ ಗಣಕ ಯಂತ್ರದಲ್ಲಿ ಹಾಕಿ ಸರಿಪಡಿಸಿ, 10–12–2025 ರಂದು ನನ್ನ ಸಹಿ ಹಾಗೂ ನ್ಯಾಯಾಲಯದ ಮೊಹರು ಹಾಕಿ ಬಿಡುಗಡೆ ಮಾಡಿರುತ್ತೇನೆ ಎಂದು ಉಪ ಅರಣ್ಯ ಸಂರಕ್ಷಣಾಧಿಕಾರಿ ಸೀಮಾ ಪಿ.ಎ. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು–ಬೆಂಗಳೂರು ಹೆದ್ದಾರಿ ವೇಗಮಿತಿ ಹೆಚ್ಚಿಸುವ ಪ್ರಸ್ತಾವನೆ ಇಲ್ಲ

ಎಂಎಲ್ಸಿ ಶಿವಕುಮಾರ್‌ಗೆ ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಮಾಹಿತಿ



ಸತೀಶ್



ಶಿವಕುಮಾರ್

ಬೆಂಗಳೂರು: ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇಯಲ್ಲಿ ಈಗಿರುವ ವೇಗ ಮಿತಿಯನ್ನು ಹೆಚ್ಚಿಸುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲ ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಸ್ಪಷ್ಟಪಡಿಸಿದ್ದಾರೆ.

ವಿಧಾನ ಪರಿಷತ್ತಿನಲ್ಲಿ ಕೆ.ಶಿವಕುಮಾರ್ ಅವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವರು, ಒಪ್ಪಂದದ ಪ್ರಕಾರ ಬೆಂಗಳೂರು–ಮೈಸೂರು ಹೆದ್ದಾರಿಯನ್ನು ಗಂಟೆಗೆ ಗರಿಷ್ಠ 100 ಕಿ.ಮೀ. ವೇಗಕ್ಕೆ ವಿನ್ಯಾಸಗೊಳಿಸಲಾಗಿದೆ ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ವರದಿ ನೀಡಿರುವುದಾಗಿ ತಿಳಿಸಿದ್ದಾರೆ.

ಹೆದ್ದಾರಿಯ ಗುಣಮಟ್ಟ ಮತ್ತು ಸುರಕ್ಷತಾ ಮಾನದಂಡಗಳನ್ನು ಪರಿಗಣಿಸಿ, ಪ್ರಸ್ತುತ ವೇಗ ಮಿತಿಯನ್ನು ಹೆಚ್ಚಿಸುವ, ಟೋಲ್–ಮುಕ್ತ ಸೇವಾ ರಸ್ತೆಗಳನ್ನು ಅಗಲೀಕರಣ ಮತ್ತು ಅಭಿವೃದ್ಧಿಪಡಿಸುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇಲ್ಲ ಎಂದು ಇದೇ ವೇಳೆ ಸ್ಪಷ್ಟಪಡಿಸಿದ್ದಾರೆ.

ಆದಾಗ್ಯೂ, ಮೈಸೂರಿನ ಕೆಂಪೇಗೌಡ ವೃತ್ತ(ಮಣಿಪಾಲ್ ಜಂಕ್ಷನ್) ಸೇರಿದಂತೆ ಮೂರು ಕಡೆ ಮೇಲ್ಸೇತುವೆ ಸ್ಥಳಗಳಲ್ಲಿ ಸೇವಾ ರಸ್ತೆಗಳ ನಿರಂತರತೆಯನ್ನು ಖಚಿತಪಡಿಸಿಕೊಳ್ಳುವುದು, ಮುಚ್ಚಿದ ಟೋಲಿಂಗ್‌ನೊಂದಿಗೆ ಪ್ರವೇಶ ಮತ್ತು ನಿರ್ಗಮನ, ಬಸ್ ಶೆಲ್ಟರ್‌ಗಳ ನಿರ್ಮಾಣ ಮತ್ತು ಜಂಕ್ಷನ್ ಸುಧಾರಣಾ ಕಾರ್ಯಗಳು ಸೇರಿದಂತೆ ಹೆಚ್ಚುವರಿ ಸುರಕ್ಷತಾ ಕ್ರಮಗಳನ್ನು ಕೈಗೊಂಡಿರುವುದಾಗಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮಾಹಿತಿ ನೀಡಿದೆ ಎಂದು ಸಚಿವರು ತಿಳಿಸಿದ್ದಾರೆ.



ಸೈಬರ್ ಕ್ರೈಂ ಬಗ್ಗೆ ಜಾಗೃತಿ ಅಗತ್ಯ



ಪೊಲೀಸ್ ಉಪ ಅಧೀಕ್ಷಕ ಮಹೇಶ್ ಕುಮಾರ್ ಸೈಬರ್ ಕ್ರೈಂ ಬಗ್ಗೆ ಮಾತನಾಡಿದರು.

ವಿರಾಜಪೇಟೆ, ಜ.31–ಪ್ರತಿದಿನ ಹಲವಾರು ಹೊಸ ಸೈಬರ್ ಕ್ರೈಂ ಪ್ರಕರಣಗಳು ಮತ್ತು ವಂಚನೆಗಳು ಬೆಳಕಿಗೆ ಬರುತ್ತಿದ್ದು, ಈ ಅಪರಾಧಗಳ ಬಗ್ಗೆ ಸಾಕಷ್ಟು ಜಾಗೃತಿ ಮೂಡಿಸುವ ಅಗತ್ಯವಿದೆ ಎಂದು ಪೊಲೀಸ್ ಉಪ ಅಧೀಕ್ಷಕ ಮಹೇಶ್ ಕುಮಾರ್ ಹೇಳಿದ್ದಾರೆ.

ಮಾಜಿ ಸೈನಿಕರ ಸಂಘದ ಅಧ್ಯಕ್ಷ ಚಪ್ಪಂಡ ಹರೀಶ್ ಉತ್ತಯ್ಯ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಪೊಲೀಸ್ ಉಪ ಅಧೀಕ್ಷಕ ಮಹೇಶ್ ಕುಮಾರ್ ಸೈಬರ್ ಕ್ರೈಂ ಬಗ್ಗೆ ಜನರು ಜಾಗೃತರಾಗಿರಬೇಕು. ಪ್ರತಿಯೊಂದು ಸಾಫ್ಟ್‌ವೇರ್ ಅನ್ನು ಡೌನ್‌ಲೋಡ್ ಮಾಡಬಾರದು. ಹೆಚ್ಚು ತಾಂತ್ರಿಕ ಜ್ಞಾನ ಬಳಕೆ ಮಾಡುವ ವಿದ್ಯಾರ್ಥಿಗಳಿಗೆ ಹೋಲಿಸಿದರೆ ಹಿರಿಯ ನಾಗರಿಕರು ಸೈಬರ್ ವಂಚನೆಗೆ ಹೆಚ್ಚು ಗುರಿಯಾಗುತ್ತಿದ್ದಾರೆ ಎಂದರು.

ಆನ್‌ಲೈನ್ ವಂಚನೆ, ಡಿಜಿಟಲ್ ಅರೆಸ್ಟ್, ಸೈಬರ್ ಅಪರಾಧಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ಪೊಲೀಸ್ ಇಲಾಖೆ ಜಾಗೃತಿ ಕಾರ್ಯಕ್ರಮಗಳನ್ನು ರೂಪಿಸುತ್ತಿದೆ. ಆಧುನಿಕ ತಂತ್ರಜ್ಞಾನದ ಯುಗದಲ್ಲಿ ಸೈಬರ್ ಅಪರಾಧ ಪ್ರಕರಣಗಳು ದಿನೇ ದಿನೇ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಮನೆ ಮನೆಗೂ ತಲುಪಿಸುವಂತೆ ಪೊಲೀಸ್ ಇಲಾಖೆಯಿಂದ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ. ಅಪರಿಚಿತರ ಕೈಗೆ ಮೊಬೈಲ್ ನೀಡಬಾರದು, ಅಪರಿಚಿತರ ಫೋನ್ ಮತ್ತು ವಿಡಿಯೋ ಕರೆಗಳನ್ನು ಸ್ವೀಕರಿಸ ಬೇಡಿ, ಓ.ಟಿ.ಪಿ. ಸಂಖ್ಯೆ ಬ್ಯಾಂಕ್ ಖಾತೆಗಳ ಸಂಖ್ಯೆಯನ್ನು ತಿಳಿಸಬೇಡಿ, ಮುಖ್ಯವಾಗಿ ಹೆಣ್ಣು ಮಕ್ಕಳು ಮೊಬೈಲನ್ನು ಬಹಳ ಎಚ್ಚರಿಕೆಯಿಂದ ಬಳಸಬೇಕು. ಫೇಸ್ ಬುಕ್, ಟ್ವೀಟರ್, ಮುಂತಾದವುಗಳ ಮೂಲಕ ಅಪರಿಚಿತರು ಪರಿಚಯ ಮಾಡಿಕೊಂಡು ನಿಮ್ಮನ್ನು ದುರ್ಬಳಕೆ ಮಾಡಿಕೊಂಡು ಅನಾಹುತಗಳಿಗೆ ಕಾರಣರಾಗುತ್ತಾರೆ ಎಂದು ಕಿವಿಮಾತು ಹೇಳಿದರು.

ಸಂಘದ ಅಧ್ಯಕ್ಷ ಚಪ್ಪಂಡ ಹರೀಶ್ ಮಾತನಾಡಿ, ಭಾರತೀಯ ಸೇನೆಯು ಸದಾ ತಾಯಿನಾಡಿನ ಶಾಂತಿಗಾಗಿ ಸರಕಾರ ಹಾಗೂ ಪೊಲೀಸ್ ಇಲಾಖೆ ಯೊಂದಿಗೆ ಸಹಕರಿಸಿ ಸೇವೆ ಮಾಡುವುದರ ಬಗ್ಗೆ ಮನವರಿಕೆ ಮಾಡಿದರು. ಪುರಸಭೆ ಮುಖ್ಯಾಧಿಕಾರಿ ಪಟ್ಟ ಚೆರು ವಂಡ ಕೆ.ನಾಚಪ್ಪ, ಸಂಘದ ಉಪಾಧ್ಯಕ್ಷ ಚಂದ್ರಶೇಖರ್ ಬಿ.ಎಸ್. ಕಾರ್ಯದರ್ಶಿ ಮುಗ್ಗೇರ ಎಸ್.ನಂದಾ, ಖಜಾಂಚಿ ತೋರೇರ ಪೂವಯ್ಯ, ನಿರ್ದೇಶಕರಾದ ಚೇಂದ್ರಿ ಮಾಡ ಕೆ. ನಂಜಪ್ಪ, ಕೊಂಗಂಡ ಎ.ಭೀಮಯ್ಯ, ಅಣ್ಣಾಳಮಾಡ ಡಿ.ಸುಬ್ಬಯ್ಯ, ಬಾಳೆಕುಟ್ಟೀರ ಎ.ಬೋಪಯ್ಯ, ಅಪ್ಪಯ್ಯ ಹೆಚ್.ಕೆ, ಕಬ್ಬಚ್ಚೀರ ಬೋಪಣ್ಣ, ಎಂ.ಕೆ. ಸಲಾಂ ಕಡಂಗ, ಪಟ್ರಪಂಡ ಎನ್. ಚಂಗಪ್ಪ ಇದ್ದರು.

ಗ್ರಾಪಂ ಪುನರ್ ರಚನೆ; ಕರಡು ಅಧಿಸೂಚನೆ ಪ್ರಕಟ

ಮಡಿಕೇರಿ, ಜ.31–ವಿರಾಜಪೇಟೆ, ಪೊನ್ನಂಪೇಟೆ ಹಾಗೂ ಕುಶಾಲನಗರ ತಾಲೂಕಿನ ಕೆಲ ಗ್ರಾ. ಪಂ.ಗಳನ್ನು ಪುನರ್ ರಚಿಸಲು ಕರಡು ಅಧಿಸೂಚನೆ ಪ್ರಕಟಿಸಿ ಜಿಲ್ಲಾಧಿಕಾರಿ ಎಸ್.ಜೆ. ಸೋಮಶೇಖರ್ ಆದೇಶ ಹೊರಡಿಸಿದ್ದಾರೆ.

ವಿರಾಜಪೇಟೆ ತಾಲೂಕಿನ ಚೆಂಬೆಬೆಳ್ಳೂರು, ಕುಕ್ಲೂರು, ದೇವಣಗೇರಿ, ಐಮಂಗಲ, ಮಗ್ಗುಲ, ಬಿಟ್ಟಂಗಾಲ, ಬಾಳುಗೋಡು, ನಾಂಗಾಲ, 1ನೇ ರುದ್ರುಗುಪ್ಪೆ, ವಿ. ಬಾಡಗ, ಬೇಟೋಳಿ, ಹೆಗ್ಗಳ, ಕೆದಮುಳ್ಳೂರು, ಕೊಟ್ಟೋಳಿ, ಪಾಲಂಗಾಲ, ಕದನೂರು ಗ್ರಾ.ಪಂ.ನ ಕದನೂರು, ಅರಮೇರಿ ಹಾಗೂ ಮೈತಾಡಿ ಗ್ರಾಮಗಳನ್ನು ಆಯಾಯ ಪಂಚಾಯಿತಿ ವ್ಯಾಪ್ತಿಗೆ ಒಳಪಡಿಸಲಾಗಿದೆ.

ಪೊನ್ನಂಪೇಟೆ ತಾಲೂಕಿನ ಹಾತೂರು ಗ್ರಾಮದ ಹಾತೂರು, ಕೈಕೇರಿ, ಕುಂದ, ಬಲ್ಯಮಂಡೂರು ಗ್ರಾ.ಪಂ.ನ ಬಲ್ಯಮಂಡೂರು, ಚಿಕ್ಕಮಂಡೂರು, ಕುಶಾಲನಗರ ತಾಲೂಕಿನ ಗುಡ್ಡೆಹೊಸೂರು ಗ್ರಾಪಂನ ಬಸವನಹಳ್ಳಿ, ರಸಲ್‌ಪುರ, ಅತ್ತೂರು ಅರಣ್ಯ, ಆನೆಕಾಡು ಅರಣ್ಯ, ಬೈಚನಹಳ್ಳಿಯಲ್ಲಿ ಆಯಾಯ ಪಂಚಾಯಿತಿ ವ್ಯಾಪ್ತಿಗೆ ಒಳಪಡಿಸಲಾಗಿದೆ ಈ ಕರಡು ಅಧಿಸೂಚನೆಯಿಂದ ಬಾಧಿತರಾಗುವವರು ಫೆ. 6ರೊಳಗೆ ತಮ್ಮ ಆಕ್ಷೇಪಣೆಯನ್ನು ಸಲ್ಲಿಸುವಂತೆ ಜಿಲ್ಲಾಧಿಕಾರಿ ಕರಡು ಅಧಿಸೂಚನೆಯಲ್ಲಿ ತಿಳಿಸಿದ್ದಾರೆ.

ಕಾಡಾನೆ ಸೆರೆಗೆ ಕಾರ್ಯಾಚರಣೆ ಆರಂಭ



ಕಾಡಾನೆಯನ್ನು ಸೆರೆ ಹಿಡಿಯಲು ಅರಣ್ಯ ಇಲಾಖೆ ಕಾರ್ಯಾಚರಣೆ ಪ್ರಾರಂಭಿಸಿತು.

ಸಿದ್ದಾಪುರ, ಜ.31– ಕಾರ್ಮಿಕನನ್ನು ಬಲಿ ಪಡೆದ ಕಾಡಾನೆಯನ್ನು ಸೆರೆ ಹಿಡಿಯುವ ಸಲುವಾಗಿ ಗುರುತು ಪತ್ತೆಗೆ ಅರಣ್ಯ ಇಲಾಖೆ ಕಾರ್ಯಾಚರಣೆ ಪ್ರಾರಂಭಿಸಿದೆ. ಎಸಿಎಫ್ ತಹಸೀನ್ ಬಾನು ನೇತೃತ್ವದಲ್ಲಿ ಗೌರಿಬೆಟ್ಟ ಕಾಫಿ ತೋಟದಲ್ಲಿ ಬೆಳಗಿನಿಂದಲೇ ಕಾರ್ಯಾಚರಣೆ ನಡೆಸಲಾಯಿತು. ಕಾಫಿ ಕೊಯ್ಲಿನ ಸಮಯವಾಗಿರುವುದರಿಂದ ಕಾಡಾನೆಗಳನ್ನು ಮಾಲ್ದಾರೆ ಅರಣ್ಯಕ್ಕೆ ಅಟ್ಟಲು ತೀರ್ಮಾನಿಸಲಾಯಿತು. ಮೇಲಾಧಿಕಾರಿಗಳ ಆದೇಶ ಬಂದ ಬಳಿಕ ಕಾಡಾನೆ ಸೆರೆ ಹಿಡಿಯಲು ಕ್ರಮ ವಹಿಸಲಾಗುತ್ತದೆ ಎಂದು ವಿರಾಜಪೇಟೆ ಉಪ ವಲಯ ಅರಣ್ಯಾಧಿಕಾರಿ ಶಿವರಾಂ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಡಿಆರ್‌ಎಫ್‌ಓ ಶಶಿ ಪಿ.ಟಿ ಮತ್ತು ಸಜಿತ್ ಸೋಮಯ್ಯ, ಆರ್‌ಆರ್‌ಟಿ ಸಿಬ್ಬಂದಿಗಳು, ಆನೆ ಕಾರ್ಯಾಚರಣೆ ಪಡೆ ಸಿಬ್ಬಂದಿಗಳು ಹಾಜರಿದ್ದರು.

ಸರಕಾರದ ವಿರುದ್ಧ ಸಂಸದರಿಂದ ಸುಳ್ಳು ಆರೋಪ: ಟೀಕೆ



ಮಡಿಕೇರಿ, ಜ.31–ಮೈಸೂರು–ಕುಶಾಲನಗರ ನಡುವಿನ ಸುಮಾರು 87 ಕಿ.ಮೀ ಉದ್ದದ ರೈಲು ಮಾರ್ಗದ ಯೋಜನೆಗೆ ಅಗತ್ಯ ಭೂಸ್ವಾಧೀನ ಪ್ರಕ್ರಿಯೆಯನ್ನು ರಾಜ್ಯ ಸರಕಾರ ಪೂರ್ಣಗೊಳಿಸಿದ್ದರೂ ಸಂಸದ ಯದುವೀರ್ ರಾಜ್ಯ ಸರಕಾರದ ವಿರುದ್ಧ ಸುಳ್ಳು ಆರೋಪ ಮಾಡುತ್ತಿದ್ದಾರೆ ಎಂದು ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್ ಟೀಕಿಸಿದ್ದಾರೆ.

ಮೈಸೂರು– ಕುಶಾಲನಗರ ರೈಲು ಮಾರ್ಗದ ಯೋಜನೆ ಆರ್ಥಿಕವಾಗಿ ಲಾಭದಾಯಕವಲ್ಲ ಎನ್ನುವ ಕಾರಣಕ್ಕೆ ರೈಲ್ವೆ ಇಲಾಖೆ ಈ ಯೋಜನೆಯನ್ನು ಕೈಬಿಟ್ಟಿದೆ. ಆದರೆ ಸಂಸದರು ರಾಜ್ಯ ಸರಕಾರ ಭೂಸ್ವಾಧೀನ ಪಡಿಸಿಕೊಳ್ಳುವಲ್ಲಿ ವಿಳಂಬ ಮಾಡಿರುವುದು ಕಾರಣವೆಂದು ಸುಳ್ಳು ಹೇಳಿದ್ದಾರೆ ಎಂದು ಪತ್ರಿಕಾಗೋಷ್ಠಿಯಲ್ಲಿ ಅಸಮಾಧಾನ ವ್ಯಕ್ತಪಡಿಸಿದರು. ಯದುವೀರ್ ಸಂಸದರಾದ ನಂತರ ಅನೇಕ ಯೋಜನೆಗಳು ಸ್ಥಗಿತಗೊಂಡಿವೆ. ರಾಜ್ಯದ ಒಟ್ಟು 236 ತಾಲೂಕುಗಳಲ್ಲಿ ಕೊಡಗು ಜಿಲ್ಲೆಯ 5 ತಾಲೂಕುಗಳು ಸೇರಿದಂತೆ ಒಟ್ಟು 80 ತಾಲೂಕುಗಳಿಗೆ ಇಂದಿಗೂ ರೈಲ್ವೆ ಮಾರ್ಗವಿಲ್ಲ ಎಂದರು.

ಚಾಮುಂಡಿ ಬೆಟ್ಟದಲ್ಲಿ ಮೂಲ ಸೌಲಭ್ಯ ಗಳನ್ನು ಒದಗಿಸಲು 46 ಕೋಟಿ ರೂ.ಗಳ ಯೋಜನೆಯನ್ನು ರೂಪಿಸಲಾಗಿತ್ತು. ಆದರೆ ಇದು ಕೂಡ ನೆನೆಗುದಿಗೆ ಬಿದ್ದಿದೆ. ಸುಮಾರು 175 ಕೋಟಿ ರೂ.ಗಳ ಕ್ಯಾನ್ಸರ್ ಸೆಂಟರ್ ಸ್ಥಾಪನೆಯಾಗಿಲ್ಲ, ಮೈಸೂರು ಏರ್‌ಪೋರ್ಟ್ ವಿಸ್ತರಣೆ ಕಾರ್ಯಕ್ಕೆ ಕಾಳಜಿ ತೋರಿಲ್ಲ, ರಿಂಗ್ ರೋಡ್‌ಗೆ ಎಳ್ಳು ನೀರು ಬಿಡಲಾಗಿದೆ ಎಂದು ಟೀಕಿಸಿದರು.

ಸಂಸದರಾದ ನಂತರ ಕ್ಷೇತ್ರಕ್ಕೆ ಕೇಂದ್ರ ದಿಂದ ಯಾವ ಯೋಜನೆಯನ್ನು ತಂದಿದ್ದಾರೆ ಎನ್ನುವ ಬಗ್ಗೆ ಶ್ವೇತಪತ್ರ ಹೊರಡಿಸಲಿ ಎಂದು ಒತ್ತಾಯಿಸಿದರು. ಜಿಲ್ಲೆಯಲ್ಲಿ ಇಂದು ಶಾಂತಿ ನೆಲೆಸಿದೆ, ನಾವು ಧರ್ಮದ ಆಧಾರದಲ್ಲಿ ರಾಜಕಾರಣ ಮಾಡುವವರಲ್ಲ. ಅಭಿವೃದ್ಧಿಯ ಆಧಾರದಲ್ಲಿ ರಾಜಕಾರಣ ಮಾಡುವವರು. ಎಂದರು.

ನಾಳೆ ಸತ್ಯನಾರಾಯಣ ಪೂಜೆ

ಮಡಿಕೇರಿ: ಭಾಗಮಂಡಲದ ಶ್ರೀ ಭಗಂಡೇಶ್ವರ ದೇವಾಲಯದಲ್ಲಿ ಫೆ.1ರ ಸಂಜೆ 4ಗಂಟೆಯಿಂದ ಸಾಮೂಹಿಕ ಸತ್ಯನಾರಾಯಣ ಪೂಜೆ ನಡೆಯಲಿದೆ.

ಭಕ್ತಾದಿಗಳು ದೇವಾಲಯಗಳಲ್ಲಿ ನಡೆಯಲಿರುವ ಪೂಜೆಯಲ್ಲಿ ಭಾಗವಹಿಸಿ, ಯಶಸ್ವಿಗೊಳಿ ಸುವಂತೆ ದೇವಾಲಯದ ಕಾರ್ಯನಿರ್ವಾಹಕ ಅಧಿಕಾರಿ ಚಂದ್ರಶೇಖರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಸವಪೂರ್ವ ಆರೈಕೆ ಸಂಬಂಧ ಕಾರ್ಯಾಗಾರ



ಮೈಸೂರಿನ ಪ್ರಸಿದ್ಧ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ಸೋನಿಯಾ ಮಂದಪ್ಪ ಪ್ರಸವಪೂರ್ವ ಆರೈಕೆ ಸಂಬಂಧ ಅರಿವು ಮೂಡಿಸಿದರು.

ಮಡಿಕೇರಿ, ಜ.31– ಪ್ರಸವಪೂರ್ವ ಆರೈಕೆ ಸಂಬಂಧ ಜಾಗೃತಿ ಮೂಡಿಸುವುದಕ್ಕಾಗಿ ಸುಂಟಿಕೊಪ್ಪದ ಸ್ವಸ್ಥ ಕೇಂದ್ರದಲ್ಲಿ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು.

ಪ್ರಸವ ಪೂರ್ವ ಹಂತದಲ್ಲಿ ಅಂಗ ವೈಫಲ್ಯವನ್ನು ತಡೆಗಟ್ಟುವ ಸವಾಲು, ಅದರಿಂದಾಗುವ ಅಪಾಯಗಳನ್ನು ಗುರುತಿಸಲು ಅಂಗನವಾಡಿ ಶಿಕ್ಷಕರು, ಆಶಾ ಕಾರ್ಯಕರ್ತೆಯರು ಮತ್ತು ವಿಶೇಷಚೇತನರ ಆರೈಕೆದಾರರಿಗಾಗಿ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು.

ಮೈಸೂರಿನ ಪ್ರಸಿದ್ಧ ಪ್ರಸೂತಿ ಮತ್ತು ಸ್ತ್ರೀ ರೋಗ ತಜ್ಞೆ ಡಾ. ಸೋನಿಯಾ ಮಂದಪ್ಪ ಸಂಪನ್ಮೂಲ ವ್ಯಕ್ತಿಯಾಗಿ ಗರ್ಭಧಾರಣೆ, ಸುರಕ್ಷಿತ ಹೆರಿಗೆ, ಆರೈಕೆಯಲ್ಲಿ ಆರೋಗ್ಯ ಕಾರ್ಯಕರ್ತರ ಪಾತ್ರದ ಬಗ್ಗೆ ಮಾತನಾಡಿದರು.

ಸ್ವಸ್ಥ ಸಂಸ್ಥೆಯ ನಿರ್ದೇಶಕಿ ಆರತಿ ಸೋಮಯ್ಯ, ದ ಕೂರ್ಗ್ ಫೌಂಡೇಶನ್ ಟ್ರಸ್ಟಿ ಗಂಗಾ ಚೆಂಗಪ್ಪ, ಸ್ವಸ್ಥ ಪಾಲಿಬೆಟ್ಟ ಕೇಂದ್ರದ ಮುಖ್ಯಸ್ಥೆ ಐಶ್ವರ್ಯ ಬೋಪಯ್ಯ ಶಿಕ್ಷಕಿಯರು, ಉಪಸ್ಥಿತರಿದ್ದರು.

ದಂಟಳ್ಳಿ ಏತ ನೀರಾವರಿ ಯೋಜನೆ ಜಾರಿಗೆ ಆಗ್ರಹಿಸಿ ರಸ್ತೆ ತಡೆ



ದಂಟಳ್ಳಿ ಏತ ನೀರಾವರಿ ಯೋಜನೆಗೆ ಆಗ್ರಹಿಸಿ ಶನಿವಾರ ರೈತರು ಬೃಹತ್ ರಸ್ತೆ ತಡೆ ನಡೆಸಿದರು.

ಹನೂರು, ಜ.31–ದಂಟಳ್ಳಿ ಏತ ನೀರಾವರಿ ಯೋಜನೆಗೆ ಡಿ.ಪಿ.ಆರ್ ಮಾಡುವಂತೆ ಆಗ್ರಹಿಸಿ ತಾಲೂಕಿನ ವಡಕೆಹಳ್ಳ ಗ್ರಾಮದಲ್ಲಿ ರಾಜ್ಯ ರೈತ ಸಂಘ ಹಾಗೂ ಯುವ ಮುಖಂಡ ನಿಶಾಂತ್ ನೇತೃತ್ವದಲ್ಲಿ ಎರಡು ಸಾವಿರಕ್ಕೂ ಹೆಚ್ಚು ರೈತರು ಬೃಹತ್ ರಸ್ತೆ ತಡೆ ನಡೆಸಿದರು.

ಜಿಲ್ಲೆಯ ವಿವಿಧೆಡೆಯಿಂದ ತೆರಳಿದ್ದ ಸಾವಿರಾರು ರೈತರು ವಡಕೆಹಳ್ಳ ಮಹದೇಶ್ವರ ಬೆಟ್ಟ ಮುಖ್ಯ ರಸ್ತೆ ಯಲ್ಲಿ ರಸ್ತೆ ತಡೆ ನಡೆಸಿ, ಸರ್ಕಾರ ಹಾಗೂ ಜನ ಪ್ರತಿನಿಧಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ಹೊರಹಾಕಿದರು. ದಂಟಳ್ಳಿ ಗ್ರಾಮದ ಮೂಲಕ ಕುರಟ್ಟಿ ಹೊಸೂರು, ಶೆಟ್ಟಳ್ಳಿ, ಕೌದಳ್ಳಿ, ಮಾರ್ಟಳ್ಳಿ ಗ್ರಾ. ಪಂ. ವ್ಯಾಪ್ತಿಯ ಗ್ರಾಮಗಳಿಗೆ ಅಂತರ್ಜಲ ಮಟ್ಟ ಹೆಚ್ಚಿಸಲು, ಕುಡಿಯುವ ನೀರಿನ ಬವಣೆ ನೀಗಿಸಲು ದಂಟಳ್ಳಿ ಏತ ನೀರಾವರಿ ಯೋಜನೆ ಅನುಷ್ಠಾನ ಮಾಡಿ ಡಿಪಿಆರ್ ಸಿದ್ದ ಪಡಿಸುವಂತೆ 96 ದಿನಗಳಿಂದ ರಾಜ್ಯ ರೈತ ಸಂಘದಿಂದ ಧರಣಿ ನಡೆಸಲಾಗುತ್ತಿದೆ ಎಂದರು.

ಶಾಸಕರ ವಿರುದ್ಧ ಆಕ್ರೋಶ: ಜ. 15ರೊಳಗೆ ಡಿಪಿಆರ್ ಮಾಡಿಸುತ್ತೇನೆ. ಒಂದೊಮ್ಮೆ ಸಾಧ್ಯವಾಗದಿದ್ದರೆ ನಿಮ್ಮ ಜೊತೆ ಹೋರಾಟಕ್ಕೆ ಕೂರುತ್ತೇನೆ ಎಂದು ಭರವಸೆ ನೀಡಿದ್ದ ಶಾಸಕ ಎಂ.ಆರ್. ಮಂಜುನಾಥ್ ಮಾತು ತಪ್ಪಿದ್ದಾರೆ. ಜೊತೆಗೆ ಇಬ್ಬರು ಜಿಲ್ಲಾಧಿಕಾರಿಗಳ ಭರವಸೆ ಹುಸಿಯಾಗಿರುವುದರಿಂದ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದು ತಿಳಿಸಿದರು.

ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಹೆಚ್ಚುವರಿ ಜಿಲ್ಲಾಧಿಕಾರಿ ಪ್ರತಿಭಟನಾಕಾರರ ಮನವಿ ಆಲಿಸಿ, ಸಮಸ್ಯೆಯ ಬಗ್ಗೆ ಡಿಸಿ ಸರ್ಕಾರಕ್ಕೆ ವರದಿ ನೀಡಿದ್ದಾರೆ. ಮುಂದಿನ ದಿನಗಳಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಜೊತೆ ಚರ್ಚೆ ನಡೆಸಿ ದಿನಾಂಕವನ್ನು ನಿಗದಿ ಮಾಡಿ ರೈತ ಮುಖಂಡರುಗಳ ಜೊತೆ ಚರ್ಚೆ ನಡೆಸಿ ಸಮಸ್ಯೆಯನ್ನು ಬಗೆಹರಿಸುವ ನಿಟ್ಟಿನಲ್ಲಿ ಸೂಕ್ತ ಕ್ರಮ ವಹಿಸಲಾಗುವುದು ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮುತ್ತುರಾಜು, ಪ್ರಭಾರ ಉಪ ವಿಭಾಗಾಧಿಕಾರಿ ಬಸವರಾಜು, ತಹಸೀಲ್ದಾರ್ ಚೈತ್ರ ಪಾಲ್ಗೊಂಡು ರೈತ ಮುಖಂಡರುಗಳ ಜೊತೆ ಚರ್ಚೆ ನಡೆಸಿದರು. ಕೊಳ್ಳೇಗಾಲ ಉಪ ವಿಭಾಗದ ಡಿವೈಎಸ್ಪಿ ಧರ್ಮೇಂದ್ರ, ಇನ್ಸ್‌ಪೆಕ್ಟರ್‌ಗಳಾದ ಚಿಕ್ಕರಾಜಶೆಟ್ಟಿ, ಆನಂದಮೂರ್ತಿ ಜಗದೀಶ್ ನವೀನ್ ನೇತೃತ್ವದಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಕಲ್ಪಿಸಲಾಗಿತ್ತು.

ಯುವ ಮುಖಂಡ ನಿಶಾಂತ್, ಕರ್ನಾಟಕ ರೈತ ಸಂಘದ ಜಿಲ್ಲಾಧ್ಯಕ್ಷ ಶೈಲೇಂದ್ರ, ಹಿರಿಯ ಮುಖಂಡ ಪೊನ್ನಾಚಿ ಮಹದೇವ ಸ್ವಾಮಿ, ತಮಿಳುನಾಡು ರೈತಸಂಘದ ರಾಜ್ಯಾಧ್ಯಕ್ಷ ರವಿಕುಮಾರ್, ಗ್ರಾಮ ಘಟಕದ ಅಧ್ಯಕ್ಷ ಅರ್ಪುದರಾಜ್, ಮಾಜಿ ಸೈನಿಕರಾದ ಜೋಸೆಫ್, ಲೂಯಿಸ್ ಪೆರಿಯ ನಾಯಗಂ, ಮುಖಂಡರಾದ ಬಸವರಾಜಪ್ಪ, ಬಸವರಾಜು, ಪ್ರೀತಂ, ಚೇತನ್, ರಾಜು ಸೇರಿದಂತೆ ರೈತ ಮುಖಂಡರು, ಯುವಕರು ಪಾಲ್ಗೊಂಡಿದ್ದರು.

ಮುಡುಕುತೊರೆ ಜಾತ್ರೆಗೆ ತೆರಳಿದ ಕುದೇರು ಗ್ರಾಮಸ್ಥರು



ಮುಡುಕುತೊರೆ ಜಾತ್ರೆಗೆ ಕುದೇರು ಗ್ರಾಮಸ್ಥರು ಎತ್ತಿನ ಗಾಡಿಗಳಲ್ಲಿ ತೆರಳಿದರು.

ಚಾಮರಾಜನಗರ, ಜ.31–ಎರಡು ಶತಮಾನದಿಂದ ಅನೂಚಾನವಾಗಿ ನಡೆದುಕೊಂಡು ಬರುತ್ತಿರುವ ಮುಡುಕುತೊರೆ ಜಾತ್ರೆಗೆ ಕುದೇರು ಗ್ರಾಮಸ್ಥರು ಹೋಗುವಂತೆ ಇಂದೂ ಸಹ 100ಕ್ಕೂ ಹೆಚ್ಚು ಮಂದಿ ತೆರಳಿದರು.

ತಾಲೂಕಿನ ಕುದೇರು ಗ್ರಾಮಸ್ಥರು ಭಾರಿ ಮೆರವಣಿಗೆ ಮೂಲಕ ಮಂಗಳವಾದ್ಯ, ತಮಟೆ, ಬ್ಯಾಂಡ್ ವೀರಗಾಸೆ ಪಟಾಕಿ ಸಿಡಿಸಿ ಮುಡುಕುತೊರೆ ಭ್ರಮರಾಂಬಿಕಾ ಮಲ್ಲಿಕಾರ್ಜುನ ಸ್ವಾಮಿ ಜಾತ್ರೆಗೆ ತೆರಳಿದರು. ತೆಪ್ಪೋತ್ಸವ ಹಾಗೂ ದೇವಸ್ಥಾನಕ್ಕೆ ಪೂಜೆಗೆ ರಾಜ್ಯದ ವಿವಿದೆಡೆಗಳಿಂದ ಬರುವ ಭಕ್ತಾದಿಗಳಿಗೆ ಮೂರು ದಿನ ಅನ್ನ ಸಂತರ್ಪಣೆ ಮಾಡಲು 20ಕ್ಕೂ ಹೆಚ್ಚು ಎತ್ತಿನ ಗಾಡಿಗಳು, ಗೂಡ್ಸ್ ಆಟೋಗಳು, ಟಾಟಾ ಬೋಲೆರೊ ಸೇರಿದಂತೆ 100ಕ್ಕೂ ಹೆಚ್ಚು ವಾಹನಗಳಲ್ಲಿ ತೆರಳಿದರು.

ಮುಡುಕುತೊರೆ ಜಾತ್ರೆ ಆವರಣದಲ್ಲಿ ಗುಂಪು ಗುಂಪಾಗಿ ಅರೆಹೊಟ್ಟೆಗೆ ಟೆಂಟ್ ನಿರ್ಮಿಸಿ ಜಾತ್ರೆಗೆ ಬರುವ ಭಕ್ತರೆಲ್ಲರಿಗೂ ಸಿಹಿ ಊಟ ಹಾಕುವ ಸಂಪ್ರದಾಯ ಮಾಡಿಕೊಂಡು ಬರುತ್ತಿದ್ದು, ಜಾತ್ರಾ ಮಹೋತ್ಸವದ ಸಂದರ್ಭದಲ್ಲಿ ಇಡೀ ಕುದೇರು ಗ್ರಾಮವೇ ಮೂರು ದಿನ ಜಾತ್ರೆಯ ಆವರಣದಲ್ಲಿ ಇರುತ್ತದೆ.

ಶ್ರೀಲಕ್ಷ್ಮೀಗೆ ಚಿನ್ನದ ಪದಕ



ಮೈಸೂರಲ್ಲಿ ನಡೆದ ಮುಕ್ತ ವಿವಿ ಘಟಿಕೋತ್ಸವದಲ್ಲಿ ಬೇಗೂರು ಗ್ರಾಮದ ಶಿಕ್ಷಕಿ ಎಂ. ಶ್ರೀಲಕ್ಷ್ಮೀ ಚಿನ್ನದ ಪದಕ ಮತ್ತು ನಗದು ಬಹುಮಾನವನ್ನು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್‌ರಿಂದ ಸ್ವೀಕರಿಸಿದರು.

ರಾಮಸಮುದ್ರದಲ್ಲಿ ಮೂಲ ಸೌಕರ್ಯಕ್ಕಾಗಿ ಒತ್ತಾಯಿಸಿ ಪ್ರತಿಭಟನೆ



ಚಾಮರಾಜನಗರ, ಜ.31– ನಗರದ ರಾಮಸಮುದ್ರ ಬಡಾವಣೆಯ 5 ವಾರ್ಡ್‌ಗಳಲ್ಲೂ ರಸ್ತೆ ಚರಂಡಿ, ಕುಡಿಯುವ ನೀರು ಹಾಗೂ ಒಳಚರಂಡಿಯ ಸಮಸ್ಯೆ ಬಗೆಹರಿಸುವಂತೆ ಒತ್ತಾಯಿಸಿ ನಿವಾಸಿಗಳು ಶನಿವಾರ ಪ್ರತಿಭಟನೆ ನಡೆಸಿದರು.

ಬಡಾವಣೆಯ ಬಸ್ ನಿಲ್ದಾಣದಲ್ಲಿ ಸಮಾವೇಶಗೊಂಡ ನಿವಾಸಿಗಳು ಖಾಲಿಬಿಂದಿಗೆ ಹಿಡಿದು ರಸ್ತೆತಡೆ ನಡೆಸಿ, ಜಿಲ್ಲಾಡಳಿತ, ನಗರಸಭೆ, ಶಾಸಕರ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಕೇಂದ್ರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ. ರಾಮಚಂದ್ರ ಮಾತನಾಡಿ, ರಾಮಸಮುದ್ರ ಬಡಾವಣೆಯ 5 ವಾರ್ಡ್‌ಗಳಲ್ಲೂ ಐದಾರು ತಿಂಗಳಿನಿಂದಲೂ ಕುಡಿಯುವ ನೀರು ಇಲ್ಲದೆ ತೊಂದರೆ ಅನುಭವಿಸುವಂತಾಗಿದೆ. ಕುಡಿಯುವ ನೀರಿಗಾಗಿ ನಿವಾಸಿಗಳು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ. ಯಾವುದೇ ಬೋರ್‌ವೆಲ್ ದುರಸ್ಥಿಪಡಿಸಿಲ್ಲ. ನಗರಸಭೆ ದಿವ್ಯನಿರ್ಲಕ್ಷತೆ ತಾಳಿದೆ ಎಂದು ಆರೋಪಿಸಿದರು.

ಆರ್.ವಿ.ಮಹದೇವಸ್ವಾಮಿ ಮಾತನಾಡಿದರು. ಪ್ರತಿಭಟನೆಯಲ್ಲಿ ರಾಮಸಮುದ್ರ ಶಿವು, ಆರ್.ಪುಟ್ಟಮಲ್ಲಪ್ಪ, ಭೃಂಗೇಶ್, ಆರ್.ಡಿ.ಮಹೇಶ್, ವೇಣು ಗೋಪಾಲ್, ಹೇಮಂತ್ ಕುಮಾರ್, ಗಿರೀಶ್, ಕುಮಾರ್, ನವೀನ್, ಸೋಮಣ್ಣ, ಚಿನ್ನಸ್ವಾಮಿ, ಮಹದೇವಯ್ಯ, ಹೋಟೆಲ್ ಪುಟ್ಟಣ್ಣ ಕುಮಾರ್, ಯುವಗಿರಿ, ಅಜಯ್, ರವಿ, ದೇವಣ್ಣ, ಇತರರು ಭಾಗವಹಿಸಿದ್ದರು.

ಜೂಜಾಡುತ್ತಿದ್ದ 9 ಮಂದಿ ಬಂಧನ

ಕೊಳ್ಳೇಗಾಲ, ಜ.31(ಎನ್‌ಎನ್)–ತಾಲೂಕಿನ ಮಧುವನಹಳ್ಳಿ ಗ್ರಾಮದಲ್ಲಿ ಜೂಜಾಡುತ್ತಿದ್ದ 9 ಮಂದಿಯನ್ನು ಪೊಲೀಸರು ಬಂಧಿಸಿ, ಪಣಕ್ಕಿಟ್ಟಿದ್ದ 4,460 ರೂ.ನ್ನು ಜಪ್ತಿ ಮಾಡಿದ್ದಾರೆ

ಮಧುವನಹಳ್ಳಿ ಗ್ರಾಮದ ಗವಿಶೆಟ್ಟಿ, ಮಹೇಶ, ಯೋಗೇಶ, ಮಾದೇವಶೆಟ್ಟಿ ಮಹೇಶ್, ರಂಗಸ್ವಾಮಿ, ಸಿದ್ದರಾಜು, ಮಾದೇಶ್, ವೆಂಕಟೇಶ ಬಂಧಿತ ಆರೋಪಿಗಳು. ಗ್ರಾಮದ ಜಮೀನಿನ ಶೆಡ್‌ನಲ್ಲಿ ಅಕ್ರಮವಾಗಿ ಇಸ್ಪೀಟು ಆಡುತ್ತಿರುವುದಾಗಿ ಬಂದ ಖಚಿತ ಮಾಹಿತಿ ಮೇರೆಗೆ ಗ್ರಾಮಾಂತರ ಪೊಲೀಸರು ದಾಳಿ ನಡೆಸಿ ಆರೋಪಿಗಳನ್ನು ಬಂಧಿಸಿ ಜಾಮೀನಿನ ಮೇಲೆ ಬಿಡುಗಡೆಗೊಳಿಸಿ ಕ್ರಮ ಕೈಗೊಂಡಿದ್ದಾರೆ.

ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಜರುಗಿಸಿದ್ದಾರೆ. ದಾಳಿಯಲ್ಲಿ ಪಿಎಸ್‌ಐ ಸುಪ್ರೀತ್, ಹೆಡ್ ಕಾನ್ಸ್‌ಟೆಬಲ್ ವಿನೋದ್, ಕಾನ್ಸ್‌ಟೆಬಲ್ ರಾಜೇಶ್, ಮನೋಹರ್, ನಂಜುಂಡಸ್ವಾಮಿ ಇದ್ದರು.

ಫೆ.6 ರಂದು ಬಾಲ್ಯವಿವಾಹ ಮುಕ್ತ ಮಂಡ್ಯ ಜಿಲ್ಲೆ ಅಭಿಯಾನ ಅಂಗವಾಗಿ ಬೃಹತ್ ತರಬೇತಿ ಕಾರ್ಯಾಗಾರ



ಬೃಹತ್ ತರಬೇತಿ ಕಾರ್ಯಾಗಾರ ಕುರಿತು ಅಧಿಕಾರಿಗಳು ಚರ್ಚಿಸಿದರು.

ಮಂಡ್ಯ: ಫೆ.6 ರಂದು ನಗರದ ಡಾ.ಬಿ. ಆರ್.ಅಂಬೇಡ್ಕರ್ ಭವನದಲ್ಲಿ ಬಾಲ್ಯವಿವಾಹ ಮುಕ್ತ ಮಂಡ್ಯ ಜಿಲ್ಲೆ ಅಭಿಯಾನದ ಅಂಗವಾಗಿ ಬೃಹತ್ ತರಬೇತಿ ಕಾರ್ಯಾಗಾರವನ್ನು ಆಯೋಜಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ತಿಳಿಸಿದರು.

ಇಂದು ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಏರ್ಪಡಿಸಲಾಗಿದ್ದ ಜಿಲ್ಲಾ ಮಕ್ಕಳ ರಕ್ಷಣಾ ಸಮಿತಿ(DCPC) ಹಾಗೂ ಬಾಲ್ಯವಿವಾಹ ಮುಕ್ತ ಮಂಡ್ಯ ಜಿಲ್ಲೆ ಅಭಿಯಾನ ಅಂಗವಾಗಿ ಬೃಹತ್ ತರಬೇತಿ ಕಾರ್ಯಾಗಾರದ ಕುರಿತು ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಮಂಡ್ಯ ಜಿಲ್ಲೆಯನ್ನು ಬಾಲ್ಯ ವಿವಾಹ ಮುಕ್ತ ಸಂಕಲ್ಪ ಅಭಿಯಾನದ ಅಂಗವಾಗಿ ಮಕ್ಕಳ ಸಂರಕ್ಷಣೆ ಮತ್ತು ಕಾನೂನಿನ ಕುರಿತಾಗಿ ಬೃಹತ್ ಕಾರ್ಯಾಗಾರವನ್ನು ಆಯೋಜಿಸಬೇಕು ಎಂದರು.

ಜಿಲ್ಲೆಯ ಎಲ್ಲಾ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು, ಅಂಗನವಾಡಿ ಕಾರ್ಯಕರ್ತೆಯರು, ಶಾಲೆ ಮತ್ತು ಪದವಿ ಪೂರ್ವ ಕಾಲೇಜಿನ ಎಲ್ಲಾ ಶಿಕ್ಷಕರು ಹಾಗೂ ಖಾಸಗಿ ಶಾಲೆಗಳ ವಾಹನ ಚಾಲಕರು, ತಾಲೂಕು ಮಟ್ಟದ ಎಲ್ಲಾ ಅಧಿಕಾರಿಗಳು ಮತ್ತು ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಭಾಗವಹಿಸಲಿದ್ದು ಸುಮಾರು ಒಂದು ವರೆಯಿಂದ ಎರಡು ಸಾವಿರ ಜನರು ಭಾಗಿಯಾಗಲಿದ್ದಾರೆ. ಸದರಿ ಕಾರ್ಯಕ್ರಮದಲ್ಲಿ ಬಾಲ್ಯ ವಿವಾಹ ಮತ್ತು ಪೋಕ್ಸೋ ಕಾಯ್ದೆಯ ಕುರಿತಾಗಿ ಅರಿವು ಮೂಡಿಸಲಾಗುವುದು ಎಂದು ಹೇಳಿದರು.

ಕರ್ನಾಟಕ ರಾಜ್ಯ ಬಾಲ ನ್ಯಾಯ ಮಂಡಳಿಯ ಸಮಿತಿಯ ಅಧ್ಯಕ್ಷರು ಹಾಗೂ ನ್ಯಾಯಾಧೀಶರು ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. ವಿವಿಧ ಇಲಾಖೆಗಳಿಂದ ಮಕ್ಕಳಿಗೆ ಸಂಬಂಧಿಸಿದ 10 ಮಳಿಗೆಗಳನ್ನು ತೆರೆಯಲಾಗುವುದು. ಜಿಲ್ಲೆಯಲ್ಲಿರುವ ಎಲ್ಲಾ ಸರ್ಕಾರಿ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ ಕಡ್ಡಾಯವಾಗಿ ಸದರಿ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು ಎಂದು ತಿಳಿಸಿದರು.

ಜವಾಬ್ದಾರಿ ವಹಿಸಿರುವ ಇಲಾಖೆಗಳು ಸಮನ್ವಯ ಸಾಧಿಸಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಡಬೇಕು ಎಂದು ಹೇಳಿದರು. ಸಭೆಯಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಆನಂದ್ ಎಂ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅಧಿಕಾರಿ ಕೆ.ಆರ್ ನಂದಿನಿ, ಅಪರ ಪೊಲೀಸ್ ಅಧೀಕ್ಷಕ ತಿಮ್ಮಯ್ಯ, ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಅರ್ಜಿ ಅಹ್ವಾನ

ಮಂಡ್ಯ, ಜ.31– 2025–26ನೇ ಸಾಲಿನ ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಹಾಗೂ ಪ್ರವರ್ಗ–1ರ ಅಲೆಮಾರಿ/ಅರೆಅಲೆಮಾರಿ ವಿದ್ಯಾರ್ಥಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೂಲಕ ನೀಡಲಾಗುತ್ತಿರುವ "ಶುಲ್ಕ ಮರುಪಾವತಿ" ಕಾರ್ಯಕ್ರಮದ ಸೌಲಭ್ಯಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಅಂತಿಮ ದಿನಾಂಕವನ್ನು ಫೆ.2 ರವರೆಗೆ ಪೋಷಕರು / ವಿದ್ಯಾರ್ಥಿಗಳು ಮತ್ತು ಶೈಕ್ಷಣಿಕ ಸಂಸ್ಥೆಗಳ ಮನವಿಯ ಮೇರೆಗೆ ವಿಸ್ತರಿಸಲಾಗಿದೆ. ಅರ್ಹ ವಿದ್ಯಾರ್ಥಿಗಳು ಈ ಸೌಲಭ್ಯಗಳನ್ನು ಸದುಪಯೋಗ ಪಡಿಸಿಕೊಳ್ಳಲುಬೇಕು.

ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಬೇಕಾದ ವೆಬ್ ಸೈಟ್ :https: ssp.postmetric.karnataka.gov.in ಮೂಲಕ ಅರ್ಜಿ ಸಲ್ಲಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಇಲಾಖಾ ಸಹಾಯವಾಣಿ ದೂರವಾಣಿ ಸಂಖ್ಯೆ: 80507 70004 ಹಾಗೂ E-mail : bcwdhelpline@gmail.com ಅನ್ನು ಸಂಪರ್ಕಿಸಬಹುದು. ಎಂದು ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಜಿಲ್ಲಾಧಿಕಾರಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜನಸಂಖ್ಯೆ ಬೆಳೆದಂತೆ ಕೃಷಿ ಭೂಮಿ ಕಡಿಮೆಯಾಗುತ್ತಿದೆ

ಬಳೇಅತ್ತಿಗುಪ್ಪೆ ಡೇರಿಯ ಕಾಂಪೌಂಡ್ ಉದ್ಘಾಟನೆ



ಕಾರ್ಯಕ್ರಮವನ್ನು ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಉದ್ಘಾಟಿಸಿದರು.

ಪಾಂಡವಪುರ, ಜ.31– ಜನಸಂಖ್ಯೆ ಬೆಳೆದಂತೆ ಕೃಷಿ ಭೂಮಿ ಕಡಿಮೆಯಾಗುತ್ತಿದೆ, ಹಾಗಾಗಿ ರೈತರು ಎಚ್ಚೆತ್ತುಕೊಂಡು ಕೃಷಿಯ ಜತೆಗೆ ಹೈನುಗಾರಿಕೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ಹೇಳಿದರು.

ತಾಲೂಕಿನ ಬಳೇಅತ್ತಿಗುಪ್ಪೆ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದಲ್ಲಿ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಕಾಂಪೌಂಡ್ ಕಟ್ಟಡ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಬಳೇ ಅತ್ತಿಗುಪ್ಪೆ ಹಾಲು ಉತ್ಪಾದಕರ ಸಹಕಾರ ಸಂಘವು 16 ಲೀಟರ್ ಹಾಲು ಪೂರೈಕೆ ಆರಂಭಗೊಂಡು ಪ್ರಸ್ತುತ ನೂರಾರು ಲೀಟರ್ ಹಾಲು ಉತ್ಪಾದನೆ ಮಾಡುವ ಹಂತಕ್ಕೆ ಬೆಳೆದಿದೆ. ಸಂಘದ ಆಡಳಿತ ಮಂಡಳಿಯವರು ಉತ್ತಮವಾದ ರೀತಿಯಲ್ಲಿ ಕಟ್ಟಡ ನಿರ್ಮಾಣವನ್ನು ನಿರ್ಮಾಣ ಮಾಡಿದ್ದಾರೆ. ಸಂಘಕ್ಕೆ ಬಿಎಂಸಿ ಘಟಕಕ್ಕೆ ಮಂಜೂರು ಮಾಡಬೇಕೆಂದು ಮನವಿ ಮಾಡಿದ್ದಾರೆ ಮುಂದಿನ ದಿನಗಳಲ್ಲಿ ಬಿಎಂಸಿ ಕೇಂದ್ರ ಆರಂಭಕ್ಕೆ ಪ್ರಾಮಾಣಿಕವಾಗಿ ಪ್ರಯತ್ನ ಮಾಡುತ್ತೇನೆ ಎಂದು ಭರವಸೆ ನೀಡಿದರು.

ತಾಲೂಕಿನ 7500 ರಬ್ಬರ್ ಮ್ಯಾಟ್‌ಗಳು ಮಂಜೂರಾಗಿವೆ. ರಬ್ಬರ್ ಮ್ಯಾಟ್‌ಗಳಿಗೆ ಹೆಚ್ಚಿನ ಬೇಡಿಕೆ ಇರುವುದರಿಂದ ಮುಂದಿನ ದಿನಗಳಲ್ಲಿ ಮತ್ತಷ್ಟು ರಬ್ಬರ್ ಮ್ಯಾಟ್‌ಗಳನ್ನು ತರಿಸಿ ಒಟ್ಟಿಗೆ ವಿತರಣೆ ಮಾಡಲಾಗುವುದು. ಜತೆಗೆ ಹಾಲು ಕರೆಯುವ ಯಂತ್ರ, ಮೇವು ಕತ್ತರಿಸುವ ಯಂತ್ರಗಳನ್ನು ಸಹ ವಿತರಣೆ ಮಾಡಲಾಗುವುದು ಎಂದು ತಿಳಿಸಿದರು.

ಡೇರಿಗಳಲ್ಲಿ ರಾಜಕೀಯ ವಿಶ್ರಾ ಮಾಡಬೇಡಿ. ಎಲ್ಲರು ಜತೆಗೂಡಿ ಸಂಘದ ಅಭಿವೃದ್ದಿಗೆ ಕೆಲಸ ಮಾಡಬೇಕು, ನಮ್ಮ ಒಕ್ಕೂಟದಿಂದ ಹಾಲು ದೆಹಲಿ, ಜಾರ್ಖಂಡ್, ಉತ್ತರ್‌ಖಂಡ್ ರಾಜ್ಯಗಳಿಗೆ ಹಾಲು ಪೂರೈಕೆಯಾಗುತ್ತಿದೆ, ಹಾಗಾಗಿ ಒಕ್ಕೂಟಕ್ಕೆ ಗುಣಮಟ್ಟದ ಹಾಲುಪೂರೈಕೆ ಮಾಡಬೇಕು ಎಂದು ಮನವಿ ಮಾಡಿದರು.

ಮನ್‌ಮುಲ್ ಉಪವ್ಯವಸ್ಥಾಪಕ ಆರ್. ಪ್ರಸಾದ್ ಮಾತನಾಡಿದರು. ಮಾರ್ಗವಿಸ್ತಾರ್ಣಾಧಿಕಾರಿ ಉಷಾ, ಡೇರಿ ಅಧ್ಯಕ್ಷೆ ಸರ್ವಮ್ಮ, ಉಪಾಧ್ಯಕ್ಷೆ ಆಶಾರಾಣಿ, ನಿರ್ದೇಶಕರಾದ ನಾಗಮಣಿ, ವಸಂತ, ಪುಟ್ಟಮಣಿ, ಪ್ರಮೀಳ, ಲೀಲಾವತಿ, ಶೋಭಾ, ಪ್ರೇಮ, ಕಾರ್ಯದರ್ಶಿ ಹೇಮಾಕ್ಷಿ, ಶೈಲಾ, ಲಲಿತಮ್ಮ, ಸಿದ್ದಲಿಂಗಪ್ಪ ಶಿವಸ್ವಾಮಿ, ನಂಜಪ್ಪ ಶಿವಲಿಂದರಾಧ್ಯ, ಬಿ.ಸಿ.ಲೋಕೇಶ್, ಈರಾಜ್, ಶಿವಣ್ಣ, ಕೆ.ಚಂದ್ರಪ್ಪ, ಜಾಗತಿಕ ಲಿಂಗಾಯತ ಮಹಾ ಸಭಾ ತಾಲೂಕು ಕೈಸಲಾಮೂರ್ತಿ, ವೀರ ಶೈವ ಲಿಂಗಾಯತ ಮಹಾಸಭಾ ನಿರ್ದೇ ಶಕರಾದ ಬಿ.ಡಿ.ಚಂದ್ರಶೇಖರ್, ಶೈಲಾ ಮಹದೇವಪ್ಪ, ಉಮೇಶ್, ಅನು, ವರದರಾಜು, ರಮೇಶ್, ಚಂದ್ರು, ರವಿ ಸೇರಿದಂತೆ ಹಲವರು ಇದ್ದರು.

ರಾಜಕಾರಣಿಗಳೊಂದಿಗೆ ಪತ್ರಕರ್ತರಿಗೆ ಉತ್ತಮ ಸಂಬಂಧವಿರಬೇಕು

ಮಂಡ್ಯ: ಪತ್ರಕರ್ತರು ರಾಜಕಾರಣಿಗಳೊಂದಿಗೆ ಒಳ್ಳೆಯ ಸಂಬಂಧ ಇಟ್ಟುಕೊಳ್ಳಬೇಕು. ರಾಜಕಾರಣಿಗೆ ಸಲಹೆ ಸೂಚನೆಗಳನ್ನು ನೀಡಬೇಕು. ಆದರೆ ಆ ಸಂಬಂಧ ಪತ್ರಕರ್ತರೊಂದಿಗೆ ರಾಜಕಾರಣ ಮಾಡಬಾರದು ಎಂದು ಶಾಸಕ ರವಿಕುಮಾರ್ ಗೌಡ ಸಲಹೆ ನೀಡಿದರು.

ಯಾವುದೇ ಕ್ಷೇತ್ರದಲ್ಲಿ ಕಮಿಟ್‌ಮೆಂಟ್ ಇರುವವರನ್ನು ಹಿಂಬಾಲಿಸಿದರೆ ಸಾಧನೆ ಮಾಡಬಹುದು. ಅಂತಹ ನಾಯಕರ ಅನುಗ್ರಹದಿಂದ ಇಂದು ಶಾಸಕನಾಗಿದ್ದೇನೆ. ಇಂತಹ ಕಮಿಟ್‌ಮೆಂಟ್‌ನಿಂದಲೇ ಬಿ.ಪಿ. ಪ್ರಕಾಶ್ ಮುಡಾ ಅಧ್ಯಕ್ಷರಾಗಿದ್ದಾರೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಉಪಾಧ್ಯಕ್ಷ ಮತ್ತೀಕೆರೆ ಜಯರಾಂ ಮಾತನಾಡಿ, ರವಿಕುಮಾರ್ ಅವರು ಮಂಡ್ಯ ಜಿಲ್ಲೆ ಕಂಡ ಕ್ರಿಯಾಶೀಲ ಶಾಸಕ ಅವರಂತೆಯೇ ಕ್ರಿಯಾಶೀಲ ಯುವಕ ಬಿ.ಪಿ. ಪ್ರಕಾಶ್ ಅವರಿಗೆ ಮುಡಾ ಅಧ್ಯಕ್ಷ ಸ್ಥಾನ ಒದಗಿಸಿದ್ದಾರೆ. ಅವರೂ ಉತ್ತಮವಾಗಿ ಕೆಲಸ ಮಾಡಲಿ ಎಂದು ಆಶಿಸಿದರು.

ಮದನ್‌ಗೌಡ, ಸೋಮಶೇಖರ ರಾಘವೇಂದ್ರ, ಮಂಜುನಾಥ, ಲೋಕೇಶ್ ಇದ್ದರು.



ಮೈಸೂರು ಮಿತ್ರ
ಭಾನುವಾರ 01-02-2026

ವಾರದ ಮಿತ್ರ
ಸಾಪ್ತಾಹಿಕ ಪುರವಣಿ



ಉತ್ತನಹಳ್ಳಿ ಜಾತ್ರಾ ಮಹೋತ್ಸವ

ಗ್ರಾಮೀಣ ಸಂಸ್ಕೃತಿ ಮತ್ತು ದೈವಭಕ್ತಿಯ ಜೀವಂತ ಉತ್ಸವ

ಕರ್ನಾಟಕದ ಗ್ರಾಮೀಣ ಬದುಕಿನಲ್ಲಿ ಜಾತ್ರೆಗಳು ಕೇವಲ ಧಾರ್ಮಿಕ ಆಚರಣೆಗಳಷ್ಟೇ ಅಲ್ಲ; ಅವು ಜನಪದ ಸಂಸ್ಕೃತಿ, ಸಾಮಾಜಿಕ ಬಾಂಧವ್ಯ, ನಂಬಿಕೆ ಹಾಗೂ ಸಮುದಾಯ ಜೀವನದ ಜೀವಂತ ಪ್ರತಿಬಿಂಬಗಳಾಗಿವೆ. ಅಂಥಹ ಮಹತ್ವದ ಜಾತ್ರೆಗಳಲ್ಲಿ ಉತ್ತನಹಳ್ಳಿಯ ಶ್ರೀ ಮಾರಮ್ಮನ ಜಾತ್ರೆಯು ವಿಶೇಷ ಸ್ಥಾನವನ್ನು ಹೊಂದಿದೆ. ಈ ಜಾತ್ರೆಯ ಸಂದರ್ಭದಲ್ಲಿ ನಡೆಯುವ ಕ್ರಿಯಾ ವಿಧಿಗಳು ಜನಮಾನಸದಲ್ಲಿ ಆಳವಾಗಿ ಬೇರುಬಿಟ್ಟಿರುವ ನಂಬಿಕೆಗಳು, ಸಂಪ್ರದಾಯಗಳು ಮತ್ತು ಶ್ರದ್ಧೆಯ ಪ್ರತೀಕಗಳಾಗಿವೆ.

ಭಾರತವು ಜಗತ್ತಿನಲ್ಲಿಯೇ ಅತ್ಯಂತ ಪ್ರಾಚೀನ ಹಾಗೂ ಶ್ರೀಮಂತ ಸಾಂಸ್ಕೃತಿಕ ರಾಷ್ಟ್ರಗಳಲ್ಲಿ ಒಂದಾಗಿದೆ. ಈ ಸಂಸ್ಕೃತಿಯ ಜೀವಾಳವು ಮಹಾನಗರಗಳಲ್ಲಲ್ಲ, ಬದಲಾಗಿ ಹಳ್ಳಿಗಳಲ್ಲಿದೆ. 'ಹಳ್ಳಿಯಿಂದ ದಿಲ್ಲಿಯವರೆಗೆ' ಎಂಬ ನಾಣ್ಣುಡಿ ಹಳ್ಳಿಗಳ ಮಹತ್ವವನ್ನು ಸ್ಪಷ್ಟವಾಗಿ ಸೂಚಿಸುತ್ತದೆ. ಭಾರತೀಯ ಹಳ್ಳಿಗಳು ಕೇವಲ ವಾಸಸ್ಥಳಗಳಲ್ಲ, ಅವು ಸಂಸ್ಕೃತಿ, ಪರಂಪರೆ, ಆಚರಣೆ, ನಂಬಿಕೆ ಮತ್ತು ಜನಪದ ಜೀವನಶೈಲಿಯ ಜೀವಂತ ಕೇಂದ್ರಗಳಾಗಿವೆ.

ಆಧುನಿಕತೆಯ ವೇಗದ ನಡುವೆ ಅನೇಕ ಹಳ್ಳಿಗಳು ತಮ್ಮ ಮೂಲ ಸ್ವರೂಪವನ್ನು ಕಳೆದುಕೊಳ್ಳುತ್ತಿರುವ ಈ ಸಂದರ್ಭದಲ್ಲಿ, ಪರಂಪರೆಯ ಮೌಲ್ಯಗಳನ್ನು ಇನ್ನೂ ಅಚ್ಚುಕಟ್ಟಾಗಿ ಉಳಿಸಿಕೊಂಡು ಬಂದಿದೆ ಮೈಸೂರು ಸೆರಗಿನಲ್ಲಿರುವ ಉತ್ತನಹಳ್ಳಿ. ಈ ಗ್ರಾಮದ ಹೆಮ್ಮೆಯ ಸಂಕೇತವೇ ಉತ್ತನಹಳ್ಳಿ ಮಾರಮ್ಮನ ಜಾತ್ರಾ ಮಹೋತ್ಸವ.

ಉತ್ತನಹಳ್ಳಿ ಇತಿಹಾಸ

ಮೈಸೂರಿನಿಂದ ಸುಮಾರು 13 ಕಿಲೋ ಮೀಟರ್ ದೂರದಲ್ಲಿರುವ ಉತ್ತನಹಳ್ಳಿ ಗ್ರಾಮವು ಐತಿಹಾಸಿಕ ಹಾಗೂ ಪೌರಾಣಿಕ ಹಿನ್ನೆಲೆಯನ್ನು ಹೊಂದಿರುವ ವಿಶಿಷ್ಟ ಗ್ರಾಮವಾಗಿದೆ. ಪ್ರಕೃತಿಯ ಹಸಿರು ಸೌಂದರ್ಯ, ಬೆಟ್ಟದ ತಪ್ಪಲಿನ ನೆಲೆ ಮತ್ತು ಜನಪದ ಸಂಸ್ಕೃತಿಯ ಮಿಶ್ರಣ ಈ ಗ್ರಾಮಕ್ಕೆ ವಿಶೇಷ ಸೊಬಗನ್ನು ನೀಡಿದೆ.

ಪಟ್ಟಣದ ನುಡಿ-ನಡತೆಯನ್ನು ಅಳವಡಿಸಿಕೊಂಡರೂ, ತಲತಲಾಂತರಗಳಿಂದ ನಡೆದು ಬಂದ ಸಂಪ್ರದಾಯ, ಆಚರಣೆ ಮತ್ತು ನಂಬಿಕೆಗಳನ್ನು ಚಾಚು ತಪ್ಪದೆ ಪಾಲಿಸಿಕೊಂಡು ಬಂದಿರುವುದು ಈ ಗ್ರಾಮದ ಶ್ಲಾಘನೀಯ ಗುಣ. ಇದರ ಜೀವಾಳವೇ ಉತ್ತನಹಳ್ಳಿ ಗ್ರಾಮದ ಆರಾಧ್ಯ ದೇವತೆಯಾದ ಉತ್ತನಹಳ್ಳಿ ಮಾರಮ್ಮ.

ಪೌರಾಣಿಕ ಹಿನ್ನೆಲೆ

ಸ್ಥಳೀಯ ಹಿರಿಯರು ಹಾಗೂ ಐತಿಹ್ಯಗಳ ಪ್ರಕಾರ, ಪೌರಾಣಿಕ ಕಾಲದಲ್ಲಿ 'ಮಹಿಷ ಮಂಡಲ' ಎಂದು ಕರೆಯಲ್ಪಟ್ಟ ಇಂದಿನ ಮೈಸೂರು ಪ್ರದೇಶದಲ್ಲಿ ಮಹಿಷಾಸುರ ಎಂಬ ದುಷ್ಟ ರಾಕ್ಷಸನು ಆಳುತ್ತಿದ್ದನು. ಋಷಿ-ಮುನಿಗಳ ಯಜ್ಞ-ಯಾಗಗಳಿಗೆ ವಿಘ್ನ ಉಂಟು ಮಾಡುತ್ತಿದ್ದ ಅವನ ಅಟ್ಟಹಾಸಕ್ಕೆ ಮಿತಿ ಇರಲಿಲ್ಲ. ಈ ದುಸ್ಥಿತಿಯಿಂದ ಕಂಗೆಟ್ಟ ದೇವತೆಗಳು ತ್ರಿಮೂರ್ತಿಗಳಾದ ಬ್ರಹ್ಮ, ವಿಷ್ಣು ಮತ್ತು ಮಹೇಶ್ವರರ ಮೊರೆ ಹೋದರು.

ಮಹಿಷಾಸುರನ ಸಂಹಾರ ಪುರುಷ ಶಕ್ತಿಯಿಂದ ಸಾಧ್ಯವಿಲ್ಲ; ಅದು ಸ್ತ್ರೀಶಕ್ತಿಯಿಂದ ಮಾತ್ರ ಸಾಧ್ಯವೆಂಬ ದೈವವಾಣಿ ಕೇಳಿಬಂದಾಗ, ಶಿವನ ಅರ್ಧಾಂಗಿಯಾದ ಪಾರ್ವತಿಯು ಭೂಲೋಕದ ಕಲ್ಯಾಣಕ್ಕಾಗಿ ಅವತರಿಸುವುದಾಗಿ ಸಂಕಲ್ಪ ಮಾಡಿದಳು. ದೇವತೆಗಳು ತಮ್ಮ ಶಕ್ತಿಯನ್ನು ಧಾರೆ ಎರೆದು, ವಿವಿಧ ಆಯುಧಗಳನ್ನು ನೀಡಿದರು. ಈ ಸಮೂಹ ಶಕ್ತಿಯ ಪ್ರತೀಕವಾಗಿ ತಾಯಿ ಚಾಮುಂಡೇಶ್ವರಿ ಅವತಾರವೆತ್ತಿದಳು.

ಆದರೆ ಮಹಿಷಾಸುರನ ರಕ್ತದ ಪ್ರತಿಯೊಂದು ಹನಿಯಿಂದಲೂ ಹೊಸ ರಾಕ್ಷಸರು ಹುಟ್ಟುತ್ತಿದ್ದ ಕಾರಣ ಸಂಹಾರ ಸುಲಭವಿರಲಿಲ್ಲ. ಆಗ ತಾಯಿ ಚಾಮುಂಡಿಯ ಮುಖದಿಂದ ಸುರಿದ ಬೆವರಿಂದಲೇ ಜ್ವಾಲಾಮುಖಿ ತ್ರಿಪುರ ಸುಂದರಿ ದೇವಿಯು ಅವತರಿಸಿದಳು. ಅವಳೇ ಮಹಿಷಾಸುರನ ರಕ್ತವನ್ನು ನೆಲಕ್ಕೆ ಬೀಳದಂತೆ ಕುಡಿಯುವ ಮೂಲಕ ಸಂಹಾರಕ್ಕೆ ನೆರವಾದಳು. ಈ ಜ್ವಾಲಾಮುಖಿ ತ್ರಿಪುರ ಸುಂದರಿಯೇ ಮುಂದೆ ಉತ್ತನಹಳ್ಳಿ ಮಾರಮ್ಮ ಎಂಬ ಹೆಸರಿನಿಂದ ಪ್ರಸಿದ್ಧಳಾದಳು ಎಂಬ ನಂಬಿಕೆ ಇಂದಿಗೂ ಗ್ರಾಮಸ್ಥರಲ್ಲಿ ಅಚಲವಾಗಿದೆ.

ಉತ್ತನಹಳ್ಳಿ ಹೆಸರಿನ ಹಿಂದಿನ ಕಥೆ

ಸ್ಥಳೀಯ ಜವರಪ್ಪನವರ ಹೇಳಿಕೆಯಂತೆ, ಮಹಿಷಾಸುರ ಸಂಹಾರದ ನಂತರ ಚಾಮುಂಡೇಶ್ವರಿ ಬೆಟ್ಟದಲ್ಲಿ ನೆಲೆಸಿದಳು. ತನ್ನ ಸಹೋದರಿಯಾದ ಜ್ವಾಲಾಮುಖಿ ದೇವಿಯನ್ನೂ ಬೆಟ್ಟದಲ್ಲೇ ನೆಲೆಸಲು ಆಹ್ವಾನಿಸಿದಳು. ಆದರೆ ಜ್ವಾಲಾಮುಖಿ ದೇವಿಯು ಬೆಟ್ಟದಿಂದ ಐದು ಬಳಪದ ಕಲ್ಲುಗಳನ್ನು ಹೊತ್ತುಕೊಂಡು ಕೆಳಗಿಳಿಯುವ ವೇಳೆ ಕಾಲಿಗೆ ಕಲ್ಲು ತಾಗಿ ಬಿದ್ದಳು. ಈ ಸ್ಥಳವನ್ನು ಇಂದಿಗೂ 'ಬಿದ್ ಬೆಟ್ಟ' ಎಂದು ಕರೆಯಲಾಗುತ್ತದೆ. ನಂತರ ದೇವಿಯು ಬೆಟ್ಟದ ತಪ್ಪಲಿನ ಗ್ರಾಮದಲ್ಲಿ ನೆಲೆಸಿದಳು. ಆಕೆಯ ಹೆಸರಿನಿಂದಲೇ ಈ ಗ್ರಾಮಕ್ಕೆ 'ಉತ್ತನಹಳ್ಳಿ' ಎಂಬ ಹೆಸರು ರೂಢಿಯಾಯಿತು ಎಂದು ಗ್ರಾಮಸ್ಥರು ನಂಬುತ್ತಾರೆ.

ಮಾರಮ್ಮನ ದೇವಾಲಯ

ಉತ್ತನಹಳ್ಳಿ ಮಾರಮ್ಮನ ದೇವಾಲಯವು ಬೆಟ್ಟದ ತಪ್ಪಲಿನಲ್ಲಿ, ಬೆಟ್ಟದ ಸ್ವರೂಪವನ್ನೇ ಹೋಲುವ ರೀತಿಯಲ್ಲಿ ನಿರ್ಮಾಣಗೊಂಡಿದೆ. ದೇವಾಲಯಕ್ಕೆ ಎರಡು ಪ್ರವೇಶ ದ್ವಾರಗಳಿದ್ದು, ಒಂದರಲ್ಲಿ ನೂರೊಂದು ಮೆಟ್ಟಿಲುಗಳಿವೆ. ಗೋಪುರ, ಮಂಟಪ ಹಾಗೂ ಸುತ್ತುವರಿದ ಗೋಡೆಗಳಿಂದ ಕೂಡಿದ ಈ ದೇವಾಲಯದ ಆವರಣದಲ್ಲಿ ಮಾರಮ್ಮನ ಬಲಭಾಗದಲ್ಲಿ ಶಿವಾಲಯವಿದ್ದು, ಸಮೀಪದಲ್ಲೇ ಭೈರವೇಶ್ವರ ಮತ್ತು ಸಿದ್ದೇಶ್ವರ ದೇವಾಲಯಗಳೂ ಇವೆ.

ಈ ದೇವಾಲಯ ಹಾಗೂ ಗ್ರಾಮವು 'ಸಿಂಹಾದ್ರಿಯ ಸಿಂಹ', 'ಸೇವಂತಿ ಸೇವಂತಿ' ಮುಂತಾದ ಕನ್ನಡ ಚಲನಚಿತ್ರಗಳಲ್ಲಿ ಕಾಣಿಸಿಕೊಂಡು, ತನ್ನ ಗ್ರಾಮೀಣ ಬದುಕಿನ ಸೊಗಡನ್ನು ರಾಜ್ಯಮಟ್ಟದಲ್ಲಿ ಪರಿಚಯಿಸಿಕೊಂಡಿದೆ.

ಜಾತ್ರಾ ಮಹೋತ್ಸವ

ಉತ್ತನಹಳ್ಳಿ ಮಾರಮ್ಮನ ಜಾತ್ರೆಯು ಫೆಬ್ರವರಿ 1, 2, 3ರಂದು ಬಹಳ ವಿಜೃಂಭಣೆ ಹಾಗೂ ಭಕ್ತಿ ಶ್ರದ್ಧೆಯಿಂದ ಸಾವಿರಾರು ಭಕ್ತ ಸಮೂಹವು ನೆರೆಯುವ ಮೂಲಕ ಜರುಗುತ್ತಿದೆ. ಈ ಜಾತ್ರೆ ದೈವಭಕ್ತಿ, ಗ್ರಾಮೀಣ ನಂಬಿಕೆ ಮತ್ತು ಸಾಮಾಜಿಕ ಒಗ್ಗಟ್ಟಿನ ಪ್ರತೀಕವಾಗಿದೆ.

ಕರ್ನಾಟಕದ ಗ್ರಾಮೀಣ ಬದುಕಿನಲ್ಲಿ ಜಾತ್ರೆಗಳು ಕೇವಲ ಧಾರ್ಮಿಕ ಆಚರಣೆಗಳಷ್ಟೇ ಅಲ್ಲ; ಅವು ಜನಪದ ಸಂಸ್ಕೃತಿ, ಸಾಮಾಜಿಕ ಬಾಂಧವ್ಯ, ನಂಬಿಕೆ ಹಾಗೂ ಸಮುದಾಯ ಜೀವನದ ಜೀವಂತ ಪ್ರತಿಬಿಂಬಗಳಾಗಿವೆ. ಅಂಥಹ ಮಹತ್ವದ ಜಾತ್ರೆಗಳಲ್ಲಿ ಉತ್ತನಹಳ್ಳಿಯ ಶ್ರೀ ಮಾರಮ್ಮನ ಜಾತ್ರೆಯು ವಿಶೇಷ ಸ್ಥಾನವನ್ನು ಹೊಂದಿದೆ. ಈ ಜಾತ್ರೆಯ ಸಂದರ್ಭದಲ್ಲಿ ನಡೆಯುವ ಕ್ರಿಯಾ ವಿಧಿಗಳು ಜನಮಾನಸದಲ್ಲಿ ಆಳವಾಗಿ ಬೇರುಬಿಟ್ಟಿರುವ ನಂಬಿಕೆಗಳು, ಸಂಪ್ರದಾಯಗಳು ಮತ್ತು ಶ್ರದ್ಧೆಯ ಪ್ರತೀಕಗಳಾಗಿವೆ.

ಪೀಡುಗಡೆಯುವುದು

ಜಾತ್ರೆಯ ಮೊದಲ ಪ್ರಮುಖ ಕ್ರಿಯಾವಿಧಿಯಾಗಿ ಪೀಡುಗಡೆಯುವಿಕೆ ನಡೆಯುತ್ತದೆ. ಇದು ಸಾಮಾನ್ಯವಾಗಿ ಶುಕ್ರವಾರ ರಾತ್ರಿ ಸುಮಾರು 8.30ರ ವೇಳೆಗೆ ಪ್ರಾರಂಭವಾಗುತ್ತದೆ. ಇದನ್ನು ಸ್ಥಳೀಯವಾಗಿ 'ಸೂತಕ ಕಳೆಯುವುದು' ಎಂದು ಕರೆಯಲಾಗುತ್ತದೆ. ಆದಿಕರ್ನಾಟಕ ಸಮುದಾಯದ ಒಬ್ಬ ವ್ಯಕ್ತಿ ಗ್ರಾಮದ ಎಲ್ಲ ಮನೆಗಳಿಗೆ ಪ್ರವೇಶಿಸಿ ಹೊರಬರುತ್ತಾರೆ. ಈ ಕ್ರಿಯೆಯಿಂದ ಮನೆಗೆ ಸಂಬಂಧಿಸಿದ ದೋಷಗಳು, ಕೆಟ್ಟ ಸೂಚನೆಗಳು ನಿವಾರಣೆಯಾಗುತ್ತವೆ ಎಂಬ ನಂಬಿಕೆ ಗ್ರಾಮಸ್ಥರಲ್ಲಿದೆ.

ಇದರಿಂದ ಸಾಮಾಜಿಕ ಸಮಾನತೆ ಹಾಗೂ ಬಾಂಧವ್ಯವೂ ವ್ಯಕ್ತವಾಗುತ್ತದೆ. ಅವರು ಮನೆಗೆ ಪ್ರವೇಶಿಸಿ ಹೊರಬರುವಾಗ ಅವನ ಕಾಲಿಗೆ ಬೂದಿ ಎರಚಲಾಗುತ್ತದೆ. ಅವರ ವಿಶಿಷ್ಟ ವೇಷ-ಭೂಷಣಗಳನ್ನು ಕಂಡು ಮನುಷ್ಯರು, ಪ್ರಾಣಿಗಳು ಬೆಚ್ಚುವುದು ಈ ಆಚರಣೆಯ ನೈಜ ದೃಶ್ಯ. ಈ ಕ್ರಿಯೆಯ ನಂತರ ಯಾವುದೇ ಮನೆಯಲ್ಲೂ ಮೆಣಸಿನಕಾಯಿ ಸುಡುವುದು, ವಗ್ಗರಣೆ ಹಾಕುವುದು ಮುಂತಾದ ಕ್ರಿಯೆಗಳು ನಡೆಯುವುದಿಲ್ಲ. 'ಹಿರೀಕರು ಮಾಡಿದ್ದಂತೆ ನಾವು ಮಾಡುತ್ತೇವೆ' ಎಂಬ ನಂಬಿಕೆಯೇ ಇದಕ್ಕೆ ಕಾರಣ.

ಹೊಸ ನೀರು

ಶನಿವಾರ ನಡೆಯುವ ಮತ್ತೊಂದು ಪ್ರಮುಖ ಕ್ರಿಯಾವಿಧಿ ಹೊಸ ನೀರು ತರುವುದು. ಈ ದಿನ ಮನೆಗಳನ್ನು ಸ್ವಚ್ಛಗೊಳಿಸಿ, ಗೋಡೆಗಳಿಗೆ ಸುಣ್ಣ-ಬಣ್ಣ ಹಚ್ಚಿ, ಎಲ್ಲರೂ ಸ್ನಾನ ಮಾಡಿ ಮಡಿವಂತಿಕೆಯಿಂದ ಹೊಸ ನೀರನ್ನು ತರಲು ಸಿದ್ಧಗೊಳ್ಳುತ್ತಾರೆ. ಈ ನೀರನ್ನು ದೇವಿಯ ನೈವೇದ್ಯಕ್ಕಾಗಿ ಬಳಸಲಾಗುತ್ತದೆ.

ಅಕ್ಕಿಯನ್ನು ನೆನೆಯಿಸಿ, ಹಸಿ ಹಿಟ್ಟು ಮಾಡಿಕೊಂಡು ಬೆಲ್ಲ ಮತ್ತು ನೀರಿನಿಂದ ಪಾಕ ತಯಾರಿಸಿ, ಅದರಲ್ಲಿ ಅಕ್ಕಿಯ ಹಿಟ್ಟನ್ನು ಸೇರಿಸಿ ತಂಬಿಟ್ಟು ತಯಾರಿಸಲಾಗುತ್ತದೆ. ಇದು ದೇವಿಗೆ ಸಲ್ಲಿಸುವ ಪ್ರಮುಖ ನೈವೇದ್ಯವಾಗಿರುತ್ತದೆ.

ಕಣ್ಣ ಕನ್ನಡಿ ಆಚರಣೆ

ಭಾನುವಾರ ನಡೆಯುವ ಕಣ್ಣ ಕನ್ನಡಿ ಆಚರಣೆ ಜಾತ್ರೆಯ ಅತ್ಯಂತ ವೈಭವಶಾಲಿ ಹಾಗೂ ಸಾಂಕೇತಿಕ ವಿಧಿಯಾಗಿದ್ದು, ದೇವಿಯನ್ನು ಭಕ್ತರಿಗೆ ದೃಶ್ಯ ರೂಪದಲ್ಲಿ ಪರಿಚಯಿಸುವ ಉದ್ದೇಶ ಹೊಂದಿದೆ. ಉತ್ಸವ ಮೂರ್ತಿ ಇಲ್ಲದ ಕಾರಣ, ಲಿಂಗಾಯತ ಅರ್ಚಕರು ಕಣ್ಣ ಕನ್ನಡಿಯನ್ನು ತಮ್ಮ ಮನೆಯಲ್ಲಿ ಪ್ರತಿಷ್ಠಾಪಿಸಿ ಪೂಜೆ ನೆರವೇರಿಸುತ್ತಾರೆ.

ಪೂಜೆಯ ನಂತರ ಅವಿವಾಹಿತ ಕನ್ಯೆಯರು ಕಬ್ಬಿಣದ ತೇರಿನಲ್ಲಿ ಕಣ್ಣ ಕನ್ನಡಿಯನ್ನು ಹೊತ್ತು ಮೆರವಣಿಗೆ ನಡೆಸುತ್ತಾರೆ. ಛತ್ರಿ-ಚಾಮರಗಳು, ಕೊಂಬು-ಕಹಳೆಗಳ ನಾದ, ಓಲಗದವರ ವಾದ್ಯ, ಜನಪದ ಹಾಡುಗಳು ಈ ಮೆರವಣಿಗೆಗೆ ವಿಶೇಷ ಕಳೆ ನೀಡುತ್ತವೆ. ಉತ್ತನಹಳ್ಳಿ ಹಾಗೂ ಏಳಿಗೆಹುಂಡಿ ಗ್ರಾಮದ ಬೀದಿಗಳಲ್ಲಿ ದೇವಿಯ ಮೆರವಣಿಗೆ ನಡೆಯುತ್ತದೆ. ರಾತ್ರಿ ಸುಮಾರು 9 ಗಂಟೆಗೆ ಆರಂಭವಾಗಿ ಬೆಳಗಿನ ಜಾವ 4 ಗಂಟೆಯವರೆಗೆ ಈ ವಿಧಿ ಸಾಗುತ್ತದೆ.

ಬಾಯಿ ಬೀಗ ಆಚರಣೆ

ಕಣ್ಣ ಕನ್ನಡಿ ಆಚರಣೆಯ ಮರುದಿನ ಸೋಮವಾರ ಬೆಳಿಗ್ಗೆ ಬಾಯಿ ಬೀಗ ವಿಧಿ ನಡೆಯುತ್ತದೆ. ಭಯ, ರೋಗ, ಸಂಕಟಗಳಿಂದ ಮುಕ್ತಿ ಪಡೆಯಲು ಭಕ್ತರು ಹರಕೆ ಹೊತ್ತು ಈ ವಿಧಿಯನ್ನು ನೆರವೇರಿಸುತ್ತಾರೆ. ಉಪವಾಸದಿಂದಿದ್ದು, ಹರಕೆ ಪೂರ್ಣಗೊಂಡ ನಂತರವೇ ಮಡೆ ಅನ್ನವನ್ನು ಸ್ವೀಕರಿಸುವುದು ಇಲ್ಲಿನ ಸಂಪ್ರದಾಯ.

ಭಕ್ತರು ನಿಗದಿತ ದಾನವನ್ನು ನೀಡಿ ಬಾಯಿಗೆ ಬೆಳ್ಳಿಯ ತಂತಿಯಿಂದ ಮಾಡಿದ ಬೀಗವನ್ನು ಹಾಕಿಸಿಕೊಳ್ಳುತ್ತಾರೆ. ಪೂಜೆ ಮುಗಿದ ನಂತರ ಪೂಜಾರಿ ಬೀಗವನ್ನು ತೆಗೆಯುತ್ತಾನೆ. ಈ ಆಚರಣೆ ಭಕ್ತಿಯ ಪರಾಕಾಷ್ಠೆಯನ್ನು ಪ್ರತಿಬಿಂಬಿಸುತ್ತದೆ.

ಮಡೆ ಹುಯ್ಯುವುದು

ಜಾತ್ರೆಯ ಮತ್ತೊಂದು ಪ್ರಮುಖ ಕ್ರಿಯಾವಿಧಿ ಮಡೆ ಹುಯ್ಯುವುದು. ಮಧ್ಯಾಹ್ನ 2.30ರ ವೇಳೆಗೆ ದೇವಾಲಯದ ಹೊರಭಾಗದಲ್ಲಿ ಒಲೆಗಳನ್ನು ನಿರ್ಮಿಸಿ, ನೈವೇದ್ಯ ತಯಾರಿಸಲಾಗುತ್ತದೆ. ಈ ವಿಧಿಯನ್ನು ಗ್ರಾಮಸ್ಥರ ಜೊತೆಗೆ ನೆರೆಯ ಹಳ್ಳಿಗಳ ಭಕ್ತರೂ ನೆರವೇರಿಸುತ್ತಾರೆ.

ನೈವೇದ್ಯ ಸಿದ್ಧವಾದ ನಂತರ ತೀರ್ಥ ಪ್ರೋಕ್ಷಣೆ ಮಾಡಿ, ಅದನ್ನು ತಲೆಯ ಮೇಲೆ ಹೊತ್ತು ಮನೆಗೆ ತರುತ್ತಾರೆ. ಮನೆಗೆ ಪ್ರವೇಶಿಸುವ ಮೊದಲು ಶುದ್ಧಾಚರಣೆ ಪಾಲಿಸಿ, ನಂತರ ಕುಟುಂಬದ ಎಲ್ಲರೂ ಪ್ರಸಾದ ಸ್ವೀಕರಿಸುತ್ತಾರೆ. ಇದರಿಂದ ಜಾತ್ರೆಯ ಧಾರ್ಮಿಕ ವಿಧಿಗಳು ಪೂರ್ಣಗೊಳ್ಳುತ್ತವೆ.

ಜಾತ್ರೆಯ ಮನರಂಜನಾ ಆಯಾಮ

ಜಾತ್ರೆಯ ಸಂದರ್ಭದಲ್ಲಿ ಧಾರ್ಮಿಕ ಆಚರಣೆಗಳ ಜೊತೆಗೆ ಸಾಂಸ್ಕೃತಿಕ ಮನರಂಜನೆಗೂ ಮಹತ್ವ ನೀಡಲಾಗುತ್ತದೆ. ವಿವಿಧ ಯುವಕ ಸಂಘ ಗಳಿಂದ 'ರಸ ಮಂಜರಿ' ಕಾರ್ಯಕ್ರಮಗಳು, ನಾಟಕ ಪ್ರದರ್ಶನಗಳು ನಡೆಯುತ್ತವೆ. ಸಾಮಾಜಿಕ ಹಾಗೂ ಪೌರಾಣಿಕ ನಾಟಕಗಳು ಜನರನ್ನು ಆಕರ್ಷಿಸುತ್ತವೆ. ಜೊತೆಗೆ ವ್ಯಾಪಾರ ಮಳಿಗೆಗಳು, ಅಂಗಡಿ ಮುಂಗಟ್ಟುಗಳು ಜಾತ್ರೆಗೆ ವಿಶೇಷ ಶೋಭೆ ನೀಡುತ್ತವೆ.

ಒಟ್ಟಾರೆಯಾಗಿ ಉತ್ತನಹಳ್ಳಿ ಮಾರಮ್ಮನ ಜಾತ್ರೆ ಧರ್ಮ, ಸಂಸ್ಕೃತಿ, ನಂಬಿಕೆ ಮತ್ತು ಸಾಮಾಜಿಕ ಜೀವನದ ಸಂಗಮವಾಗಿದೆ. ಈ ಜಾತ್ರೆಯ ಕ್ರಿಯಾ ವಿಧಿಗಳು ಜನಪದ ಪರಂಪರೆಯ ಜೀವಂತ ದಾಖಲೆಗಳಾಗಿದ್ದು, ಇಂದಿನ ತಲೆಮಾರಿಗೆ ಗ್ರಾಮೀಣ ಸಂಸ್ಕೃತಿಯ ಮಹತ್ವವನ್ನು ನೆನಪಿಸುವ ಮಹತ್ವದ ಪರಂಪರೆಯಾಗಿದೆ.



ಪರಮೇಶ ಕೆ.ಉತ್ತನಹಳ್ಳಿ
ಕನ್ನಡ ಸಹಾಯಕ ಪ್ರಾಧ್ಯಾಪಕ,
ಮೊ: 77958 62281

ವಾರಭವಿಷ್ಯ

1.2.2026 ರಿಂದ 7.2.2026

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ : ರವಿ- ಮಕರ , ಚಂದ್ರ- ಕಟಕ, ಸಿಂಹ, ಕನ್ಯಾ, ಕುಜ- ಮಕರ, ಬುಧ-ಮಕರ, ಕುಂಭ, ಗುರು- ಮಿಥುನ, ಶುಕ್ರ-ಮಕರ, ಕುಂಭ, ಶನಿ-ಮೀನ, ರಾಹು-ಕುಂಭ ಮತ್ತು ಕೇತು- ಸಿಂಹ



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720

ಮೇಷ (ಚು,ಚೆ,ಲ,ಲಿ,ಲು,ಲೆ,ಲೂ,ಅ)

ವಾರದ ಆದಿಗೆ ಹಲವು ಕ್ಷೇತ್ರಗಳಲ್ಲಿ ಅಂದುಕೊಂಡ ಫಲಿತಾಂಶವನ್ನು ಸಾಧಿಸಲಿದ್ದೀರಿ.ಉದ್ಯೋಗ ಸ್ಥಳದಲ್ಲಿ ಮೇಲಧಿಕಾರಿಗಳ ಮೆಚ್ಚುಗೆಯನ್ನು ಗಳಿಸುವಿರಿ. ಹಣಕಾಸಿನ ಸಂಗತಿ ವಾರದ ದ್ವಿತೀಯಾರ್ಧದಲ್ಲಿ ಸುದಾರಿಸಲಿದೆ. ನಿಮ್ಮ ವಿರೋಧಿಗಳಿಗೆ ತಕ್ಕ ಪ್ರತ್ಯುತ್ತರವನ್ನು ನೀಡುವಿರಿ. ಸೋದರ-ಸೋದರಿಯರ ಜತೆಗಿನ ಬಿಕ್ಕಟ್ಟುಗಳು ಉಲ್ಬಣವಾಗುವುದು, ಅತಿರೇಕಕ್ಕೆ ಹೋಗದಂತೆ ಜಾಣ್ಮೆ ವಹಿಸಿ.

ಶ್ರೀಗಣಪತಿ ಸ್ತುತಿ. ಶುಭ ಸಂಖ್ಯೆ-8

ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೊ)

ಈ ಸಪ್ತಾಹದಲ್ಲಿ ಹಲವು ಶುಭಫಲಗಳನ್ನು ನಿರೀಕ್ಷಿಸಬಹುದು. ವ್ಯವಹಾರದಲ್ಲಿನ ಎಲ್ಲಾ ಸಮಸ್ಯೆಗಳು ಕಡಿಮೆಯಾಗುತ್ತವೆ. ನೀವು ಹೊಸ ಉದ್ಯೋಗವನ್ನು ಪಡೆಯುವ ಅವಕಾಶವಿದೆ. ಸರ್ಕಾರಿ ಮತ್ತು ಖಾಸಗಿ ವಲಯ ಎರಡರಲ್ಲೂ ಯಶಸ್ಸು ಪಡೆಯುವ ಅವಕಾಶವಿದೆ. ಇದಕ್ಕಾಗಿ ನೀವು ಸ್ವಲ್ಪ ಪರಿಶ್ರಮವನ್ನೂ ಪಡಬೇಕಾಗುತ್ತದೆ. 'ಪ್ರಯತ್ನ ಪುರುಷಾಧೀನ ಫಲ ದೈವಾಧೀನ' ಎಂಬಂತೆ ದ್ವಿದಳ ಧಾನ್ಯ ವ್ಯಾಪಾರಿಗಳು ತೇಜಿ ಹಾಗೂ ಹೆಚ್ಚಿನ ಧನಲಾಭ.

ಶ್ರೀ ರಾಜರಾಜೇಶ್ವರಿ ದರ್ಶನ, ಶುಭ ಸಂಖ್ಯೆ -3

ಮಿಥುನ (ಕ,ಕಿ,ಕು,ಘ,ಙ,ಛ,ಕೆ,ಕೊ,ಹ)

ಈ ವಾರ ಚಂದ್ರ ಗ್ರಹ ಸಂಚಾರ ಶುಭವಿದೆ. ಏನಾದರೂ ಸಮಸ್ಯೆಗಳು ಕಾಡುತ್ತಿದ್ದಲ್ಲಿ ನಿವಾರಣೆ ಆಗುತ್ತದೆ. ಹಿಂದೆ ಮಾಡಿದ್ದ ಪುಣ್ಯ ಈಗ ಫಲ ನೀಡಲಿದೆ. ಉದ್ಯೋಗ ಸ್ಥಳದಲ್ಲಿ ನಿಮ್ಮ ಬಗ್ಗೆ ಗೌರವ ಹೆಚ್ಚಳವಾಗುತ್ತದೆ. ಸಹೋದ್ಯೋಗಿಗಳು ನಿಮ್ಮ ಪ್ರಗತಿಗೆ ಸಹಕಾರ ನೀಡಲಿದ್ದಾರೆ. ಕೆಲವೊಮ್ಮೆ ನಿಮ್ಮ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಲು ಹೆಣಗಾಡುವಿರಿ. ಆರೋಗ್ಯದ ಕಡೆ ನಿರ್ಲಕ್ಷ್ಯ ಬೇಡ.

ಶ್ರೀ ಲಿಂಗಾಷ್ಟಕ ಪಠಿಸಿ. ಶುಭ ಸಂಖ್ಯೆ -6

ಕಟಕ (ಹೊ,ಹು,ಹೆ,ಡ,ಡಿ,ಡು)

ವಾರದಾರಂಭಕ್ಕೆ ನಿಮ್ಮ ರಾಶಿಗೆ ಬರುವ ನಿಮ್ಮ ರಾಶ್ಯಾಧಿಪತಿ ಚಂದ್ರ ಹಲವು ರೀತಿಯ ಶುಭಫಲಗಳನ್ನು ನೀಡಲಿದ್ದಾನೆ. ವ್ಯಾಪಾರ-ವ್ಯವಹಾರಗಳು ಉನ್ನತ ಮಟ್ಟದಲ್ಲಿ ನಡೆದು ಹೆಚ್ಚಿನ ಲಾಭಾಂಶವನ್ನು ಗಳಿಸುವಿರಿ. ವೃತ್ತಿಪರ ಜವಾಬ್ದಾರಿಗಳನ್ನು ಸರಿ ಸಮಯಕ್ಕೆ ಪೂರೈಸಿಕೊಳ್ಳುವಿರಿ. ಕೆಲವೊಮ್ಮೆ ಅನಗತ್ಯ ಖರ್ಚುಗಳು ಎದುರಾಗುವುದರಿಂದ ಮಾನಸಿಕ ಒತ್ತಡಕ್ಕೆ ಒಳಗಾಗುವಿರಿ.

ಶ್ರೀ ನವದುರ್ಗಾ ಆರಾಧನೆ. ಶುಭ ಸಂಖ್ಯೆ -4

ಸಿಂಹ (ಮ,ಮಿ,ಮು,ಮೊ,ಮೆ,ಟ,ಟಿ,ಟು,ಟೆ)

ಸ್ವಂತ ಆಸ್ತಿ ಖರೀದಿ ಮಾಡಬೇಕು ಅಂದುಕೊಳ್ಳುತ್ತಿದ್ದರೆ ಅನುಕೂಲಕರ ಸನ್ನಿವೇಶ ಬಂದಿದೆ. 'ಕಬ್ಬಿಣ ಕಾದಾಗ ತಟ್ಟಿಕೊಳ್ಳಿ' ಎಂಬ ನಾಣ್ಣುಡಿಯಂತೆ ಕಾರ್ಯಪ್ರವೃತ್ತರಾಗಿ, ಕುಟುಂಬದಲ್ಲಿ ಬರುವ ಸಣ್ಣ ಪುಟ್ಟ ಸಮಸ್ಯೆಗಳನ್ನು ನಿಮ್ಮ ಜಾಣ್ಮೆಯಿಂದ ಬಗೆಹರಿಸಿಕೊಳ್ಳುವಿರಿ. ವಾರಾಂತ್ಯಕ್ಕೆ ಹೆಂಗಳೆಯರ ಸ್ನೇಹ, ಸಹವಾಸಗಳಿಂದ ಮೈ ಪುಳಕಿತಗೊಳ್ಳುವುದು. ಪರೀಕ್ಷೆ, ಸಂದರ್ಶನಗಳಲ್ಲಿ ಸಫಲತೆ ಕಟ್ಟಿಟ್ಟ ಬುತ್ತಿ.

ಶ್ರೀ ಸೂರ್ಯಾಷ್ಟಕ ಪಠಿಸಿ. ಶುಭ ಸಂಖ್ಯೆ -1

ಕನ್ಯಾ (ಟೊ,ಪ,ಪಿ,ಪು,ಷ,ಣ,ಠ,ಪೆ,ಪೊ)

ನಿಮ್ಮ ರಾಶಿಗೆ ಈ ವಾರ ಸರ್ಕಾರಿ ಕೆಲಸದಲ್ಲಿ ತೊಂದರೆಗಳು. ಕೊಟ್ಟ ಹಣ ವಾಪಸ್ಸು ಬರುವುದಿಲ್ಲ. ಗೃಹ ನಿರ್ಮಾಣ ಕಾರ್ಯಗಳು ನಿಧಾನವಾಗಿ ಸಾಗುವುದು. ಮಗನಿಗೆ ನೌಕರಿ ಪ್ರಯತ್ನಗಳು ಮುಂದುವರೆಯಲಿ. ಗುಪ್ತ ಶತ್ರುಗಳ ಆಟ ಸಾಗದು. ಯಾವಾಗಲೂ ಸಕಾರಾತ್ಮಕವಾಗಿ ಚಿಂತಿಸಿ ಫಲ ತಾನೇ ದೊರೆಯುವುದು. ಭೂಮಿಯಿಂದ ಉತ್ತಮ ಬೆಳೆ ಹಾಗೂ ನಿರೀಕ್ಷೆ ಮೀರಿ ಧನಲಾಭವಾಗುವುದು.

ಶ್ರೀ ವಿಷ್ಣು ಸಹಸ್ರನಾಮ ಪಠಿಸಿ. ಶುಭ ಸಂಖ್ಯೆ-7

ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)

ವಾರದಾರಂಭಕ್ಕೆ ಹೊಸ ಕೆಲಸಗಳು ಕೈಗೂಡುವುದು. ಆಸ್ತಿ ಸಂಪಾದನೆಗೆ ಭಾಗ್ಯ ಸ್ಥಾನದಲ್ಲಿ ಭ್ರಮಿಸುತ್ತಿರುವ ಶ್ರೀಗುರುವಿನ ಬೆಂಬಲವಿದೆ. ಶತ್ರುಕಾಟ ನಿವಾರಣೆಯಿಂದ ಮನಸ್ಸಿಗೆ ನೆಮ್ಮದಿ. ಸಾಲಬಾಧೆಗಳು ನಿವಾರಣೆ ಆಗುವುದು. ಮೋಕ್ಷಕಾರಕ ಕೇತುಗ್ರಹ ಸಂಸಾರ ಸಮೇತ ತೀರ್ಥಯಾತ್ರೆಗೆ ಪ್ರೇರೇಪಿಸುವನು. ಮೇಲಧಿಕಾರಿಗಳೊಂದಿಗೆ ವಿನಮ್ರತೆಯಿಂದ ನಡೆದುಕೊಳ್ಳಿ, ಅವರ ಸಹಾಯ ದೊರಕುವುದು.

ಶ್ರೀ ಕಾಲಭೈರವಾಷ್ಟಕ ಪಠಿಸಿ. ಶುಭ ಸಂಖ್ಯೆ-1

ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯು,ಯಿ,ಯ)

ಪಂಚಮ ಶನಿದೇವ, ಅಷ್ಟಮ ಗುರುದೇವ ನಿಮ್ಮನ್ನು ಹಲವು ರೀತಿಯ ಪರೀಕ್ಷೆಗೆ ಗುರಿಪಡಿಸಲಿದ್ದಾರೆ. ತಾಳ್ಮೆಯೇ ನಿಮ್ಮಯ ದಿವ್ಯ ಮಂತ್ರವಾಗಿರಲಿ. ಗುಪ್ತ ಜನರಿಂದ ನಿಮ್ಮ ರಹಸ್ಯ ಬಯಲಾಗುವುದು. ನಿಮ್ಮ ಜೀವನಮಟ್ಟ ಹೆಚ್ಚಿಸಿಕೊಳ್ಳಲು ಪ್ರಯತ್ನಿಸುವಿರಿ. ವಾರದ ಉತ್ತರಾರ್ಧಕ್ಕೆ ಹಣಕಾಸಿನ ಪರಿಸ್ಥಿತಿ ಸುಧಾರಿಸಲಿದೆ. ಧಾರ್ಮಿಕ ಕೆಲಸಗಳಲ್ಲಿ ಆಸಕ್ತಿ ತೋರುವಿರಿ. ಪ್ರಯಾಣ ಸಮಯದಲ್ಲಿ ಅತ್ಯಂತ ಜಾಗರೂಕತೆಯಿಂದ ಇರಿ.

ಶ್ರೀ ನರಸಿಂಹ ಕರಾವಲಂಬನ ಸ್ತೋತ್ರ ಪಠಿಸಿ. ಶುಭ ಸಂಖ್ಯೆ -5

ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)

ಈ ವಾರ ಇಷ್ಟ ಸಿದ್ಧಿಯ ಕಾಲ ಒದಗಿ ಬಂದಿದೆ. ಎನ್‌ಕ್ಯಾಷ್ ಮಾಡಿಕೊಳ್ಳಲು ಹಿಂದೆ ಸರಿಯದಿರಿ. ವಿವಾಹ ಯೋಗ್ಯರಿಗೆ ಬಾಳ ಸಂಗಾತಿ ದೊರೆಯುವ ಸಂಭವವಿದೆ. ನೂತನ ವ್ಯಾಪಾರ, ವ್ಯವಹಾರ ಪ್ರಾರಂಭ ಮಾಡಬಹುದು. ಈ ನಡುವೆ ಗುರು ಜನರ ಭೇಟಿ ಆರ್ಶಿವಾದಗಳು ನಿಮ್ಮ ಸಮಸ್ಯೆಗಳನ್ನು ಹಗುರಗೊಳಿಸಲಿದೆ. ಆರೋಗ್ಯ ಮರುಕಳಿಸಿ ಗುಣಮುಖರಾಗುವಿರಿ. ಧರ್ಮಕ್ಷೇತ್ರಕ್ಕೆ ಭೇಟಿ ನೀಡುವುದರಿಂದ ಒಳಿತು.

ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ -9

ಮಕರ (ಬೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ)

ವಾರದ ಆದಿ ಭಾಗ್ಯಕ್ಕೆ ಶುಭಚಂದ್ರನ ಫಲವಾಗಿ ಬಂಧು-ಮಿತ್ರರ ಸಹಾಯ ದೊರೆತು ಮನಸ್ಸಿಗೆ ಆವರಿಸಿದ್ದ ಮಾನಸಿಕ ಕಳವಳ ನಿವಾರಣೆ ಆಗುವುದು. ಧಾರ್ಮಿಕ ಆಚರಣೆಯಲ್ಲಿ ಭಾಗವಹಿಸಿ ಧನ್ಯತಾಭಾವ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಆಸಕ್ತಿ ಹೆಚ್ಚಾಗುವುದು. ವಾರದ ಉತ್ತರಾರ್ಧಕ್ಕೆ ಸೌಖ್ಯ ಹೀನತೆ, ಶತ್ರುಗಳಿಂದ ಮೋಸ ಹೋಗುವ ಸಾಧ್ಯತೆ ಇರುತ್ತದೆ.

ಶ್ರೀ ಶನಿ ಚಾಲೀಸ ಪಠಿಸಿ. ಶುಭ ಸಂಖ್ಯೆ-4

ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)

ಗುರು ಗ್ರಹದ ಶುಭ ಸಂಚಾರದ ಪರಿಣಾಮ ಶನಿಗ್ರಹದ ಅಶುಭ ಪರಿಣಾಮಗಳಿಗೆ ಬ್ರೇಕ್. ಉದ್ಯೋಗ, ವ್ಯವಹಾರಗಳು ಲಾಭದಾಯಕವಾಗಿ ನಡೆಯುವುದು. ಸತಿ-ಪತಿಯರಲ್ಲಿ ಉಂಟಾಗಿದ್ದ ವಿರಸ ನಿವಾರಣೆ ಆಗುವುದು. ವಾಹನ ಖರೀದಿಯ ಯೋಗವಿದೆ. ಆದರೆ ಖಯಾಲಿನ ಪ್ರವಾಸಗಳನ್ನು ಮಾಡಬೇಡಿ ಸಂಭಾವ್ಯ ಅಪಘಾತಗಳಿಂದ ಬಚಾವಾಗಿ, ಕೂಡಿಟ್ಟ ಹಣ ಬೇಡದ ಬಾಬ್ತುಗಳಿಗೆ ಖರ್ಚಾಗುವುದು.

ಶ್ರೀ ಸಾಯಿಬಾಬಾ ಪೂಜೆ. ಶುಭ ಸಂಖ್ಯೆ -6

ಮೀನ (ದಿ,ದು,ಖ,ಝ,ಥ,ತೆ,ದೊ,ಚ,ಚಿ)

ವಾರದ ಆರಂಭಕ್ಕೆ ನೀವೊಂದು ಬಗೆದರೆ, ದೈವವೊಂದು ಬಗೆದಂತೆ ಭಾಸವಾಗುವುದು. ಪ್ರಯತ್ನ ಪೂರ್ವಕವಾಗಿ ಮಾಡುವ ಕೆಲಸಗಳಲ್ಲಿ ಹಿನ್ನಡೆ ಉಂಟಾಗುವುದು. ನಿಕಟವರ್ತಿಗಳೇ ನಿಮ್ಮನ್ನು ಅನುಮಾನದಿಂದ ನೋಡುವರು. ಹಣದ ಕೊರತೆಯಿಂದ ಸಾಲ ಮಾಡಬೇಕಾದ ಪರಿಸ್ಥಿತಿ ಉಂಟಾಗುವುದು. ವಾರಾಂತ್ಯಕ್ಕೆ ಹರುಷದ ಸುದ್ದಿಯೊಂದು ಬಂದು ಜೀವನದಲ್ಲಿ " ಬೆಳ್ಳಿ ಚುಕ್ಕಿ" ಮೂಡಿದಂತೆ ಆಗುವುದು.

ಶ್ರೀ ರಾಘವೇಂದ್ರ ಉಪಾಸನೆ, ಶುಭ ಸಂಖ್ಯೆ -2

ಮಕ್ಕಳ ಚಿತ್ರಕಥೆ: 'ಕೋತಿ ಮತ್ತು ಮೊಸಳೆ' (ಕಳೆದ ಸಂಚಿಕೆಯಿಂದ)

■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




'ಕೋತಿಯ ಹೃದಯ ಎಂದಿಗೂ ಸಿಗುವುದೇ ಇಲ್ಲ, ಕೋತಿಗಳು ಬಹಳ ಚಾಣಾಕ್ಷ ಬುದ್ದಿಯುಳ್ಳವು. ಈ ಕೋತಿಯು ನಿನ್ನ ಬೆನ್ನಿನ ಮೇಲೆ ಕುಳಿತು ಸವಾರಿ ಮಾಡುತ್ತದೆ. ನೀನು ಬಹಳ ಸುಲಭವಾಗಿ ಅದನ್ನು ಕೊಂದು ಅದರ ಹೃದಯ ತಿನ್ನಬಹುದಲ್ಲವೇ...?' ಎಂದು ಸ್ನೇಹಿತ ಮೊಸಳೆ ಕೇಳಿತು.




'ಆ ಕೋತಿಯು ನನ್ನ ಒಳ್ಳೆಯ ಗೆಳೆಯನಾಗಿರುವುದರಿಂದ ಈ ತರಹ ಮಾಡುವುದು ಸಾಧ್ಯವೇ ಇಲ್ಲ..!' ಎಂದಿತು ಮೊಸಳೆ. 'ತಿನ್ನುವ ಅವಕಾಶ ಬಂದಾಗ ಒಳ್ಳೆಯ ಗೆಳೆಯ ಎಂಬ ವಿಷಯ ಬರುವುದೇ ಇಲ್ಲ.... ಹಾಗಾಗಿ ಒಂದು ಬಾರಿ ಆಲೋಚಿಸು...!' ಎಂದು ಸ್ನೇಹಿತ ಮೊಸಳೆಯು ಹೇಳಿತು.




ಸ್ವಲ್ಪ ಸಮಯದ ನಂತರ ಇನ್ನೂ ಮೂವರು ಗೆಳೆಯರು ಬಂದು ಮೊಸಳೆಗೆ ಹಾಗೆಯೇ ಹೇಳಿದವು. ತುಸು ಹೊತ್ತು ಆಲೋಚಿಸಿ, 'ನಿಜವಾಗಿಯೂ ಕೋತಿಯ ಹೃದಯ ಅಷ್ಟೊಂದು ರುಚಿಕರವಾಗಿರುತ್ತದೆಯೇ...? ನಾನು ಏಕೆ ಆ ಕೋತಿ ಗೆಳೆಯನ ಹೃದಯ ಸವಿಯಬಾರದು...?' ಎಂದು ಬಯಸಿ, ಮಾರನೇ ದಿನವೇ ಕೋತಿಯನ್ನು ಭೇಟಿ ಮಾಡಲು ನಿರ್ಧರಿಸಿತು.



ಕೋತಿಯನ್ನು ಭೇಟಿ ಮಾಡಿದ ಮೊಸಳೆಯು 'ನಾನು-ನೀನು ಕೊಳದ ವಿಹಾರ ಮಾಡಿ ಬಹಳ ದಿನವಾಯಿತು, ಬಾ... ನನ್ನ ಬೆನ್ನ ಮೇಲೆ ಕುಳಿತುಕೋ... ಇಂದು ದೀರ್ಘ ಪ್ರಯಾಣ ಮಾಡಿ ಬರೋಣಾ..!' ಎಂದಿತು. ಇದಕ್ಕೊಪ್ಪಿದ ಕೋತಿಯು ಸಂತೋಷದಿಂದ ನೆಗೆಯುತ್ತಾ ಬಂದು ಮೊಸಳೆಯ ಬೆನ್ನಿನ ಕುಳಿತುಕೊಂಡಿತು.



ಮೊಸಳೆಯು ಸ್ವಲ್ಪ ಸಮಯದ ನಂತರ ಕೊಳದ ಮಧ್ಯಭಾಗ ತಲುಪಿ ಅಲ್ಲಿಯೇ ನಿಂತುಕೊಂಡಿತು. ಕೋತಿಯನ್ನು ಕೊಲ್ಲಲು ಮನಸ್ಸಾಗದೇ 'ನಾನೇನು ನನ್ನ ಗೆಳೆಯನಿಗೆ ಮೋಸ ಮಾಡುತ್ತಿಲ್ಲ ತಾನೇ... ಆದರೆ ನನಗೆ ಅದರ ಹೃದಯದ ರುಚಿಯನ್ನಂತು ನೋಡಬೇಕಲ್ಲವೇ... ಈಗ ನಾನೇನು ಮಾಡಲಿ...?' ಎಂದು ಆಲೋಚಿಸುತ್ತಿತ್ತು.



ಗಂಭೀರವಾಗಿದ್ದ ಮೊಸಳೆಯನ್ನು ಕಂಡ ಕೋತಿಯು, 'ಏಕೆ ಮೌನವಾಗಿರುವೆ...? ಏನಾದರು ಸಮಸ್ಯೆಗಳಿವೆಯೇ...? ನನಗೆ ಹೇಳು...!' ಎಂದು ಪ್ರೀತಿಯಿಂದಲೇ ಕೇಳಿತು. ಆಗ ಮೊಸಳೆಯು 'ಕ್ಷಮಿಸು ಗೆಳೆಯಾ, ಇಂದು ನಾನು ನಿನ್ನನ್ನು ಕೊಂದು, ನಿನ್ನ ಹೃದಯ ತಿನ್ನಬೇಕಿದೆ... ಇತ್ತೀಚೆಗಷ್ಟೇ ಕೋತಿಗಳ ಹೃದಯ ಬಹಳ ರುಚಿಕರ ಎಂದು ಕೇಳಲ್ಪಟ್ಟೆ' ಎಂದಿತು.

(ಮುಂದುವರೆಯುವುದು)

ಮೈಸೂರು ಮಿತ್ರ

ಪರಿಸರಕ್ಕೆ ಮಾರಕವಾದ ಪ್ಲಾಸ್ಟಿಕ್ ಬಳಕೆ ಬಿಟ್ಟು ಪರಿಸರ ಸಮತೋಲನ ಕಾಪಾಡೋಣ

ಕಸದ ಬುಟ್ಟಿ ಅಳವಡಿಕೆ ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಸುರೇಶಾಚಾರ್ ಮನವಿ

ತಿ.ನರಸೀಪುರ, ಜ.31– ಪ್ಲಾಸ್ಟಿಕ್ ಬಳಕೆಯಿಂದ ಪರಿಸರ ಮಾರಕವಾಗುತ್ತಿದೆ. ಆದ್ದರಿಂದ ಪ್ಲಾಸ್ಟಿಕ್ ಬಳಕೆಯನ್ನು ನಾವು ನಿಲ್ಲಿಸುವುದರೊಂದಿಗೆ ಪರಿಸರದ ಸಮತೋಲನವನ್ನು ಕಾಪಾಡಲು ಮುಂದಾಗಬೇಕು ಎಂದು ತಹಸೀಲ್ದಾರ್ ಟಿ.ಜೆ. ಸುರೇಶಾಚಾರ್ ಮನವಿ ಮಾಡಿದ್ದಾರೆ.

ಪಟ್ಟಣದ ಶ್ರೀ ಗುಂಜಾ ನರಸಿಂಹಸ್ವಾಮಿ ದೇವಸ್ಥಾನದ ಮುಂಭಾಗ ನೂತನವಾಗಿ ಅಸ್ತಿತ್ವಕ್ಕೆ ತರಲಾಗಿರುವ ಶ್ರೀ ವಜ್ರಮಲೆ ಮಹದೇಶ್ವರ ಸೇವಾ ಬಳಗದ ನಾಮಫಲಕ ಅನಾವರಣ ಹಾಗೂ ಸೇವಾ ಬಳಗದ ವತಿಯಿಂದ ಕಸದ ಬುಟ್ಟಿ ಅಳವಡಿಕೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ನಮ್ಮ ದಿನ ನಿತ್ಯದ ಬಳಕೆಯಲ್ಲಿ ಪ್ಲಾಸ್ಟಿಕ್ ಬಳಕೆ ದಿನೇ ದಿನೆ ಹೆಚ್ಚಾಗುತ್ತಿದೆ. ಇದರಿಂದ ನಾವು ಪರಿಸರಕ್ಕೆ ಹಾನಿ ಮಾಡುತ್ತಿದ್ದೇವೆ ಎಂದು ಗೊತ್ತಿದ್ದರೂ ಸಹ ಪ್ಲಾಸ್ಟಿಕ್ ಕವರ್, ಲೋಟ ಇತ್ಯಾದಿಗಳನ್ನು ಬಳಕೆ ಮಾಡುತ್ತಿದ್ದೇವೆ. ಆದರೆ ನಾವು ಬಳಸುವ ಪ್ಲಾಸ್ಟಿಕ್ ಮಣ್ಣಿನಲ್ಲಿ ಕರಗದೇ ಇರುವುದರಿಂದ ಅದು ಹಾಗೆಯೇ ಇರುವ ಕಾರಣ ಪರಿಸರಕ್ಕೆ ಮಾರಕವಾಗಿ ಪರಿಣಮಿಸುತ್ತದೆ ಎಂದರು.



ಕಬ್ಬಿಣದ ಕಸದ ಬುಟ್ಟಿಯನ್ನು ಅಳವಡಿಸುವ ಕಾರ್ಯಕ್ಕೆ ತಹಸೀಲ್ದಾರ್ ಟಿ.ಜೆ.ಸುರೇಶಾಚಾರ್, ಸರ್ಕಲ್ ಇನ್ಸ್‌ಪೆಕ್ಟರ್ ಧನಂಜಯ್ ಚಾಲನೆ ನೀಡಿದರು.

ಪೊಲೀಸ್ ವೃತ್ತ ನಿರೀಕ್ಷಕ ಧನಂಜಯ್ ಮಾತನಾಡಿ ಸಮಾಜ ಸೇವೆ ಎಂಬುದು ಬೇರೆ ಬೇರೆ ಅರ್ಥಗಳನ್ನು ಪಡೆದುಕೊಂಡಿರುವ ಇಂದಿನ ದಿನಮಾನಗಳಲ್ಲಿ ಸೇವಾ ಬಳಗದ ಸದಸ್ಯರ ಸೇವೆ ಶ್ಲಾಘನೀಯವಾಗಿದೆ. ಸಮಾಜ ಸೇವೆ ಎಂಬ ಹಣೆ ಪಟ್ಟಿ ಹಾಕಿಕೊಂಡ ಕೆಲವರು ಡಿಜೆ ಹಾಕಿ ಕುಣಿಯೋದು, ಸೇರಿದಂತೆ ಮತ್ತಿತರ ಕಾನೂನು ಬಾಹಿರ ಚಟುವಟಿಕೆಗಳಲ್ಲಿ ತೊಡಗಿಕೊಳ್ಳೋದಕ್ಕೆ ತಮ್ಮನ್ನು ಸೀಮಿತಗೊಳಿಸಿಕೊಂಡಿದ್ದಾರೆ. ಇಂತಹವರ ನಡುವೆ ಪರಿಸರದ ಬಗ್ಗೆ ಜಾಗೃತಿ ಮೂಡಿಸಲು ಹೆಣ ಗುತ್ತಿರುವ ಸೇವಾ ಬಳಗದ ಸದಸ್ಯರ ಕಾರ್ಯ ನಿಜಕ್ಕೂ ಅಭಿನಂದನಾರ್ಹವಾಗಿದೆ ಎಂದರು.

ಶ್ರೀ ವಜ್ರಮಲೆ ಮಹದೇಶ್ವರ ಸೇವಾ ಬಳಗದ ಮುಖ್ಯಸ್ಥ ಟಿ.ಎನ್.ಮಂಜುನಾಥ್ ಮಾತನಾಡಿ ಮಲೆ ಮಹದೇಶ್ವರ ಬೆಟ್ಟಕ್ಕೆ ತೆರಳುವ ರಸ್ತೆಯಲ್ಲಿ ಸಹಸ್ರಾರು ಪ್ಲಾಸ್ಟಿಕ್ ಬಾಟಲ್‌ಗಳು ಬಿದ್ದಿರುವುದನ್ನು ಗಮನಿಸಿ, ಪರಿಸರದ ಬಗ್ಗೆ ಕಾಳಜಿ ಮೂಡಿಸುವ ನಿಟ್ಟಿನಲ್ಲಿ ಪಣ ತೊಟ್ಟು ಹನೂರಿನಿಂದ ತಾಳ ಬೆಟ್ಟದವರೆಗೆ ಪ್ರತಿ ಒಂದು ಕಿ.ಮೀ. ಅಂತರದಲ್ಲಿ ಡಸ್ಟ್ ಬಿನ್ ಅಳವಡಿಸಲು ನಿರ್ಧರಿಸಿ ಇಂದು ಪಟ್ಟಣದ ಶ್ರೀ ಗುಂಜಾ ನರಸಿಂಹ ಸ್ವಾಮಿ, ಅಗಸ್ತ್ಯೇಶ್ವರ ಹಾಗೂ ಗಣಪತಿ ದೇವಸ್ಥಾನದ ಮುಂದೆ ಪ್ರಾಯೋಗಿಕವಾಗಿ ಕಸದ ಬುಟ್ಟಿ ಅಳವಡಿಸಿ ಚಾಲನೆ ನೀಡಿದ್ದೇವೆ. ಮುಂದಿನ ದಿನಗಳಲ್ಲಿ ಪ್ರತಿಯೊಂದು ಬೀದಿಗಳಿಗೂ ಕಸದ ಬುಟ್ಟಿ ಅಳವಡಿಸಲಾಗುತ್ತದೆ ಎಂದರು.

ಕಾಲ್ನಡಿಗೆ ಭಕ್ತಾಧಿಗಳಿಗೆ ಅನ್ನ ದಾಸೋಹ: ಮಹದೇಶ್ವರ ಬೆಟ್ಟಕ್ಕೆ ಪಾದಯಾತ್ರೆ ಮೂಲಕ ನಡೆದು ಬರುವ ಭಕ್ತಾಧಿಗಳಿಗೆ ಫೆ.13 ಹಾಗೂ 14 ರಂದು ಕೌದಳ್ಳಿಯ ಪೆಟ್ರೋಲ್ ಬಂಕ್ ಪಕ್ಕದಲ್ಲಿ ಸೇವಾ ಬಳಗದ ವತಿಯಿಂದ ಅನ್ನ ಸಂತರ್ಪಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು 15 ಸಾವಿರ ಭಕ್ತಾಧಿಗಳಿಗೆ ಪ್ರಸಾದ ವ್ಯವಸ್ಥೆಗೆ ಸಿದ್ದತೆ ಮಾಡಲಾಗುತ್ತಿದೆ. ಎಲ್ಲ ಭಕ್ತಾಧಿಗಳು ಅನ್ನ ಸಂತರ್ಪಣೆಯಲ್ಲಿ ಭಾಗವಹಿಸಿ ಪ್ರಸಾದ ಸ್ವೀಕರಿಸಬೇಕೆಂದು ಅವರು ಮನವಿ ಮಾಡಿದರು.

ಈ ವೇಳೆ ನಂಜುಪ್ರಸಾದ್, ಮೂಗೂರು ಎನ್.ಶೇಖರ್, ಶ್ರೀಕಂಠಪ್ರಸಾದ್, ಗಿರೀಶ್, ಮಹದೇವಸ್ವಾಮಿ, ಚಂದ್ರು, ರಾಜಪ್ಪ, ಎಂ. ಮಂಜುನಾಥ್, ಸುರೇಶ್ ಕುಮಾರ್, ರವಿ, ಶಿವನಂಜು, ಮೋಹನ್, ಆಲಗೂಡು ಕೃಷ್ಣ, ಹರೀಶ್ ಸದಾಶಿವ, ಶ್ರೀಕಂಠ, ಆರ್.ಎನ್. ಸುರೇಶ್ ಕುಮಾರ್, ಆರ್‌ಐ ಮಹೇಂದ್ರ, ಪುರಸಭೆ ಆರೋಗ್ಯಾಧಿಕಾರಿ ಚಂಪಾಶ್ರೀ ಇದ್ದರು.

ಜ್ಞಾನ ಆಚರಣೆಗೆ ಬಂದಾಗ ಮಾತ್ರ ವ್ಯಕ್ತಿ ವಿಕಾಸ

ವಿಸ್ಡಂ ಟೆಕ್ನೋ ಶಾಲೆಯ ನವೀಕೃತ ಕಟ್ಟಡ ಉದ್ಘಾಟನೆ



ನವೀಕೃತ ಕಟ್ಟಡವನ್ನು ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸಿದರು.

ನಂಜನಗೂಡು: ಪುಸ್ತಕದಿಂದ ಓದಿದ ಜ್ಞಾನವನ್ನು ಜೀವನದಲ್ಲಿ ಆಚರಣೆಗೆ ತಂದಾಗ ಮಾತ್ರ ವ್ಯಕ್ತಿ ವಿಕಾಸಗೊಳ್ಳಲು ಸಾಧ್ಯ ಎಂದು ಸುತ್ತೂರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಹೇಳಿದರು.

ನಗರದ ದೇವೀರಮ್ಮನ ಹಳ್ಳಿಯಲ್ಲಿರುವ ವಿಸ್ಡಂ ಟೆಕ್ನೋ ಶಾಲೆಯ ನವೀಕೃತ ಕಟ್ಟಡವನ್ನು ಶನಿವಾರ ಉದ್ಘಾಟಿಸಿ ಮಾತನಾಡಿದರು.

ಗ್ರಂಥಾಲಯಕ್ಕಿಂತ ಮಿಗಿಲಾದ ಜ್ಞಾನ ಭಂಡಾರ ಮತ್ತೊಂದಿಲ್ಲ. ಆದರೆ ನಾವು ಓದಿದ ಪುಸ್ತಕಗಳಲ್ಲಿ ಜ್ಞಾನವನ್ನು ನಮ್ಮ ಬದುಕಿನಲ್ಲಿ ಅನುಷ್ಠಾನಕ್ಕೆ ತಂದು ಉತ್ತಮ ಜೀವನ ರೂಪಿಸಿಕೊಳ್ಳಬೇಕು. ಕೇವಲ ಜ್ಞಾನವಂತರಾಗಿ ಉತ್ತಮ ಜೀವನ ರೂಪಿಸಿಕೊಳ್ಳದಿದ್ದರೆ ಆ ಜ್ಞಾನ ಸದುಪಯೋಗ ಆಗುವುದಿಲ್ಲ. ಸಮಾಜದ ಅರಿವು, ಸಂಸ್ಕಾರ, ಸಾಮಾನ್ಯ ತಿಳುವಳಿಕೆ ಸ್ವಗ್ರಹಿಕೆಯಿಂದಲೇ ಬರಬೇಕು. ಆಗಮಾತ್ರ ವ್ಯಕ್ತಿ ಪರಿಪೂರ್ಣರಾಗಿ ರೂಪುಗೊಳ್ಳಲು ಸಾಧ್ಯ. ಅಂತಹ ಶಿಕ್ಷಣ ಇಂದಿನ ಮಕ್ಕಳಿಗೆ ಅಗತ್ಯವಾಗಿದೆ ಎಂದರು.

ಮಾಜಿ ಸಚಿವ ಹಾಗೂ ಶಾಸಕ ಎಸ್. ಸುರೇಶ್‌ಕುಮಾರ್ ಮಾತನಾಡಿ, ವಿವೇಕವಿಲ್ಲದ ಜೀವನ ಅತ್ಯಂತ ಅಪಾಯಕಾರಿ. ಮಕ್ಕಳಿಗೆ ಪಠ್ಯಕ್ಕಿಂತ ಸಂಸ್ಕಾರ, ವಿವೇಕ, ಸಹನೆ, ಸಂಯಮದಂತಹ ಮೌಲ್ಯಗಳನ್ನು ಕಲಿಸುವ ನೈತಿಕ ಶಿಕ್ಷಣ ಪ್ರಸ್ತುತ ದಿನಮಾನದ ಅಗತ್ಯವಾಗಿದೆ. ಆ ನಿಟ್ಟಿನಲ್ಲಿ ವಿಸ್ಡಂ ಶಾಲೆ ಮಾದರಿ ಕಲಿಕಾ ಕ್ರಮ ಅಳವಡಿಸಿಕೊಂಡಿರುವುದು ಸ್ವಾಗತಾರ್ಹ. ಮಕ್ಕಳ ರಕ್ಷಣೆ ಹಾಗೂ ಮಾನವ ಹಕ್ಕುಗಳ ಕಾಯ್ದೆಗಳ ನಡುವೆ ಮಕ್ಕಳಿಗೆ ನೈತಿಕ ಶಿಕ್ಷಣ ನೀಡುವುದು ಸುಲಭದ ಮಾತಲ್ಲ. ಮಕ್ಕಳ ಆರೋಗ್ಯದ ದೃಷ್ಟಿಯಿಂದ ಎರಡು ತಾಸಿಗೊಮ್ಮೆ ನೀರು ಕುಡಿಸಲು ಗಂಟೆ ಹೊಡೆಯುವ ಪದ್ಧತಿ ಪ್ರತಿ ಶಾಲೆಯಲ್ಲೂ ಜಾರಿಯಾಗಬೇಕು ಎಂದರು.

ಶಾಸಕ ದರ್ಶನ್ ಧ್ರುವನಾರಾಯಣ ಮಾತನಾಡಿ, ಮಕ್ಕಳು ಆನ್‌ಲೈನ್ ಹಾಗೂ ಮೊಬೈಲ್ ದಾಸರಾಗಿ ಮಕ್ಕಳಲ್ಲಿ ಕೈಬಲ ಹಾಗೂ ಕಣ್ಣಿನ ತೀಕ್ಷ್ಣತೆ ಕುಗ್ಗುತ್ತಿರುವುದರಿಂದ ಉತ್ತಮ ಕ್ರೀಡಾಪಟುಗಳಾಗಲು ಸಾಧ್ಯವಾಗುತ್ತಿಲ್ಲ ಎಂಬ ಆತಂಕಕಾರಿ ಅಂಶ ಬೆಳಕಿಗೆ ಬಂದಿದೆ. ಹೀಗಾಗಿ ಮಕ್ಕಳಲ್ಲಿ ದೈಹಿಕ ಹಾಗೂ ಮನೋಬಲ ಹೆಚ್ಚಿಸಲು ತಾಲೂಕಿನ ಪ್ರತಿ ಶಾಲೆಯಲ್ಲೂ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಶಿಕ್ಷಣ ಹಾಗೂ ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಈ ನಿಟ್ಟಿನಲ್ಲಿ ಅಧಿವೇಶನದಲ್ಲೂ ಈ ವಿಷಯವನ್ನು ಪ್ರಸ್ತಾಪಿಸಿ ಸರ್ಕಾರದ ಗಮನ ಸೆಳೆಯುವುದಾಗಿ ತಿಳಿಸಿದರು.

ವಿಸ್ಡಂ ಟೆಕ್ನೋ ಶಾಲೆಯ ಕಾರ್ಯದರ್ಶಿ ಮಂಜುನಾಥ್ ಸೋಮಶೇಖರ್, ಶಾಸಕ ಶ್ರೀವತ್ಸ, ಮಾಜಿ ಶಾಸಕರಾದ ಬಿ.ಹರ್ಷವರ್ಧನ್, ಕಳಲೆ ಕೇಶವಮೂರ್ತಿ, ವಿಸ್ಡಂ ಶಾಲೆಯ ಅಧ್ಯಕ್ಷೆ ಮಂಗಳ ಸೋಮಶೇಖರ್, ಮಂಜುನಾಥ್ ಸೋಮಶೇಖರ್, ಬಿಜೆಪಿ ಜಿಲ್ಲಾಧ್ಯಕ್ಷ ಕುಂಬ್ರಹಳ್ಳಿ ಸುಬ್ಬಣ್ಣ, ರಾಜ್ಯ ಕಾಂಪೋಸ್ಟ್ ಅಭಿವೃದ್ಧಿ ನಿಗಮ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ, ಅಖಿಲ ಭಾರತ ವೀರಶೈವ ಮಹಾಸಭಾ ತಾಲೂಕು ಅಧ್ಯಕ್ಷ ಎಸ್‌ಎಂ. ಕೆಂಪಣ್ಣ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಎನ್.ವಿ.ವಿನಯ ಕುಮಾರ್, ಜಿಪಂ ಮಾಜಿ ಸದಸ್ಯರಾದ ಡಾ.ಶಿವರಾಮು ಉಪಸ್ಥಿತರಿದ್ದರು.

ಚಿರತೆ ದಾಳಿಯಿಂದ ರೈತ ಸೇರಿ ಮೂವರಿಗೆ ಗಾಯ

ನಂಜನಗೂಡು ಬಳಿ ಘಟನೆ, ಆತಂಕಗೊಂಡಿರುವ ಗ್ರಾಮಸ್ಥರು



ತಗಡೂರು: ಚಿರತೆಯೊಂದು ದಾಳಿ ನಡೆಸಿದ ಪರಿಣಾಮ ರೈತರೊಬ್ಬರು ಸೇರಿದಂತೆ ಮೂವರು ಗಾಯಗೊಂಡಿರುವ ಘಟನೆ, ನಂ.ಗೂಡು ತಾಲೂಕಿನ ಕೋಣನೂರು ಬಳಿ ಸಂಭವಿಸಿದೆ. ತಾಲೂಕು ಚುಂಚನಹಳ್ಳಿ ಗ್ರಾಮದ ರೈತ ನಂಜುಂಡಸ್ವಾಮಿ (42) ಎಂಬುವರೇ ಗಾಯಗೊಂಡವರಾಗಿದ್ದು, ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ನಂಜುಂಡಸ್ವಾಮಿ ಅವರು ಶನಿವಾರ ಚುಂಚನಹಳ್ಳಿಯಿಂದ ಕೋಣನೂರು ಹತ್ತಿರದ ಜಮೀನಿಗೆ ಮೋಟಾರ್ ಬೈಕ್‌ನಲ್ಲಿ ಮನೆಯವರೊಂದಿಗೆ ಹೋಗುತ್ತಿದ್ದಾಗ ಕೋಣನೂರು ಬೆಟ್ಟದ ಕಡೆಯಿಂದ ಬಂದ ಚಿರತೆ ದಿಢೀರ್ ದಾಳಿ ನಡೆಸಿದೆ. ಇದರಿಂದ ಗಾಬರಿಗೊಂಡು ಗಾಡಿಯಿಂದ ಬಿದ್ದು ಬಲದ ಮೊಣ ಕೈ ಮುರಿದಿದ್ದು ಚಿರತೆ ಪರಚಿದ ಗಾಯಗಳಾಗಿವೆ. ಅವರು ಮೈಸೂರು ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಜೊತೆಯಲ್ಲಿದ್ದ ಅನಿತಾ(28), ಒಂದೂವರೆ ವರ್ಷದ ಸಮರ್ಥ ಮಗುವಿಗೂ ಗಾಡಿಯಿಂದ ಬಿದ್ದು ಸಣ್ಣ ಪುಟ್ಟ ಗಾಯಗಳಾಗಿವೆ. ಚಿರತೆಯಿಂದ ಅಕ್ಕ ಪಕ್ಕದ ಜನ ಭಯ ಬೀತಾರಾಗಿದ್ದಾರೆ. ಈಗಾಗಲೇ ಕಾರ್ಯ, ತಗಡೂರು, ಕಕ್ಕರಟ್ಟಿ, ಚುಂಚನಹಳ್ಳಿ, ಕೋಣನೂರು, ದೇವನೂರು, ಅ ಳಗಂಚಿ, ಅಳಗಂಚಿಪುರ, ಗ್ರಾಮಗಳ ಜನರು ಭಯಭೀತರಾಗಿ ಜೀವನ ಉಪಯೋಗಕ್ಕಾಗಿ ಸಾಕಿದ್ದ ಆಡು, ಕುರಿ ಮತ್ತು ಹಸುಗಳನ್ನು ಮಾರಾಟ ಮಾಡುತ್ತಿದ್ದಾರೆ. ಈ ಗ್ರಾಮಗಳ ಜನರು ನಿರ್ಭೀತಿಯಿಂದ ಓಡಾಡಬೇಕಾದರೆ ಸಂಬಂಧಪಟ್ಟ ಅರಣ್ಯಾಧಿಕಾರಿಗಳು ಕಾಡು ಪ್ರಾಣಿಗಳ ಹಾವಳಿಯನ್ನು ತಪ್ಪಿಸಬೇಕು ಎಂದು ಆಗ್ರಹಿಸಿದ್ದಾರೆ.

ದಾಳಿ ನಿರಾಕರಣೆ: ಚಿರತೆ ದಾಳಿ ವಿಚಾರ ಸಾಮಾಜಿಕ ಜಾಲತಾಣದಿಂದ ತಿಳಿಯಿತು. ರೈತ ನಂಜಂಡಸ್ವಾಮಿ ಬೈಕಿನಿಂದ ಬಿದ್ದು ಗಾಯಗೊಂಡಿರುವುದು ನಿಜ. ಆದರೆ ಚಿರತೆ ದಾಳಿಯಿಂದಲ್ಲ. ವಾಹನದಲ್ಲಿ ತೆರಳುವವರ ಮೇಲೆ ಚಿರತೆ ದಾಳಿ ಮಾಡುವುದಿಲ್ಲ ಎಂದು ವಲಯ ಅರಣ್ಯಾಧಿಕಾರಿ ತಿಳಿಸಿದ್ದಾರೆ.

ಬಾವುಟದ ವಿಚಾರಕ್ಕೆ ಹಗಿನವಾಳು ಜಾತ್ರೆ ಸ್ಥಗಿತ: ಬೀದಿಯಲ್ಲಿ ನಿಂತಿರುವ ರಥ

ನಂಜನಗೂಡು: ತಾಲೂಕಿನ ಹಗಿನವಾಳು ಗ್ರಾಮದ ದೇವಾಲಯದ ಬಳಿ ಫೋಕಸ್ ಲೈಟ್ ಮೇಲೆ ಬಸವೇಶ್ವರರ ಬಾವುಟ ಅಳವಡಿಸಿದ ವಿಚಾರಕ್ಕೆ ಗ್ರಾಮದ ಎರಡು ಸಮುದಾಯಗಳ ನಡುವೆ ಉಂಟಾದ ವಿವಾದ ದಿಂದಾಗಿ ಗ್ರಾಮದೇವತೆ ಪಟ್ಟದಮ್ಮ ರಾಣಿ ಜಾತ್ರೆ ಸ್ಥಗಿತ ಗೊಂಡು ರಥವು ಬೀದಿಯಲ್ಲಿ ನಿಂತಿರುವ ಘಟನೆ ಜರುಗಿದೆ.

ತಾಲೂಕಿನ ಹಗಿನವಾಳು ಗ್ರಾಮದಲ್ಲಿ ಶುಕ್ರವಾರ ರಾತ್ರಿ ಗ್ರಾಮದೇವತೆ ಪಟ್ಟದಮ್ಮ ರಾಣಿ ದೇವತೆ ಜಾತ್ರೆಯನ್ನು ನಡೆಸಲು ಸರ್ವ ಸಿದ್ದತೆಗಳು ನಡೆಸಲಾಗಿತ್ತು, ದೇವಾಲಯದ ಪಕ್ಕದಲ್ಲಿರುವ ಫೋಕಸ್ ಲೈಟ್ ಮೇಲೆ ಅಳವಡಿಸಲಾಗಿರುವ ಬಸವೇಶ್ವರರ ಬಾವುಟ ತೆಗೆಯುವ ವಿಚಾರದಲ್ಲಿ ಎರಡು ಸಮುದಾಯದ ನಡುವೆ ಉಂಟಾದ ಮಾತಿನ ಚಕಮಕಿ ಜಾತ್ರೆ ಸ್ಥಗಿತವಾಗುವಂತೆ ಮಾಡಿದೆ.

ಒಂದು ಸಮುದಾಯದವರು ಬಾವುಟವನ್ನು ತೆರವುಗೊಳಿಸುವಂತೆ ಪಟ್ಟು ಹಿಡಿದರು, ಆದರೆ ಇನ್ನೊಂದು ಗುಂಪು ಬಾವುಟ ತೆರವುಗೊಳಿಸಲು ವಿರೋಧಿಸಿತು. ಈ ವೇಳೆ ಬಾವುಟದ ಬಳಿ ಅಂಬೇಡ್ಕರ್ ಭಾವಚಿತ್ರ ಅಳವಡಿಸಲು ಕೆಲವರು ಮುಂದಾದಾಗ ಪರಿಸ್ಥಿತಿ ವಿಕೋಪಕ್ಕೆ ತಿರುಗಿ ಮಾತಿನ ಚಕಮಕಿಗೆ ನಡೆಯಿತು, ಇದರಿಂದಾಗಿ ಅದ್ದೂರಿಯಿಂದ ಆರಂಭವಾಗಬೇಕಿದ್ದ ಜಾತ್ರೆಯ ರಥ ರಸ್ತೆ ಮಧ್ಯದಲ್ಲೇ ಅನಾಥವಾಗಿ ನಿಲ್ಲುವಂತಾಗಿದೆ.



ವಿವಾದದಿಂದಾಗಿ ಜಾತ್ರೆ ಸ್ಥಗಿತಗೊಂಡಿದ್ದು, ರಥ ಬೀದಿಯಲ್ಲಿ ನಿಂತಿದೆ.

ಜೊತೆಗೆ ಮತ್ತೊಂದು ಸಮುದಾಯ ದೇವಾಲಯದ ಪೂಜಾ ವಿಧಿ ವಿಧಾನಗಳನ್ನು ಸ್ಥಗಿತಗೊಳಿಸಿ ದೇವಾಲಯಕ್ಕೆ ಬೀಗ ಜಡಿದಿದ್ದಾರೆ. ಸ್ಥಳಕ್ಕೆ ಭೇಟಿ ನೀಡಿದ ಪೊಲೀಸರು ಎರಡು ಸಮುದಾಯದ ಮುಖಂಡರ ಮನ ಒಲಿಕೆಗೆ ಯತ್ನಿಸಿದರಾದರೂ ಪಟ್ಟು ಸಡಿಲಿಸಲಿಲ್ಲ, ಸದ್ಯ ಗ್ರಾಮದಲ್ಲಿ ಬಿಗುವಿನ ವಾತಾವರಣ ನಿರ್ಮಾಣವಾಗಿದೆ, ಗ್ರಾಮದಲ್ಲಿ ಅಹಿತಕರ ಘಟನೆ ನಡೆಯದಂತೆ ಡಿವೈಎಸ್‌ಪಿ ರಘು ನೇತೃತ್ವದಲ್ಲಿ ಬಿಗಿ ಪೊಲೀಸ್ ಬಂದೋ ಬಸ್ತ್ ಏರ್ಪಡಿಸಲಾಗಿದೆ.

ಹರೀಶ್‌ಗೌಡರಿಗೆ ಹುಟ್ಟುಹಬ್ಬದ ಸಂಭ್ರಮ



ಶನಿವಾರ ಹುಟ್ಟುಹಬ್ಬ ಆಚರಿಸಿಕೊಂಡ ಹುಣಸೂರು ಶಾಸಕ ಜಿ.ಡಿ. ಹರೀಶ್ ಗೌಡ ಅವರನ್ನು ತಿ.ನರಸೀಪುರ ಕಸಬಾ ಪಿಎಸಿಸಿಎಸ್ ಅಧ್ಯಕ್ಷ ಮಲ್ಲಣ್ಣ ಮೈಸೂರು ಪೇಟ ತೊಡಿಸಿ ಅಭಿನಂದಿಸಿದರು. ಟಿಎಪಿಸಿಎಂಎಸ್ ಅಧ್ಯಕ್ಷ ಟಿಪಿ ಸುಬ್ರಹ್ಮಣ್ಯ ಇದ್ದರು.

ಕೆಪಿಸಿಸಿ ಪರಿಶಿಷ್ಟ ಪಂಗಡ ವಿಭಾಗದ ಕಾರ್ಯದರ್ಶಿಯಾಗಿ ಮಣಿ ನೇಮಕ



ಹೆಚ್.ಡಿ.ಕೋಟೆ: ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಪರಿಶಿಷ್ಟ ಪಂಗಡ ವಿಭಾಗದ ರಾಜ್ಯ ಕಾರ್ಯದರ್ಶಿಯಾಗಿ ಮಾಗುಡಿಲು ಮಣಿ ಅವರನ್ನು ನೇಮಕ ಮಾಡಲಾಗಿದೆ. ಕೆಪಿಸಿಸಿ ಪರಿಶಿಷ್ಟ ಪಂಗಡ ವಿಭಾಗದ ರಾಜ್ಯಾಧ್ಯಕ್ಷ ವಿಜಯ ನಾಯಕ್ ಅವರು ಮಾಗುಡಿಲು ಮಣಿ ಅವರಿಗೆ ನೇಮಕ ಪತ್ರ ವಿತರಿಸಿದರು.

ಮೂರನೇ ಪುಟದಿಂದ

ಗ್ರೇಡ್ ಸಪರೇಟರ್ ಕಾಮಗಾರಿ ಆರಂಭ



ಕಾಮಗಾರಿ ನಡೆಯುತ್ತಿರುವ ಹಿನ್ನೆಲೆಯಲ್ಲಿ ನಿಧಾನವಾಗಿ ಚಲಿಸುವಂತೆ ಸವಾರರನ್ನು ಎಚ್ಚರಿಸುವ ಫಲಕಗಳನ್ನು ಅಳವಡಿಸಲಾಗಿದೆ.

ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಹರಿಯಾಣ ಮೂಲದ ಧಾರಿವಾಲ್ ಬಿಲ್ಡ್ ಟೆಕ್ ಲಿಮಿಟೆಡ್‌ಗೆ ಟೆಂಡರ್ ನೀಡಲಾಗಿದೆ. ಗುತ್ತಿಗೆ ಪಡೆದ ಕಂಪನಿ ಕಾಮಗಾರಿ ಆರಂಭಿಸಿದೆ. ಪ್ರಾರಂಭಿಕ ಹಂತದಲ್ಲಿ ರಚನಾತ್ಮಕವಾಗಿ ಬಹು ಹಂತದ ಪ್ರಕ್ರಿಯೆ ನಡೆಯಲಿದ್ದು, ಸ್ಥಳದ ಸಿದ್ಧತೆ, ಉತ್ಖನನ (ಎಕ್ಸವೇಷನ್) ಅಡಿಪಾಯ ಸೇರಿದಂತೆ ಇತರೆ ಕಾಮಗಾರಿಗಳ ಕೈಗೊಳ್ಳಲಾಗುತ್ತದೆ. ಗ್ರೇಡ್ ಸಪರೇಟರ್ ಕಾಮಗಾರಿಯ ಭಾಗವಾಗಿ ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇ ಪ್ರವೇಶ ಸ್ಥಳದಲ್ಲಿ ಸುಮಾರು 20 ಅಡಿ ಆಳಕ್ಕೆ ಅಗೆಯಲಾಗಿದೆ. ಆ ಸ್ಥಳದಿಂದ ಫ್ಲೈ ಓವರ್ ನಿರ್ಮಾಣ ಆರಂಭವಾಗಲಿದ್ದು, ಸುಭದ್ರತೆ ದೃಷ್ಟಿಯಿಂದ 20 ಅಡಿ ಆಳದಲ್ಲಿ ಕಬ್ಬಿಣದ ಫುಟಿಂಗ್‌ನಿಂದ ಕಾಂಕ್ರಿಟ್ ಅಡಿಪಾಯ ಹಾಕಲಾಗುತ್ತಿದೆ. ನಾಡಪ್ರಭು ಕೆಂಪೇಗೌಡ ವೃತ್ತವು (ಮಣಿ ಪಾಲ್ ಆಸ್ಪತ್ರೆ ಜಂಕ್ಷನ್) ಬೆಂಗಳೂರು, ಮೈಸೂರು, ಕೊಡಗು, ಚಾಮರಾಜನಗರ, ತಿ.ನರಸೀಪುರ, ಬನ್ನೂರು, ಮಳವಳ್ಳಿ, ನಂಜನಗೂಡು, ಹೆಚ್.ಡಿ.ಕೋಟೆ, ಹುಣಸೂರು, ಮಂಗಳೂರು, ಕೇರಳ ಹಾಗೂ ತಮಿಳುನಾಡಿಗೆ ಹಾದು ಹೋಗುವ ಅತೀ ಪ್ರಮುಖ ಕೇಂದ್ರ ಸ್ಥಳವಾಗಿದೆ. ವಿವಿಧ ಭಾಗಗಳಿಂದ ಮೈಸೂರಿಗೆ ಬರುವ ವಾಹನಗಳು ಈ ಜಂಕ್ಷನ್‌ನಿಂದ ವಿವಿಧ ಸ್ಥಳಗಳಿಗೆ ಸರಾಗವಾಗಿ ಸಾಗಬಹುದಾಗಿದೆ.

ಅಂತರ ಜಿಲ್ಲೆ ಹಾಗೂ ಅಂತರಾಜ್ಯಗಳಿಂದ ಬರುವ ವಾಹನಗಳು ಈ ಜಂಕ್ಷನ್ ಮೂಲಕವೇ ಹಾದು ಹೋಗಬೇಕಿದೆ. ಸಹಜವಾಗಿಯೇ ಇಲ್ಲಿ ಯಾವಾಗಲೂ ಟ್ರಾಫಿಕ್ ಜಾಮ್ ಇರುತ್ತದೆ. ಸಿಗ್ನಲ್ ಲೈಟ್ ಅಳವಡಿಸಿದ್ದರೂ ನೂರಾರು ವಾಹನಗಳು ನಾಲ್ಕು ಮಾರ್ಗದಲ್ಲಿ ನಿಲ್ಲುತ್ತಿವೆ. ಹಾಗಾಗಿ ವರ್ಷಗಳಿಂದ ಸುಗಮ ವಾಹನ ಸಂಚಾರಕ್ಕೆ ಅಡಚಣೆಯಾಗಿತ್ತು. ಇಲ್ಲಿ ಗ್ರೇಡ್ ಸಪರೇಟರ್ ನಿರ್ಮಾಣ ಮಾಡಬೇಕೆಂಬುದು ಮೈಸೂರು ಜನರ ಹಲವು ವರ್ಷಗಳ ಬೇಡಿಕೆಯಾಗಿತ್ತು. ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಇಲ್ಲಿ ಗ್ರೇಡ್ ಸಪರೇಟರ್ ನಿರ್ಮಾಣ ಮಾಡುವುದಾಗಿ ಬಜೆಟ್‌ನಲ್ಲಿ ಘೋಷಣೆ ಕೂಡ ಮಾಡಿತ್ತು. ಈ ಮಧ್ಯೆ ಇಲ್ಲಿ ಗ್ರೇಡ್ ಸಪರೇಟರ್ ನಿರ್ಮಾಣ ಮಾಡುವಂತೆ 2024, ಜೂನ್ ತಿಂಗಳಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅವರು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರ್ ಅವರನ್ನು ಭೇಟಿ ಮಾಡಿ, ಮನವಿ ಸಲ್ಲಿಸಿದ್ದರು. ಈ ಜಂಕ್ಷನ್‌ನಲ್ಲಿ ಆಗಾಗೆ ಅಪಘಾತಗಳು ಸಂಭವಿಸುತ್ತಿದ್ದು, ಸಾವು–ನೋವುಗಳಾಗುತ್ತಿವೆ. ಮೈಸೂರು ನಗರದ ಆಗಮನ ಹಾಗೂ ನಿರ್ಗಮನದ ಈ ಪ್ರಮುಖ ಸ್ಥಳದಲ್ಲಿ ವಾಹನ ದಟ್ಟಣೆ ನಿತ್ಯ ಗೋಳಾಗಿರುವ ಬಗ್ಗೆಯೂ ಅವರಿಗೆ ಮನವರಿಕೆ ಮಾಡಿಕೊಟ್ಟಿದ್ದರು.

ಮರಳು ದಂಧೆ ಸಿಬಿಐ ಇಲ್ಲವೇ ಎಸ್‌ಐಟಿ ತನಿಖೆ

ಭರವಸೆ ಕಾಣುತ್ತಿಲ್ಲ: ಮಾಫಿಯಾಗಳಿಂದ ನಡೆಯುತ್ತಿರುವ ಅಕ್ರಮ ಮರಳು ಗಣಿಗಾರಿಕೆ ತಡೆಯಲು ಸೂಕ್ತ ಕ್ರಮ ಕೈಗೊಳ್ಳುವಲ್ಲಿ ರಾಜ್ಯದ ಗೃಹ ಸಚಿವರು ಅಸಹಾಯಕರಾಗಿದ್ದಾರೆ ಎಂದು ಭಾವಿಸುವುದಾದರೆ ಇಂತಹ ಅಕ್ರಮಗಳನ್ನು ರಾಜ್ಯದ ಆಡಳಿತ ವ್ಯವಸ್ಥೆ ತಡೆಯಬಲ್ಲದು ಎಂಬುದಕ್ಕೆ ಯಾವುದೇ ಭರವಸೆ ಕಾಣುತ್ತಿಲ್ಲ. ಇದೊಂದು ಗಂಭೀರ ಸಮಸ್ಯೆಯಾಗಿದ್ದು ನ್ಯಾಯಾಲಯದ ಮೇಲ್ವಿಚಾರಣೆ ಅಗತ್ಯವಿದೆ ಎಂದು ನ್ಯಾಯಪೀಠ ಹೇಳಿದೆ.

ರಾಯಚೂರು ಜಿಲ್ಲೆಯ ಶಾಸಕಿಯೊಬ್ಬರು ತಮ್ಮ ಪ್ರದೇಶದಲ್ಲಿ ಅಕ್ರಮ ಮರಳು ಗಣಿಗಾರಿಕೆಯ ವಿರುದ್ಧ ಧ್ವನಿ ಎತ್ತಿದ ಪರಿಣಾಮ ಮರಳು ಮಾಫಿಯಾಗಳು ಅವರ ಜೀವಕ್ಕೆ ಬೆದರಿಕೆ ಹಾಕಿದ್ದಾರೆ ಎಂದು ದೂರು ನೀಡಲಾಗಿದೆ. ಮರಳು ತೆಗೆಯುವುದಕ್ಕೆ ಟೆಂಡರ್ ಕರೆದು ಬಿಡ್‌ಗಳನ್ನು ಆಹ್ವಾನಿಸಿದ್ದರೂ ಅದರ ಪ್ರಕ್ರಿಯೆ ಪೂರ್ಣಗೊಂಡಿಲ್ಲ. ಮರಳು ಗಣಿಗಾರಿಕೆ ನಡೆಸುವುದನ್ನು ಕಾನೂನು ಬದ್ಧಗೊಳಿಸಲು ಬಯಸದ ದೊಡ್ಡದೊಡ್ಡ ಕುಳಗಳು ಈ ದಂಧೆಯಲ್ಲಿ ಭಾಗಿಯಾಗಿದ್ದಾರೆ. ಮರಳು ಗಣಿಗಾರಿಕೆಗೆ ಟೆಂಡರ್ ಕರೆದು ನಿಯಮಬದ್ಧವಾಗಿ ನಡೆಸಿದಲ್ಲಿ ಅದರಿಂದ ಬರುವ ಹಣ ಖಜಾನೆಗೆ ಹೋಗುತ್ತದೆ. ಆಗ ಈ ಮಾಫಿಯಾಗಳು ತಮ್ಮ ಅಕ್ರಮ ಗಳಿಕೆಯನ್ನು ಕಳೆದುಕೊಳ್ಳಲಿವೆ' ಎಂಬ ಮಾಧ್ಯಮ ವರದಿಗಳನ್ನು ನ್ಯಾಯಪೀಠ ಉಲ್ಲೇಖಿಸಿದೆ.

ಮೈಸೂರು ಪೊಲೀಸರು ಶಾಮೀಲಾಗಿದ್ದಾರಾ...!

ಮಾಡುತ್ತಿದ್ದಾರೆ ಅಂದರೆ ಸ್ಥಳೀಯ ಪೊಲೀಸರ ಮೇಲೆ ಸಂಶಯ ಮೂಡುವುದು ಸಹಜ ಅಲ್ಲವೇ ಎಂದರು.

ಮೈಸೂರಿನಲ್ಲಿ ಡ್ರಗ್ಸ್ ತಯಾರಿಕೆ ಘಟಕಗಳು ಕಾರ್ಯ ನಿರ್ವಹಿಸುತ್ತಿರುವ ಬಗ್ಗೆ ಸ್ಥಳೀಯ ಪೊಲೀಸರಿಗೆ ಅರಿವಿಲ್ಲವೇ?. ಪದೇ ಪದೇ ಹೊರ ರಾಜ್ಯದ ಪೊಲೀಸರು ಡ್ರಗ್ಸ್ ಜಾಲ ಬೆಳಕಿಗೆ ತರುತ್ತಿರುವುದರಿಂದ ಸ್ಥಳೀಯ ಪೊಲೀಸರು ಶಾಮೀಲಾಗಿರಬಹುದೇ ಎಂಬ ಸಂಶಯ ದಟ್ಟವಾಗಿದೆ. ಇದು ಮೇಲ್ನೋಟಕ್ಕೆ ಸತ್ಯವೆಂದು ಕಂಡುಬಂದರೆ ಹೊರಗಿನ ಸ್ವತಂತ್ರ ತನಿಖಾ ಸಂಸ್ಥೆಯಿಂದ ತನಿಖೆ ನಡೆಸ ಬೇಕು. ಇದನ್ನು ನಗರದ ಹಿತದೃಷ್ಟಿಯಿಂದ ಗಂಭೀರವಾಗಿ ಪರಿಗಣಿಸಬೇಕು ಎಂದು ಆಗ್ರಹಿಸಿದರು.

ಮೈಸೂರಿನ ಹೆಬ್ಬಾಳು ಕೈಗಾರಿಕಾ ಪ್ರದೇಶದ ಕಾರ್ಖಾನೆಯೊಂದರಲ್ಲಿ ಡ್ರಗ್ಸ್ ತಯಾರಿಸುತ್ತಿದ್ದ ಸಂಬಂಧ ದಾಳಿ ನಡೆಸಿದ್ದ ಎನ್‌ಸಿಬಿ ಅಧಿಕಾರಿಗಳೇ ಅಧಿಕೃತ ಮಾಹಿತಿ ನೀಡಿದ್ದಾರೆ. ಆದರೆ ಗೃಹ ಸಚಿವ ಡಾ.ಜಿ. ಪರಮೇಶ್ವರ್ ಹಾಗೂ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಸದರಿ ಘಟಕದಲ್ಲಿ ಡ್ರಗ್ಸ್ ತಯಾರಿ ಮಾಡುತ್ತಿರಲಿಲ್ಲ, ಅಲ್ಲಿ ಯಾವುದೇ ಡ್ರಗ್ಸ್ ಸಿಕ್ಕಿಲ್ಲ ಎಂದು ಜನರಿಗೆ ತಪ್ಪು ಮಾಹಿತಿ ನೀಡುತ್ತಿದ್ದಾರೆ. ಇವರು ಸತ್ಯ ಮರೆಮಾಚುತ್ತಿರುವುದು ಏಕೆಂಬುದೇ ತಿಳಿಯುತ್ತಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. ಎನ್‌ಸಿಬಿ ಅಧಿಕಾರಿಗಳು ಮೈಸೂರಿನ ಡ್ರಗ್ಸ್ ಸಿಂಡಿಕೇಟ್ ಅನ್ನು ಪತ್ತೆ ಮಾಡದಿದ್ದರೆ, ಈ ಅಕ್ರಮ ಗುಪ್ತವಾಗಿ ಮುಂದುವರೆಯುತ್ತಿತ್ತು. ಸದ್ಯ ಎನ್‌ಸಿಬಿಯಿಂದ ಡ್ರಗ್ಸ್ ದಂಧೆಗೆ ಕಡಿವಾಣ ಬಿದ್ದಿದೆ. ಡ್ರಗ್ಸ್ ತಯಾರಿಕೆ ವಿಚಾರ ಸ್ಥಳೀಯ ಪೊಲೀಸರಿಗೂ ತಿಳಿದಿಲ್ಲ, ರಾಜ್ಯ ಪೊಲೀಸರ ಅರಿವಿಗೂ ಬಂದಿಲ್ಲ ಎಂದಾದರೆ ಇದು ರಾಜ್ಯದ ಕಾನೂನು ಮತ್ತು ಸುವ್ಯವಸ್ಥೆಯ ವೈಫಲ್ಯಕ್ಕೆ ಸಾಕ್ಷಿಯಾಗಿದೆ ಎಂದು ಯದುವೀರ್ ಕಿಡಿಕಾರಿದರು.

ಮೈಸೂರು ಈಗ ಡ್ರಗ್ಸ್ ನಗರಿಯಾಗುತ್ತಿದೆ...

ಮೈಸೂರು: ದಸರಾ ಮೂಲಕ ವಿಶ್ವ ವಿಖ್ಯಾತಿ ಪಡೆದಿರುವ ಸಾಂಸ್ಕೃತಿಕ ನಗರಿ ಮೈಸೂರು, ಈಗ ಡ್ರಗ್ಸ್ ನಗರಿಯಾಗಿ ಬದಲಾಗುತ್ತಿದೆ ಎಂದು ಯದುವೀರ್ ಆತಂಕ ವ್ಯಕ್ತಪಡಿಸಿದರು.

ಸಂಸ್ಕೃತಿ, ಪರಂಪರೆ, ಪಾರಂಪರಿಕತೆ, ದಸರಾ, ಅರಮನೆ ಮೈಸೂರಿನ ಬ್ರ್ಯಾಂಡ್ ಆಗಿವೆ. ಆದರೆ ಇತ್ತೀಚಿಗೆ ಮೈಸೂರು ಡ್ರಗ್ಸ್ ಜಾಲದ ಮೂಲಕ ಕುಖ್ಯಾತಿ ಪಡೆಯುತ್ತಿದೆಯೇ ಎಂಬ ಆತಂಕ ಶುರುವಾಗಿದೆ. ಡ್ರಗ್ಸ್ ಎಂದಾಕ್ಷಣ ಮೈಸೂರು ನೆನಪಿಗೆ ಬರುವಷ್ಟು ಮಟ್ಟಿಗೆ ಇಲ್ಲಿನ ವಾತಾವರಣ ಹಾಳಾಗಿದೆ. ತಮ್ಮ ತವರು ಜಿಲ್ಲೆಯಲ್ಲಿ ನಡೆಯುತ್ತಿರುವ ಇಂತಹ ಅಪರಾಧ ಚಟುವಟಿಕೆಯನ್ನು ಮಟ್ಟ ಹಾಕಲು ಮುಖ್ಯಮಂತ್ರಿ ಸಿದ್ದರಾಮಯ್ಯ ಗಂಭೀರ ಕ್ರಮ ವಹಿಸಬೇಕು. ಇದನ್ನು ಸವಾಲಾಗಿ ಸ್ವೀಕರಿಸಿ ಇನ್ನೆಂದೂ ಇಂತಹ ಡ್ರಗ್ಸ್ ಚಟುವಟಿಕೆ ನಡೆಯದಂತೆ ಎಚ್ಚರ ವಹಿಸಬೇಕು ಎಂದು ಆಗ್ರಹಿಸಿದರು.

ಸಿಎಂ ಆಗಿ ದೀರ್ಘಾವಧಿ ಆಡಳಿತ, ಅತಿ ಹೆಚ್ಚು ಬಜೆಟ್ ಮಂಡನೆ ಸೇರಿದಂತೆ ಹಲವು ಸಾಧನೆ ಮಾಡಿರುವುದಾಗಿ ಹೇಳಿಕೊಳ್ಳುವ ಸಿದ್ದರಾಮಯ್ಯ ಅವರಿಗೆ, ತಮ್ಮ ತವರು ಜಿಲ್ಲೆಯಲ್ಲಿ ನಡೆಯುತ್ತಿರುವ ಇಂತಹ ಕೃತ್ಯಗಳು ಧಕ್ಕೆ ತರಲಿವೆ ಎಂದರು.

ಐಟಿ ದಾಳಿಯಿಂದ ಒತ್ತಡದಲ್ಲಿದ್ದರು

ದಾಳಿ ನಡೆದಿತ್ತು ಎಂದು ಅವರು ದೃಢಪಡಿಸಿದರು. ತನಿಖೆ ಪ್ರಕ್ರಿಯೆ ಗಳ ಕಾರಣದಿಂದ ಅವರು ತೀವ್ರ ಒತ್ತಡ ದಲ್ಲಿದ್ದರು ಎಂದು ಬಾಬು ಹೇಳಿದರು.

ಶುಕ್ರವಾರ ಬೆಳಗ್ಗೆ 10.40ರ ವೇಳೆಗೆ ರಾಯ್ ತಮಗೆ ಎರಡು ಬಾರಿ ಕರೆ ಮಾಡಿದ್ದರು. ಐಟಿ ಅಧಿಕಾರಿಗಳ ಒತ್ತಡ ವಿದ್ದು ತಕ್ಷಣ ಇಲ್ಲಿಗೆ ಬರುವಂತೆ ಹೇಳಿ ದ್ದರು. ಸಂಪೂರ್ಣ ತನಿಖೆ ನಡೆದು, ಸತ್ಯ ಹೊರಬರಲಿ ಎಂದು ಅವರಿಗೆ ಫೋನಿನಲ್ಲಿ ಹೇಳಿದ್ದೆ. ನಾನು ಬೇರೆ ಕಡೆ ಇದ್ದಿದ್ದ ರಿಂದ ತಕ್ಷಣಕ್ಕೆ ಬೆಂಗಳೂರಿಗೆ ಬರಲು ಸಾಧ್ಯವಾಗಲಿಲ್ಲ ಎಂದರು.

ಎಲ್ಲಾ ಆಯಾಮಗಳಲ್ಲಿ ತನಿಖೆ: ತನಿಖೆ ಭಾಗವಾಗಿ ಬೆಂಗಳೂರಿನ ಅಶೋಕನಗರ ಪೊಲೀಸರು ರಾಯ್ ಅವರಿಗೆ ಸೇರಿದ ಎರಡು ಮೊಬೈಲ್ ಫೋನ್‌ಗಳನ್ನು ವಶ ಪಡಿಸಿಕೊಂಡಿದ್ದಾರೆ. ಕಾನ್ಫಿಡೆಂಟ್ ಗ್ರೂಪ್‌ನ ವ್ಯವ ಸ್ಥಾಪಕ ನಿರ್ದೇಶಕ ಟಿ.ಎ. ಜೋಸೆಫ್ ನೀಡಿದ ದೂರಿನ ಆಧಾರದಲ್ಲಿ ಪೊಲೀಸರು ಅನುಮಾನಾಸ್ಪದ ಸಾವಿನ ಪ್ರಕರಣ ದಾಖಲಿಸಿಕೊಂ ಡಿದ್ದಾರೆ. ಸ್ಥಳದಲ್ಲಿ ಯಾವುದೇ ಆತ್ಮಹತ್ಯೆ ಪತ್ರ ಪತ್ತೆಯಾಗಿಲ್ಲ, ಎಲ್ಲ ಆಯಾಮಗಳಿಂದ ತನಿಖೆ ಮುಂದು ವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ರಾಜಕೀಯ ತಳುಕು: ಉದ್ಯಮಿ ಸಿ.ಜೆ.ರಾಯ್ ಆತ್ಮಹತ್ಯೆಗೆ ಕೇರಳ ಎಲೆಕ್ಷನ್ ಕಂಟಕವಾಗಿರಬಹುದು ಎಂದು ಶಂಕಿಸಲಾಗಿದೆ. ಏಪ್ರಿಲ್‌ನಲ್ಲಿ ಕೇರಳ ಅಸೆಂಬ್ಲಿ ಎಲೆಕ್ಷನ್ ನಡೆಯಲಿದೆ. ಈ ಸಂಬಂಧ ಉದ್ಯಮಿಗಳ ಮೇಲೆ ಐಟಿ ಇಲಾಖೆ ಕಣ್ಣಿಟ್ಟಿತ್ತು. ಕಳೆದ ಕೆಲ ಎಲೆಕ್ಷನ್‌ಗಳಿಂದ ಹಲವು ನಾಯಕರಿಗೆ ರಾಯ್ ಫಂಡಿಂಗ್ ಮಾಡಿದ್ದರು ಎಂಬ ಶಂಕೆ ಕೂಡ ವ್ಯಕ್ತವಾಗಿದೆ. ಈ ಎಲೆಕ್ಷನ್‌ಗೂ ಕೂಡ ಫಂಡಿಂಗ್ ಮಾಡಲು ತಯಾರಿ ನಡೆಸಿದ್ದರು ಎನ್ನಲಾಗಿದೆ. ಹೀಗಾಗಿಯೇ ಕಳೆದ ಒಂದು ತಿಂಗಳಿಂದ ಐಟಿ ಅಧಿಕಾರಿಗಳು ಶೋಧ ನಡೆಸಿದ್ದರು. 2 ದಿನದಿಂದ ಲೆಕ್ಕಪತ್ರಗಳ ವ್ಯತ್ಯಾಸದ ಬಗ್ಗೆ ಮತ್ತೆ ಐಟಿ ತಲಾಶ್ ಶುರು ಮಾಡಿತ್ತು.

ರಾಯ್ ಅವರ ಆತ್ಮಹತ್ಯೆ ಪ್ರಕರಣ ರಾಜಕೀಯ ಸ್ವರೂಪ ಪಡೆದುಕೊಂಡಿದೆ. ಹೀಗಾಗಿ, ಐಟಿ ಅಧಿಕಾರಿಗಳು ಸಮಜಾಯಿಷಿಗೆ ಇಳಿದಿದ್ದಾರೆ. ಘಟನೆಯ ಬಗ್ಗೆ ಕೇಂದ್ರ ಗೃಹ ಸಚಿವಾಲಯಕ್ಕೆ ಐಟಿ ಮಾಹಿತಿ ನೀಡಿದೆ. ಐಟಿ ವಂಚನೆ ಮಾಡಿದ್ದರ ಬಗ್ಗೆ ತನಿಖೆ ನಡೆಸಲಾಗುತ್ತಿತ್ತು. 1 ತಿಂಗಳ ಹಿಂದೆ ದಾಳಿ ನಡೆಸಿ ದಾಖಲೆ ವಶಕ್ಕೆ ಪಡೆದಿದೆ. ರಾಯ್ ಆಡಿಟಿಂಗ್‌ನಲ್ಲಿ ವ್ಯತ್ಯಾಸ ಇತ್ತು. ಹೀಗಾಗಿ ಮತ್ತೆ ಪರಿಶೀಲನೆ ನಡೆಸಲಾಗುತ್ತಿತ್ತು.

ಇಂದು ಸಿ.ಜೆ.ರಾಯ್ ಅಂತ್ಯಕ್ರಿಯೆ

ಬೆಂಗಳೂರು: ಸಿ.ಜೆ.ರಾಯ್ ಅವರ ಅಂತ್ಯಕ್ರಿಯೆಯನ್ನು ಭಾನುವಾರ ನೆರವೇರಿಸಲು ಕುಟುಂಬದವರು ನಿರ್ಧರಿಸಿದ್ದಾರೆ.

ಬೆಂಗಳೂರಿನ ಕೋರಮಂಗಲದಲ್ಲಿರುವ ವೈಟ್‌ಹೌಸ್‌ನಲ್ಲಿ ಬೆಳಗ್ಗೆ 10ರಿಂದ ಮಧ್ಯಾಹ್ನ 2 ಗಂಟೆವರೆಗೆ ಅಂತಿಮ ದರ್ಶನಕ್ಕಿಟ್ಟು, ನಂತರ ರಾಯ್ ಅವರ ಇಚ್ಛೆಯಂತೆ ಬನ್ನೇರುಘಟ್ಟ ಸಮೀಪದ ಕಾಸಾಗ್ರ್ಯಾಂಡ್‌ನಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಮೂಲಗಳು ತಿಳಿಸಿವೆ.

ಮೈಸೂರಲ್ಲಿ ಡ್ರಗ್ಸ್ ತಯಾರಿಕಾ ದಂಧೆ ಸಚಿವ ಪರಮೇಶ್ವರ್ 'ಏನು ಇಲ್ಲ' ಧೋರಣೆಗೆ ಬಿಜೆಪಿ ಆಕ್ರೋಶ

- ದೆಹಲಿಯ ರಾಷ್ಟ್ರೀಯ ಅಪರಾಧ ತನಿಖಾ ದಳದ ಯಶಸ್ವಿ ಕಾರ್ಯಾಚರಣೆ ಹೊರತಾಗಿಯೂ ಗೃಹ ಸಚಿವರು, ಪೊಲೀಸ್ ಕಮಿಷನರ್ ನಿರಾಕರಣೆ ಬಗ್ಗೆ ಕಳವಳ
- ಗೃಹ ಸಚಿವರ ರಾಜೀನಾಮೆ; ಪೊಲೀಸ್ ಆಯುಕ್ತರ ಅಮಾನತಿಗೆ ಆಗ್ರಹ

ಬೆಂಗಳೂರು,ಜ.31(ಕೆಎಂಶಿ)–ಮೈಸೂರಿನಲ್ಲಿ ಡ್ರಗ್ಸ್ ತಯಾರಿಕೆ ದಂಧೆ ಬಯಲಾದ ನಂತರವೂ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಪ್ರಕರಣವನ್ನು ಅಲ್ಲಗಳೆದಿರುವುದನ್ನು ರಾಜ್ಯ ಬಿಜೆಪಿ ತೀವ್ರವಾಗಿ ಖಂಡಿಸಿದೆ.

ರಾಷ್ಟ್ರೀಯ ಅಪರಾಧ ತನಿಖಾ ದಳದ ತಂಡ ದೆಹಲಿಯಿಂದ ಆಗಮಿಸಿ ದಂಧೆಕೋರರನ್ನು ಪತ್ತೆ ಹಚ್ಚಿ ಸುಮಾರು 300 ಕೋಟಿ ರೂ. ಮೌಲ್ಯದ ಮಾದಕ ವಸ್ತು ವಶಪಡಿಸಿಕೊಂಡಿರುವುದಾಗಿ ಹೇಳಿಕೆ ಕೊಟ್ಟಿದೆ.

ಇಷ್ಟಾದರೂ ಗೃಹ ಸಚಿವರು ಮತ್ತು ಸ್ಥಳೀಯ ಪೊಲೀಸ್ ಆಯುಕ್ತರು ಸುಳ್ಳು ಮಾಹಿತಿ ನೀಡುವ ಮೂಲಕ ಸಾರ್ವಜನಿಕರ ದಿಕ್ಕು ತಪ್ಪಿಸುವ ಕೆಲಸ ಮಾಡಿದ್ದು, ಸಚಿವರು ನೈತಿಕ ಹೊಣೆ ಹೊತ್ತು ರಾಜೀನಾಮೆ ನೀಡಬೇಕು ಹಾಗೂ ಪೋಲಿಸ್ ಅಧಿಕಾರಿಯನ್ನು ಅಮಾನತು ಮಾಡಬೇಕು ಎಂದು ಪಕ್ಷ ಒತ್ತಾಯಿಸಿದೆ. ಕರ್ನಾಟಕ, ಅದರಲ್ಲೂ ವಿಶೇಷವಾಗಿ ಮೈಸೂರು ಮತ್ತು ಬೆಂಗಳೂರು ಮಾದಕವಸ್ತು ನಗರಗಳಾಗಿ ಪರಿವರ್ತನೆಗೊಂಡಿರುವುದು ದುರದೃಷ್ಟಕರ. ರಾಜ್ಯವನ್ನು ಡ್ರಗ್ಸ್ ಮುಕ್ತ ಮಾಡುವಲ್ಲಿ ಕಾರ್ಯೋನ್ಮುಖರಾಗಬೇಕು ಎಂದು ಬಿಜೆಪಿ ಆಗ್ರಹಿಸಿದೆ. ಕಾನೂನು ಮತ್ತು ಸುವ್ಯವಸ್ಥೆ ತೀವ್ರ ಕುಸಿದಿದೆ. ಪದೇ ಪದೆ ರಾಜ್ಯದ ವಿವಿಧೆಡೆ ಮಾದಕವಸ್ತು ತಯಾರಿಕೆ ಮತ್ತು ಸರಬ ರಾಜು ಆಗುತ್ತಿರುವುದನ್ನು ರಾಷ್ಟ್ರೀಯ ಅಪರಾಧ ತನಿಖಾ ದಳದ ವರದಿಯಲ್ಲಿ ಉಲ್ಲೇಖಿಸಲಾಗಿದೆ. ಕಳೆದ ಕೆಲವು ತಿಂಗಳಿಂದ ಗುಜರಾತ್ ಮತ್ತು ಮಹಾರಾಷ್ಟ್ರ ಪೊಲೀಸ್ ಅಧಿಕಾರಿಗಳು ಕರ್ನಾ ಟಕಕ್ಕೆ ಬಂದು ಮೈಸೂರು ಮತ್ತು ಬೆಂಗಳೂರಿನಲ್ಲಿ ನಿರ್ಮಾಣಗೊಂಡಿದ್ದ ಡ್ರಗ್ಸ್ ತಯಾರಿಕಾ ಘಟಕಗಳ ಮೇಲೆ ದಾಳಿ ನಡೆಸಿ, ಕೋಟ್ಯಾಂತರ ಮೌಲ್ಯದ ಮಾಲು ಹಾಗೂ ಇತರೆ ಸಲ ಕರಣೆ ವಶಕ್ಕೆ ಪಡೆದಿದ್ದಾರೆ. ಗುಜರಾತ್‌ನ ಮಾದಕ ವಸ್ತು ನಿರೋಧಕ ದಳ ತನಿಖೆ ಮುಂದುವರೆಸಿದ ಪರಿಣಾಮ ಮೈಸೂರಿನಲ್ಲಿ ಮತ್ತೊಂದು ಫ್ಯಾಕ್ಟರಿ ಮೇಲೆ ಮೊನ್ನೆಯಷ್ಟೇ ದಾಳಿ ಮಾಡಿ ಮಾದಕವಸ್ತು ಉತ್ಪಾದನೆ ಸ್ಥಗಿತಗೊಳಿಸಿ, ನಾಲ್ವರನ್ನು ಬಂಧಿಸಲಾಗಿದೆ. ಸೂರತ್‌ನ ನಾರ್ಕೊಟಿಕ್ಸ್ ಕ್ರೈಂ ಬ್ಯೂರೊ ದಾಳಿ ಮಾಡಿದ್ದನ್ನು ದೃಢಪಡಿಸಿದ್ದರೂ ರಾಜ್ಯ ಸರ್ಕಾರ ಎಲ್ಲ ಘಟನಾವಳಿ ಮುಚ್ಚಿ ಹಾಕುವ ಪ್ರಯತ್ನ ಮಾಡು ತ್ತಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದೆ.

> ❝ ರಾಜ್ಯ ಉಡ್ತಾ ಕರ್ನಾಟಕವಾಗಿ ಪರಿವರ್ತನೆಗೆ ಕಾಂಗ್ರೆಸ್ ದುರಾಡಳಿತವೇ ಕಾರಣವಾಗಿದ್ದು, ಡ್ರಗ್ಸ್ ದಂಧೆ ಯುವಜನಾಂಗದ ದಾರಿ ತಪ್ಪಿಸುತ್ತಿದೆ. ರಾಜ್ಯದಲ್ಲಿ ಒಂದೆಡೆ ಕೊಲೆ, ಸುಲಿಗೆ ನಡೆಯುತ್ತಿದ್ದರೆ, ಮತ್ತೊಂದೆಡೆ ಮಹಿಳೆಯರ ಮೇಲೆ ಅತ್ಯಾಚಾರ, ದಬ್ಬಾಳಿಕೆ ಪ್ರಕರಣಗಳಿಂದ ಒಟ್ಟಾರೆ ಕಾನೂನು ಸುವ್ಯವಸ್ಥೆ ಕುಸಿತವಾಗಿದ್ದು, ಸರ್ಕಾರದ ಆಡಳಿತ ವೈಖರಿಗೆ ಹಿಡಿದ ಕೈಗನ್ನಡಿಯಾಗಿದೆ ಎಂದು ಬಿಜೆಪಿ ಆರೋಪಿಸಿದೆ.

ಡ್ರಗ್ಸ್ ಫ್ಯಾಕ್ಟರಿಯಲ್ಲಿ ವಶಪಡಿಸಿಕೊಂಡ ಸಾಮಗ್ರಿಗಳ ಕುರಿತು ಸ್ವತಃ ಗೃಹ ಸಚಿವರೇ ದಾರಿ ತಪ್ಪಿಸುವ ಕೆಲಸ ಮಾಡುತ್ತಿದ್ದಾರೆ. ಸಾಲದೆಂಬಂತೆ ಮೈಸೂರು ಪೊಲೀಸ್ ಕಮಿಷನರ್ ಸೀಮಾ ಲಾಟ್ಕರ್, ದಾಳಿ ವೇಳೆ ಯಾವುದೇ ಅಕ್ರಮ ಪದಾರ್ಥ ಸಿಕ್ಕಿಲ್ಲ ಎಂಬ ಸುಳ್ಳು ಮಾಹಿತಿ ನೀಡಿದ್ದಾರೆ. ಮೈಸೂರು ಗ್ರಾಮಾಂತರ ಪೊಲೀಸರು ಶಂಕಿತ ವ್ಯಕ್ತಿಗಳ ಸಂಬಂಧಿಕರ ಮನೆ ಮೇಲೆ ನಿನ್ನೆ ನಡೆಸಿದ ದಾಳಿಯಲ್ಲಿ ಕೋಟಿಗಟ್ಟಲೆ ಬೆಲೆ ಬಾಳುವ ಮಾದಕ ವಸ್ತು 'ಓಪಿಯಂ' ಸಿಕ್ಕಿರುವುದು ಅತ್ಯಂತ ಕಳವಳಕಾರಿ ಸಂಗತಿಯಾಗಿದೆ.

ಇಂದು ಕೇಂದ್ರ ಬಜೆಟ್

ಹೆಚ್ಚಿಸಬೇಕು, ಸಣ್ಣ ಉದ್ಯಮಗಳಿಗೆ ಸುಲಭ ಸಾಲ, ಸರಳ ನಿಯಮಾವಳಿ ಜೊತೆಗೆ ನಿರಂತರ ಬೆಂಬಲ ನೀಡಬೇಕೆಂಬ ನಿರೀಕ್ಷೆ ಕೈಗಾರಿಕೋದ್ಯಮಿಗಳದ್ದಾಗಿದೆ.

ವೈದ್ಯಕೀಯ ವೆಚ್ಚಗಳಿಂದಾಗಿ ಸಾಲದ ಸುಳಿಗೆ ಸಿಲುಕುತ್ತಿರುವ ಕುಟುಂಬಗಳು ರಕ್ಷಣೆಗೆ ಸರ್ಕಾರ ಮುಂದಾಗಬೇಕು. ಸರ್ಕಾರಿ ಆಸ್ಪತ್ರೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರ ಗಳು ಮತ್ತು ಕಡಿಮೆ ದರದ ಔಷಧಗಳಿಗೆ ಹೆಚ್ಚಿನ ಅನುದಾನ ನೀಡಬೇಕೆಂಬುದು ಬಜೆಟ್‌ನಲ್ಲಿ ಸಾಕಾರಗೊಳ್ಳುವ ನಿರೀಕ್ಷೆ ಇದೆ. ಸರ್ಕಾರಿ ಶಾಲೆ–ಕಾಲೇಜುಗಳ ಸುಧಾ ರಣೆ, ಡಿಜಿಟಲ್ ಕಲಿಕೆ ಮೂಲ ಸೌಕರ್ಯ ಮತ್ತು ಉನ್ನತ ಶಿಕ್ಷಣಕ್ಕೆ ಲಭಿಸುವ ಸಾಲ ಗಳು ಇನ್ನಷ್ಟು ಸರಳ ಹಾಗೂ ಅಗ್ಗವಾಗಬಹುದೆಂದು ಅಂದಾಜಿಸಲಾಗಿದೆ. ನಗರ ಪ್ರದೇಶಗಳಲ್ಲಿರುವ ಮಧ್ಯಮ ವರ್ಗ ಕುಟುಂಬಗಳ ಸ್ವಂತ ಸೂರಿನ ಕನಸು ಈ ಬಾರಿಯಾದರೂ ಸಾಕಾರಗೊಳ್ಳಬಹುದು, ಗೃಹ ಸಾಲ ಸುಲಭವಾಗಿ ಲಭ್ಯವಾಗುವಂತೆ ನಿಯಮ ಸರಳೀಕರಣ ಗೊಳಿಸಬಹುದೆಂಬ ನಿರೀಕ್ಷೆ ಹೆಚ್ಚಿದೆ. ಖಾಸಗಿ ಬಂಡವಾಳ ಮತ್ತು ಎಲ್ಲಾ ವಲಯಗಳಲ್ಲಿ ಉತ್ಪಾದಕತೆ ಸುಧಾರಣೆ, ಸಾರ್ವಜನಿಕ ಹೂಡಿಕೆಯಲ್ಲಿ ಸಹಭಾಗಿತ್ವದ ಮೂಲಕ ಭಾರತದ ಮಧ್ಯಮ ಅವಧಿಯ ಬೆಳವಣಿಗೆಯ ಪಥವನ್ನು ಬಲಪಡಿಸುವ ನಿಟ್ಟಿನಲ್ಲಿ ಈ ಬಾರಿ ಬಜೆಟ್‌ನಲ್ಲಿ ಆದ್ಯತೆ ನೀಡಬಹುದು. ದೇಶದ ಬೆಳವಣಿಗೆಯಲ್ಲಿ ನಾವೀನ್ಯತೆ ಮತ್ತು ತಂತ್ರಜ್ಞಾನಕ್ಕೆ ಹೆಚ್ಚಿನ ಒತ್ತು ನೀಡುವ ಸಾಧ್ಯತೆಯಿದೆ. ಸಂಶೋಧನೆ ಮತ್ತು ಅಭಿವೃದ್ಧಿ, ಕೃತಕ ಬುದ್ಧಿಮತ್ತೆ, ಸೆಮಿಕಂಡಕ್ಟರ್‌ಗಳು, ಆಳವಾದ ತಂತ್ರಜ್ಞಾನ ಮತ್ತು ಡಿಜಿಟಲ್ ಮೂಲಸೌಕರ್ಯ, ಕೌಶಲ್ಯಾಭಿವೃದ್ಧಿಯಲ್ಲಿ ಹೂಡಿಕೆಗಳಿಗೆ ಬೆಂಬಲ ಸಿಗಬಹುದು ಎಂಬುದು ಕಾರ್ಪೊರೇಟ್ ನಾಯಕರ ನಿರೀಕ್ಷೆಯಾಗಿದೆ.

ಮೈಸೂರು ಅರಮನೆಯ ನವೀಕೃತ ಚಂದ್ರಶಾಲೆ ತೊಟ್ಟಿ ಸಭಾಂಗಣದಲ್ಲಿ

ರಾಜಾ ರವಿವರ್ಮ ಕುರಿತ ನಾಲ್ಕನೇ ಸಂಪುಟ ಬಿಡುಗಡೆ



ಮೈಸೂರು ಅರಮನೆಯ ನವೀಕೃತ ಐತಿಹಾಸಿಕ ಚಂದ್ರಶಾಲೆ ತೊಟ್ಟಿ ಸಭಾಂಗಣದಲ್ಲಿ ಶನಿವಾರ 'ರಾಜಾ ರವಿವರ್ಮ ; ಆನ್ ಎವರ್ಲಾಸ್ಟಿಂಗ್ ಇಂಪ್ರಿಂಟ್–ದಿ ಎಪಿಕ್ಸ್ ಇಮ್ಯಾಜಿನ್ಡ್' ನಾಲ್ಕನೇ ಸಂಪುಟ ಬಿಡುಗಡೆ ಮಾಡಲಾಯಿತು.

ಮೈಸೂರು,ಜ.31(ಪಿಎಂ)– ಮೈಸೂರು ಅರಮನೆಯ ನವೀಕೃತ ಐತಿಹಾಸಿಕ ಚಂದ್ರಶಾಲೆ ತೊಟ್ಟಿ ಸಭಾಂಗಣದಲ್ಲಿ ಶ್ರೀಕಂಠದತ್ತ ನರಸಿಂಹ ರಾಜ ಒಡೆಯರ್ ಪ್ರತಿಷ್ಠಾನದ ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ ವಕೀಲ ಗಣೇಶ್ ವಿ.ಶಿವಸ್ವಾಮಿ ರಚಿತ 'ರಾಜಾ ರವಿವರ್ಮ ; ಆನ್ ಎವರ್ಲಾಸ್ಟಿಂಗ್ ಇಂಪ್ರಿಂಟ್–ದಿ ಎಪಿಕ್ಸ್ ಇಮ್ಯಾಜಿನ್ಡ್' ನಾಲ್ಕನೇ ಸಂಪುಟ ಬಿಡುಗಡೆ ಮಾಡಲಾಯಿತು.

ಬಿಡುಗಡೆಗೊಳಿಸಿದ ಪ್ರತಿಷ್ಠಾನದ ಅಧ್ಯಕ್ಷರೂ ಆದ ಮೈಸೂರು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಮಾತನಾಡಿ, 50 ವರ್ಷಗಳ ನಂತರ ಈ ಚಂದ್ರಶಾಲೆ ತೊಟ್ಟಿ ಸಭಾಂಗಣವು ಸದರಿ ಕಾರ್ಯಕ್ರಮದ ಮೂಲಕ ಬಳಕೆಯಾಗುತ್ತಿದೆ. ಈ ಸಭಾಂಗಣವು ಮತ್ತೆ ಬಳಕೆಗೆ ಮುಕ್ತವಾಗಿರುವುದು ನನಗೆ ಸಂತಸ ತಂದಿದೆ. ನವೀಕೃತ ಈ ಸಭಾಂಗಣವನ್ನು ಮುಂದೆ ಇಂತಹ ಕಾರ್ಯಕ್ರಮಗಳ ಆಯೋಜನೆಗೆ ಬಳಸುವ ಉದ್ದೇಶ ಹೊಂದಲಾಗಿದೆ ಎಂದು ತಿಳಿಸಿದರು.

ಕೃತಿ ಕರ್ತೃ ಗಣೇಶ್ ವಿ.ಶಿವಸ್ವಾಮಿ ಮಾತನಾಡಿ, ಈ ಸಂಪುಟವು ರಾಮಾಯಣ ಮತ್ತು ಮಹಾಭಾರತಕ್ಕೆ ಸಂಬಂಧಿಸಿದ ಚಿತ್ರಗಳನ್ನು ಅನ್ವೇಷಿಸುತ್ತದೆ. ರಾಜಾ ರವಿವರ್ಮ ಅವರು ಮೊದಲ ಬಾರಿಗೆ ಚಿತ್ರಿಸಿದ ದ್ರೌಪದಿಯನ್ನು ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಕಾಣಬಹುದು. ರಾಜಾ ರವಿವರ್ಮ ಹಾಗೂ ಅವರು ರಚಿಸಿರುವ ಚಿತ್ರಗಳನ್ನು ಮರು ಅನ್ವೇಷಿಸುವುದೇ ಈ ಸರಣಿ ಸಂಪುಟಗಳ ಉದ್ದೇಶವಾಗಿದೆ ಎಂದು ಹೇಳಿದರು.

'ರಾಜಾ ರವಿವರ್ಮ ; ಆನ್ ಎವರ್ಲಾಸ್ಟಿಂಗ್ ಇಂಪ್ರಿಂಟ್' ಸರಣಿಯ ಪುಸ್ತಕಗಳು (ಇಂಗ್ಲಿಷ್) ದೇಶದ ಅಗ್ರಗಣ್ಯ ಕಲಾವಿದ ರವಿವರ್ಮರ ಮೂಲಕ ಭಾರತದಲ್ಲಿ ಕಲೆಯ ಪ್ರಜಾಪ್ರಭುತ್ವೀಕರಣವನ್ನು ಅನ್ವೇಷಿಸುತ್ತದೆ. ಕೃತಿಯಲ್ಲಿ ಚಿತ್ರಗಳನ್ನೇ ಪ್ರಧಾನವಾಗಿ ಕೇಂದ್ರದಲ್ಲಿರಿಸಿ ವಿಶ್ಲೇಷಿಸಲಾಗಿದೆ. ಚಿತ್ರ ಮೂಡಿಬಂದ ರೀತಿ, ಅದಕ್ಕೆ ನಡೆದ ತಯಾರಿ ಮತ್ತು ನೋಡುಗನೊಂದಿಗೆ ಅವುಗಳು ವ್ಯವಹರಿಸುವ ಬಗೆಯ ಬಗ್ಗೆ ಆದ್ಯತೆ ನೀಡಲಾಗಿದೆ. ಒಟ್ಟು 6 ಸಂಪುಟಗಳು ಇರಲಿದ್ದು, 2,142 ಪುಟಗಳು ಹಾಗೂ 2,100 ಚಿತ್ರಗಳು ಇರಲಿವೆ ಎಂದರು.

ಸರಣಿಯ ಪ್ರಥಮ ಸಂಪುಟದಲ್ಲಿ ಸಂಗ್ರಹಿಸಿರುವ ಚಿತ್ರಗಳು ಕಲಾವಿದ ರೂಪುಗೊಂಡ ಬಗೆಯನ್ನು ಅನಾವರಣಗೊಳಿಸಲಾಗಿದೆ ರವಿವರ್ಮ ತಾನು ಕಂಡಿದ್ದು ಹಾಗೂ ಈಗಾಗಲೇ ಇದ್ದ ಮಾಹಿತಿಗಳನ್ನೇ ಆಧರಿಸಿ ಚಿತ್ರಗಳನ್ನು ರಚಿಸಿದ್ದು, ಅದರಿಂದ ಆತ ಪಳಗಿದ ರೀತಿಯನ್ನು ಇದರಲ್ಲಿ ಮನಗಾಣಬಹುದು. 2ನೇ ಸಂಪುಟದಲ್ಲಿ ರವಿವರ್ಮ, ತಂತ್ರಜ್ಞಾನ ಬಳಸಿ ಚಿತ್ರಗಳನ್ನು ಜನಸಾಮಾನ್ಯರಿಗೆ ತಲುಪಿಸಿದ ಬಗೆಯನ್ನು ಕಾಣಬಹುದು. 3ನೇ ಸಂಪುಟವು ದೈವಿಕತೆಯ ದೃಶ್ಯಗಳ ಮೇಲೆ ಬೆಳಕು ಚೆಲ್ಲುತ್ತದೆ ಎಂದು ವಿವರಿಸಿದರು.

4ನೇ ಸಂಪುಟವು ರಾಮಾಯಣ ಮತ್ತು ಮಹಾಭಾರತ ಕೃತಿಯನ್ನು ಆಧರಿಸಿದ ರವಿವರ್ಮರ ಚಿತ್ರಗಳನ್ನು ಹೊಂದಿದೆ. ಮೈಸೂರು ಅರಮನೆ ಹಾಗೂ ರವಿವರ್ಮರಿಗೂ ದೊಡ್ಡ ನಂಟಿದೆ. ಪ್ರಮುಖವಾಗಿ ಅವರು ಚಿತ್ರಿಸಿದ ಮೊದಲ ದ್ರೌಪದಿ ಹಾಗೂ ಕೊನೆಯ ದ್ರೌಪದಿ ಚಿತ್ರಗಳು ಇಲ್ಲಿನ ಜಗನ್ಮೋಹನ ಅರಮನೆಯಲ್ಲಿ ಕಾಣಬಹುದು ಎಂದರು.

ಬಳಿಕ ಸಂಗೀತ ಕಛೇರಿ ನಡೆಯಿತು. ರಾಜಾ ರವಿವರ್ಮರ ವಂಶಸ್ಥ ರಾಮ ವರ್ಮ, ಸದರಿ ಸಂಪುಟದ ವಿನ್ಯಾಸಕ ಅಶ್ವತ್ಥ್ ಮಾತನಾಡಿದರು. ಪ್ರತಿಷ್ಠಾನದ ಗೌರವ ಕಾರ್ಯದರ್ಶಿ ರೆಜಿನಾಲ್ಡ್ ವೆಸ್ಲಿ ವೇದಿಕೆಯಲ್ಲಿದ್ದರು. ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್. ಸುಬ್ರಹ್ಮಣ್ಯ ಸೇರಿದಂತೆ ಹಲವು ಗಣ್ಯರು ಹಾಜರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಂಗಾತ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಲ್ಯಾಂಡ್‌ಲಾರ್ಡ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಬಾರ್ಡರ್–2 (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
45 ಫೇಸ್ ದಿ ಇಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲ್ಯಾಂಡ್ ಲಾರ್ಡ್ (ಕ)	4 ಪ್ರದರ್ಶನಗಳು
ರಾಜಕಮಲ್	
ದ್ರೌಪದಿ–2 (ತ)	4 ಪ್ರದರ್ಶನಗಳು
ಸಂಗಂ	
ಕಲ್ಟ್ (ಕ)	4 ಪ್ರದರ್ಶನಗಳು
ಲಿಡೋ	
ಡೆವಿಲ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಮಾವುತ (ಕ)	4 ಪ್ರದರ್ಶನಗಳು

ಉಚಿತ ಕಣ್ಣಿನ ತಪಾಸಣೆ



ಮೈಸೂರಿನ ಡಾ.ಪಿನ್ನಪಾಟ ಪದ್ಮನಾಭನ್ ಫೌಂಡೇಷನ್ ಚಾರಿಟಬಲ್ ಟ್ರಸ್ಟ್ ವತಿಯಿಂದ ಅಶೋಕ ರಸ್ತೆಯ ಶ್ರೀ ಕನ್ನಿಕಾ ಪರಮೇಶ್ವರಿ ದೇವಸ್ಥಾನದಲ್ಲಿ ಶುಕ್ರವಾರ ಉಚಿತ ಆರೋಗ್ಯ ಹಾಗೂ ಕಣ್ಣಿನ ತಪಾಸಣಾ ಶಿಬಿರ ಆಯೋಜಿಸಲಾಗಿತ್ತು. ಡಾ.ಪದ್ಮನಾಭನ್, ನಾಗರಾಜ್ ಗುಪ್ತಾ, ಹೆಚ್.ಎಸ್.ಶೀಲಾ, ಕಾರ್ತಿಕ್, ಅನ್ನಪೂರ್ಣ ಕಣ್ಣಿನ ಆಸ್ಪತ್ರೆ ಹಾಗೂ ನಾರಾಯಣ ಹೃದಯಾಲಯದ ವೈದ್ಯರು ಹಾಗೂ ಸಿಬ್ಬಂದಿ ಭಾಗವಹಿಸಿದ್ದರು.

ಚಿನ್ನದ ಮೇಲೆ ಅತಿ ಕಡಿಮೆ ಬಡ್ಡಿದರದಲ್ಲಿ ಸಾಲ ನೀಡುವುದಾಗಿ ವಂಚಿಸಿದ ಆರೋಪ

ಚಿನ್ನದಂಗಡಿ ಮಾಲೀಕ ಟಿ.ಯೋಗೇಶ್ ಬಂಧನ



ಯೋಗೇಶ್

ಮೈಸೂರು,ಜ.31(ಪಿಎಂ)–ಅತೀ ಕಡಿಮೆ ಬಡ್ಡಿದರದಲ್ಲಿ ಚಿನ್ನಾಭರಣದ ಮೇಲೆ ಹೆಚ್ಚು ಸಾಲ ನೀಡುವುದಾಗಿ ನಂಬಿಸಿ ವಂಚಿಸಿದ್ದ ಆರೋಪದಡಿ ಚಿನ್ನದಂಗಡಿಯ ಮಾಲೀಕನನ್ನು ವಿಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮೈಸೂರಿನ ವಿಜಯನಗರ 2ನೇ ಹಂತದ ತ್ರಿನೇತ್ರ ಸರ್ಕಲ್ ಬಳಿಯ ಸ್ಟಾರ್ ಗೋಲ್ಡ್ ಕಂಪನಿ ಹೆಸರಿನ ಚಿನ್ನದಂಗಡಿ ಮಾಲೀಕ ಟಿ.ಯೋಗೇಶ್ (30) ಬಂಧಿತ ಆರೋಪಿ.

ಸದರಿ ಹೆಸರಿನಲ್ಲಿ ಚಿನ್ನದಂಗಡಿ ತೆರೆದು ಅತೀ ಕಡಿಮೆ ಬಡ್ಡಿದರದಲ್ಲಿ ಚಿನ್ನದ ಮೇಲೆ ಅತೀ ಹೆಚ್ಚು ಸಾಲ ಕೊಡುವುದಾಗಿ ಗ್ರಾಹಕರನ್ನು ನಂಬಿಸಿದ್ದ ಈತ, ಗ್ರಾಹಕರು ಅಡಮಾನ ಇರಿಸಿದ ಚಿನ್ನವನ್ನು ಅಕ್ರಮವಾಗಿ ಕರಗಿಸಿ ಒಳಗೊಳಗೇ ಮಾರಾಟ ಮಾಡಿ ಸುಮಾರು 15 ಗ್ರಾಹಕರಿಗೆ ವಂಚಿಸಿದ್ದ. ಆ ಮೂಲಕ ಸುಮಾರು 850 ಗ್ರಾಂ ಚಿನ್ನ ವನ್ನು ಲಾಪಟಾಯಿಸಿ ಸುಮಾರು 1.5 ಕೋಟಿ ರೂ. ಲಾಭ ಮಾಡಿ ಕೊಂಡು ತಲೆ ಮರೆಸಿಕೊಂಡಿದ್ದ. ಈ ಸಂಬಂಧ ಟಿ.ಯೋಗೇಶ್ ವಿರುದ್ಧ ಪ್ರಕರಣ ದಾಖಲಾಗಿತ್ತು. ಆರೋಪಿಯ ಪತ್ತೆಗೆ ಪೊಲೀಸರು ಜಾಲ ಬೀಸಿದ್ದರು. ಪ್ರಕರಣ ದಾಖಲಾದ ಹಿನ್ನೆಲೆಯಲ್ಲಿ ಆರೋಪಿ ಯೋಗೇಶ್‌ಗೆ ಹಲವು ಬಾರಿ ತನಿಖೆಗೆ ಹಾಜರಾಗಲು ನೋಟೀಸ್ ನೀಡಿದ್ದರೂ ಸಹಕರಿಸದೇ ತಲೆ ಮರೆಸಿಕೊಂಡಿದ್ದ. ಶುಕ್ರವಾರ ಕಾರ್ಯಾಚರಣೆ ನಡೆಸಿ ಯೋಗೇಶ್‌ನನ್ನು ಬಂಧಿಸಿದ್ದು, ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿ, ಆರೋಪಿಯನ್ನು ನ್ಯಾಯಾಲಯವು 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಳಪಡಿಸಿ ಆದೇಶಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಚಾಮುಂಡಿಬೆಟ್ಟದ ತಪ್ಪಲಲ್ಲಿ ಫ್ಲಾಗಿಂಗ್ ಅಭಿಯಾನದ ಮೂಲಕ ಸ್ವಚ್ಛತೆ ಸಂದೇಶ



ಮೈಸೂರು ಮಹಾನಗರ ಪಾಲಿಕೆ ಸ್ವಚ್ಛ ಸರ್ವೇಕ್ಷಣೆ ಅಂಗವಾಗಿ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಆಯೋಜಿಸಿದ್ದ ಸ್ವಚ್ಛತಾ ಅಭಿಯಾನದಲ್ಲಿ ಪಾಲ್ಗೊಂಡಿದ್ದ ಸಾರ್ವಜನಿಕರು.

ಮೈಸೂರು, ಜ.31(ಎಂಟಿವೈ)– ದೇಶದಲ್ಲಿಯೇ ಮೈಸೂರು ನಗರವನ್ನು ಸ್ವಚ್ಛತೆಯಲ್ಲಿ ಅಗ್ರಸ್ಥಾನಕ್ಕೇರಿಸುವ ನಿಟ್ಟಿನಲ್ಲಿ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಮಹಾನಗರ ಪಾಲಿಕೆ ವತಿಯಿಂದ ಆಯೋಜಿಸಿದ್ದ ಫ್ಲಾಗಿಂಗ್ ಅಭಿಯಾನದಲ್ಲಿ ಹಲವು ಮಂದಿ ಪಾಲ್ಗೊಂಡು ಒಣ ಕಸ ಸಂಗ್ರಹಿಸುವ ಮೂಲಕ ಗಮನ ಸೆಳೆದರು.

ಸ್ವಚ್ಛ ಸರ್ವೇಕ್ಷಣ್–2.0 ಅಭಿಯಾನದ ಅಂಗವಾಗಿ ಮೈಸೂರು ಮಹಾನಗರ ಪಾಲಿಕೆ ಆಯೋಜಿಸಿದ್ದ ಒಣ ಕಸ ಸಂಗ್ರಹಿಸುವ ಸ್ಪರ್ಧಾ ಅಭಿಯಾನದಲ್ಲಿ ವಿವಿಧ ಕಾಲೇಜುಗಳ ವಿದ್ಯಾರ್ಥಿಗಳು, ಎನ್‌ಸಿಸಿ ಕೆಡೆಟ್ಸ್, ವಿವಿಧ ಮಹಿಳಾ ಸಂಘಟನೆಗಳ ಸದಸ್ಯರು, ಸಾರ್ವಜನಿಕರು ಪಾಲ್ಗೊಂಡು ಸ್ವಚ್ಛ ಸರ್ವೇಕ್ಷಣೆಯ ಯಶಸ್ಸಿಗೆ ಕೈಜೋಡಿಸಿದರು.

600 ಕೆ.ಜಿ ಕಸ ಸಂಗ್ರಹ: ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿ ನಡೆದ ಶ್ರಮದಾನದಲ್ಲಿ ಫೀನಿಕ್ಸ್ ಇಂಟರ್ ನ್ಯಾಷನಲ್ ಅಕಾಡೆಮಿಯ ವಿದ್ಯಾರ್ಥಿಗಳು, ಜೆಎಸ್‌ಎಸ್ ಕಾಲೇಜಿನ ಎನ್‌ಎಸ್‌ಎಸ್ ಮತ್ತು ಎನ್‌ಸಿಸಿ ವಿದ್ಯಾರ್ಥಿಗಳು ಸೇರಿದಂತೆ ಸುಮಾರು 200ಕ್ಕೂ ಹೆಚ್ಚು ಮಂದಿ ಪಾಲ್ಗೊಂಡಿದ್ದರು. ಈ ಬೃಹತ್ ಕಾರ್ಯಾಚರಣೆಯ ಸಮಯದಲ್ಲಿ ಸುಮಾರು 600 ಕೆಜಿ ಒಣ ಕಸವನ್ನು ಸಂಗ್ರಹಿಸಿ ವಿಲೇವಾರಿ ಮಾಡಲಾಯಿತು.

ಬಹುಮಾನ ವಿತರಣೆ: ಅಭಿಯಾನದ ಅಂಗವಾಗಿ ನಡೆದ ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಲಾಯಿತು. ಸ್ವಯಂಸೇವಕರ ತಂಡ ಪ್ರಥಮ ಬಹುಮಾನ ತನ್ನದಾಗಿಸಿಕೊಂಡರೆ, ಫೀನಿಕ್ಸ್ ಇಂಟರ್ ನ್ಯಾಷನಲ್ ಅಕಾಡೆಮಿ ವಿದ್ಯಾರ್ಥಿಗಳಿಗೆ ದ್ವಿತೀಯ ಬಹುಮಾನ, ಜೆಎಸ್‌ಎಸ್ ತೃತೀಯ ಬಹುಮಾನ ಪಡೆದರು.

ಈ ಸಂದರ್ಭದಲ್ಲಿ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್, ಪ್ರೊಬೇಷನರಿ ಐಎಎಸ್ ಅಧಿಕಾರಿ ಸಮೀರ್ ಪ್ರಕಾಶ್ ಕೋಡೆ, ವಲಯ ಆಯುಕ್ತ ರಮೇಶ್ ಎ, ಸ್ವಚ್ಛ ಭಾರತ ಅಭಿಯಾನದ ನೋಡಲ್ ಅಧಿಕಾರಿ ಹಾಗೂ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಕೆ.ಎನ್. ಮೃತ್ಯುಂಜಯ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಮೀನಾಕ್ಷಿ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

ಕುಷ್ಟರೋಗ ಜಾಗೃತಿ ಕಾರ್ಯಕ್ರಮ



ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಚೇರಿಯ ಸಹಯೋಗದಲ್ಲಿ ತಿ.ನರಸೀಪುರ ತಾಲೂಕಿನ ತಲಕಾಡು ಸಮುದಾಯ ಆರೋಗ್ಯ ಕೇಂದ್ರದಲ್ಲಿ ಜಿಲ್ಲಾ ಕುಷ್ಟರೋಗ ನಿರ್ಮೂಲನೆ ಜಾಗೃತಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು ಕಾರ್ಯಕ್ರಮದಲ್ಲಿ ಸಾರ್ವಜನಿಕರು, ಸಮುದಾಯದ ಅಧಿಕಾರಿಗಳು, ಆಶಾ ಕಾರ್ಯಕರ್ತರಿಗೆ ಸ್ಪರ್ಶ ಕುಷ್ಟರೋಗ ಆಂದೋಲನ ಬಗ್ಗೆ ಅರಿವು ಮೂಡಿಸಿದರು. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಜಿಲ್ಲಾ ಸರ್ವೇಕ್ಷಣಾ ಅಧಿಕಾರಿ ಡಾ. ನಾಗರಾಜು, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ಮುನೀಂದ್ರಮ್ಮ, ಆಡಳಿತ ವೈದ್ಯಾಧಿಕಾರಿ ಡಾ. ದೇವರಾಜು, ಕಾವೇರಿಪುರದ ವೈದಾಧಿಕಾರಿ ಡಾ. ಭಾರತಿ ಮತ್ತು ಸಿಎಚ್‌ಓ ಮತ್ತು ಎಲ್‌ಟಿಓ ಎ.ಆದರ್ಶ್ ಉಪಸ್ಥಿತರಿದ್ದರು.

ಮಕ್ಕಳಿಗೆ ವಿದ್ಯೆಯೊಂದಿಗೆ ವಿನಯ ಕಲಿಸಬೇಕು

ಪೋಷಕರಿಗೆ ವನವಾಸಿ ಕಲ್ಯಾಣ ಕರ್ನಾಟಕ ಪ್ರಾಂತದ ಸಂಘಟನಾ ಕಾರ್ಯದರ್ಶಿ ಮಣಿವಣ್ಣನ್ ಕಿವಿಮಾತು



ಇಮ್ಮಡಿ ಗುರುಲಿಂಗ ಸ್ವಾಮೀಜಿ ಹಿಂದು ಸಮಾಜೋತ್ಸವ ಕಾರ್ಯಕ್ರಮ ಉದ್ಘಾಟಿಸಿದರು.

ಮೈಸೂರು, ಜ.31(ವಿವಿಹೆಚ್)– ನಮ್ಮ ಮಕ್ಕಳಿಗೆ ವಿದ್ಯೆಯೊಂದಿಗೆ ವಿನಯ ಕಲಿಸಬೇಕು. ವಿನಯವಿದ್ದರೆ ಇಡೀ ಜಗತ್ತನ್ನೇ ಆಳಬಹುದು. ಎಂದು ವನವಾಸಿ ಕಲ್ಯಾಣ ಕರ್ನಾಟಕ ಪ್ರಾಂತದ ಸಂಘಟನಾ ಕಾರ್ಯದರ್ಶಿ ಮಣಿವಣ್ಣನ್ ಅಭಿಪ್ರಾಯಪಟ್ಟರು.

ನಗರದ ಕೃಷ್ಣಮೂರ್ತಿ ಪುರಂನ ಬಿಎಸ್‌ಎಸ್ ವಿದ್ಯೋದಯ ಆವರಣದಲ್ಲಿ ಹಿಂದು ಸಮಾಜೋತ್ಸವ ಸಮಿತಿ ವತಿಯಿಂದ ಶನಿವಾರ ಆಯೋಜಿಸಲಾಗಿದ್ದ 'ಹಿಂದು ಸಮಾಜೋತ್ಸವ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಇಂದಿನ ಯುವ ಪೀಳಿಗೆ ಮೊಬೈಲ್, ಸಾಮಾಜಿಕ ಜಾಲತಾಣದ ಗೀಳಿಗೆ ಬಲಿಯಾಗಿದ್ದಾರೆ. ಆ ಮೂಲಕ ನಮ್ಮ ಹಿಂದೂ ಸಮಾಜದ ಶಾಸ್ತ್ರ ಪರಂಪರೆಯನ್ನು ಮರೆಯುತ್ತಿದ್ದಾರೆ. ಆನ್‌ಲೈನ್ ಗೇಮ್‌ಗಳ ವ್ಯಾಮೋಹದಿಂ ದೇಸಿ ಕ್ರೀಡೆಗಳನ್ನು ಕಡೆಗಣಿಸುತ್ತಿದ್ದಾರೆ ಎಂದು ಬೇಸರಿಸಿದರು.

ಯುವ ಪೀಳಿಗೆ ಗಂಡು–ಹೆಣ್ಣು ಭೇದ ಮರೆತು ಸದೃಢ ಹಿಂದೂ ಸಮಾಜ ಕಟ್ಟುವಲ್ಲಿ ಶ್ರಮಿಸಬೇಕು. ಹಿಂದೂ ಎಂದು ಎಲ್ಲರೂ ಹೇಳಿಕೊಂಡರೂ ಅವರಲ್ಲಿನ ಮೂಲ ಹಿಂದುತ್ವ ಉದ್ದೇಶವನ್ನು ಹೊರ ಹಾಕುವ ಕೆಲಸ ಇಂದಿಲ್ಲಿ ಮಾಡಬೇಕಿದೆ. ಜನ ಸೇರಿಸುವುದು ಮಾತ್ರ ಶಕ್ತಿ ಪ್ರದರ್ಶನ ಕೆಲಸವಲ್ಲ. ಪ್ರತಿಯೊಬ್ಬರಲ್ಲಿಯೂ ಹಿಂದೂ ಸಮಾಜದ ಅಸ್ತಿತ್ವದ ಉಳಿವಿಗೆ ಹೋರಾಡುವ ಮನೋಭಾವ ಬೆಳೆಸುವುದು ಬಹಳ ಮುಖ್ಯ ಎಂದರು.

ಸಂಘಟನೆಗೆ ಹೆಚ್ಚಿನ ಸಮಯ ಕೊಡಬೇಕು. ನೆರೆಹೊರೆಯವರನ್ನು ಸಂಘಟನೆಯಲ್ಲಿ ತೊಡಗಿಸುವಂತೆ ಪ್ರೇರೇಪಿಸಬೇಕು. ಎಲ್ಲರೂ ದುಡ್ಡು ಮಾಡುವಲ್ಲಿ ನಿರತರಾಗಿದ್ದಾರೆ. ವೇದಗಳಲ್ಲಿ ಹೇಳಿರುವಂತೆ ನಾಳೆಯೇ ನಿನ್ನ ಸಾವಿದೆ ಎಂದು ಧರ್ಮಕ್ಕಾಗಿ ದುಡಿಮೆ ಮಾಡು ಎಂದು ಹೇಳುವುದನ್ನು ನಾವು ಕಾಣಬೇಕು. ವ್ಯಾಮೋಹಕ್ಕಾಗಿ ದುಡಿಯದೇ ನಮ್ಮ ಅಸ್ಮಿತೆಗಾಗಿ ದುಡಿಯಬೇಕು ಎಂದರು.

ಇದಕ್ಕೂ ಮೊದಲು ಕೆಜಿಕೊಪ್ಪಲಿನ ಶ್ರೀರಾಮ ಮಂದಿರ ಆವರಣದಿಂದ ಬಿಎಸ್‌ಎಸ್ ವಿದ್ಯೋದಯವರೆಗೆ ತೆರೆದ ವಾಹನದಲ್ಲಿ ಭಾರತಾಂಬೆ ಭಾವಚಿತ್ರ ಇರಿಸಿ ಹಿಂದು ಸಮಾಜೋತ್ಸವ ಮೆರವಣಿಗೆ ಮಾಡಲಾಯಿತು.

ಕುದೇರು ಮಠದ ಇಮ್ಮಡಿ ಗುರುಲಿಂಗ ಸ್ವಾಮೀಜಿ ದಿವ್ಯ ಸಾನಿಧ್ಯ ವಹಿಸಿದ್ದರು. ಮಾ.ವೆಂಕಟರಾವ್, ಸಂಚಾಲಕ ವಿಶ್ವನಾಥ್, ಕಾರ್ಯದರ್ಶಿ ರಾಮಚಂದ್ರ, ರಘು ಶೆಟ್ಟಿ ಉಪಸ್ಥಿತರಿದ್ದರು.

ಮೈಸೂರಿನ ಬಹುತೇಕ ರಸ್ತೆಗಳು ಧೂಳುಮಯ

ನಿತ್ಯವೂ ಕೇಬಲ್, ನೀರಿನ ಪೈಪ್ ಅಳವಡಿಕೆಗೆ ರಸ್ತೆ ಅಗೆದು ಹದಗೆಡಿಸುವ ಕಾರ್ಯವಾಗುತ್ತಿದೆ; ಸಾರ್ವಜನಿಕರ ಆಕ್ರೋಶ



ವಾಹನಗಳನ್ನು ಮಣ್ಣಿನ ದಿಬ್ಬದ ಮೇಲೆ ನಿಲ್ಲಿಸಿರುವುದನ್ನು ಕಾಣಬಹುದು

ಮೈಸೂರು, ಜ.31–ಮೈಸೂರಿನ ವಿವಿಧ ಬಡಾವಣೆಗಳಲ್ಲಿ ಉಂಡುವಾಡಿ ಕುಡಿಯುವ ನೀರಿನ ಯೋಜನೆ ಕಾಮಗಾರಿ ಮಾಡುವ ಸಂದರ್ಭದಲ್ಲಿ ರಸ್ತೆಗಳನ್ನು ಅಗೆದಿರುವುದರಿಂದ ಸಾರ್ವಜನಿಕರು ಈ ರಸ್ತೆಗಳಲ್ಲಿ ಸಂಚರಿಸಲು ಪರದಾಡುವ ಸ್ಥಿತಿ ನಿರ್ಮಾಣವಾಗಿದೆ.

ಮೈಸೂರಿನ ಹಲವಾರು ಬಡಾವಣೆಗಳಿಗೆ ಶಾಶ್ವತ ಕುಡಿಯುವ ನೀರಿನ ಪೂರೈಕೆ ಯೋಜನೆಯನ್ನು 2008ರಲ್ಲಿ ಜಾರಿಗೆ ತಂದಿದ್ದು, ಇಂದಿಗೂ ಅದರ ಕಾಮಗಾರಿ ನಡೆಯುತ್ತಲೇ ಇದೆ. ಈ ಕಾಮಗಾರಿಯಿಂದ ಹಲವು ಬಡಾವಣೆಗಳಲ್ಲಿ ರಸ್ತೆಗಳನ್ನು ಅಗೆದು ಹದಗೆಡಿಸಿದ್ದು, ಅದನ್ನು ಸರಿಪಡಿಸುವ ಕಾರ್ಯವಾಗುತ್ತಿಲ್ಲ. ಇದರಿಂದ ಸಾರ್ವಜನಿಕರು, ಸ್ಥಳೀಯರು ನಿತ್ಯವು ವ್ಯಥೆ ಅನುಭವಿಸುವಂತಾಗಿದೆ. ಇಂತಹದ್ದೇ ಸಮಸ್ಯೆ ನಗರದ ಹಿನಕಲ್ ಭಾಗದ ವರ್ತುಲ ರಸ್ತೆಯಲ್ಲಿರುವ, ವಿಜಯನಗರ ಎಫ್ ಬ್ಲಾಕ್‌ಗೆ ಸೇರ್ಪಡೆಯಾಗುವ ಆಶ್ರಮ ರಸ್ತೆಯಲ್ಲಿ ಹಾಗೂ ಅಕ್ಕಪಕ್ಕದ ರಸ್ತೆಗಳಲ್ಲಿ ರಸ್ತೆಗಳು ಹದಗೆಟ್ಟು ಜನರು ತೀವ್ರ ಸಮಸ್ಯೆ ಎದುರಿಸುವಂತಾಗಿದೆ. ಇದರಿಂದಾಗಿ ನಿತ್ಯವು ಜನರು ಅಧಿಕಾರಿಗಳಿಗೆ, ಸಂಬಂಧಪಟ್ಟವರಿಗೆ ಹಿಡಿ ಶಾಪಹಾಕುತ್ತಾ ಜೀವನ ತಳ್ಳುತಿದ್ದಾರೆ.

ಕಳೆದ ಐದಾರು ತಿಂಗಳಿಂದ ರಸ್ತೆ ಸಮಸ್ಯೆ ಎದುರಾಗಿದ್ದು, ಕಾಮಗಾರಿ ನಡೆಸಿ ಗುಂಡಿಯನ್ನು ಸರಿಯಾಗಿ ಮುಚ್ಚಲಾಗಿಲ್ಲ. ಕೆಲವೆಡೆ ಎತ್ತರಕ್ಕೆ ಮಣ್ಣು ಗುಡ್ಡೆ ಮಾಡಿದರೆ, ಇನ್ನೊಂದೆಡೆ ಗುಂಡಿಮಯವಾಗಿವೆ. ಇದರಿಂದ ವಾಹನಗಳ ಸಂಚಾರಕ್ಕೆ ವಿಪರೀತ ತೊಂದರೆಯಾಗುತ್ತಿದ್ದು, ಮನೆಗಳ ಮುಂದೆ ವಾಹನಗಳ ನಿಲುಗಡೆಗೂ ತೊಂದರೆಯಾಗುತ್ತಿದೆ. ಅಲ್ಲದೇ ರಸ್ತೆ ತುಂಬೆಲ್ಲ ಮಣ್ಣು ತುಂಬಿರುವ ಕಾರಣ ಚೆಂದದ ರಸ್ತೆಗಳು ಮಣ್ಣಿನಿಂದ ಆವೃತವಾಗಿ ವಿಪರೀತ ಧೂಳುಮಯವಾಗಿ ನಿವಾಸಿಗಳು ಇದರಿಂದ ಹೈರಾಣಾಗುವಂತಾಗುತ್ತಿದೆ ಎಂದು ಸ್ಥಳೀಯರು ಅಳಲು ತೋಡಿಕೊಳ್ಳುತಿದ್ದಾರೆ.

ಉಂಡುವಾಡಿ ಕುಡಿಯುವ ನೀರಿನ ಸರಬರಾಜು ಯೋಜನೆ ಕಾಮಗಾರಿಗೆ ರಸ್ತೆ ಅಗೆದು ಕಾಮಗಾರಿ ಪೂರ್ಣಗೊಂಡು ತಿಂಗಳುಗಳೇ ಕಳೆದರೂ, ರಸ್ತೆ ಸರಿಪಡಿಸುವ ಕಾರ್ಯವಾಗಿಲ್ಲ. ಅಧಿಕಾರಿಗಳು, ಯೋಜನೆಗೆ ಸಂಬಂಧಪಟ್ಟವರು, ಜನಪ್ರತಿನಿಧಿಗಳಿಗೆ ಸಮಸ್ಯೆ ತಿಳಿಸಿ, ರಸ್ತೆ ಸರಿಪಡಿಸಲು ಮನವಿ ಮಾಡಿದರೂ ಯಾರು ಸ್ಪಂದಿಸುತ್ತಿಲ್ಲ ಎಂದು ಸ್ಥಳೀಯರು ಆಕ್ರೋಶ ಹೊರಹಾಕಿದ್ದಾರೆ.

ಈ ಭಾಗದಲ್ಲಿ ಹಲವಾರು ಮನೆ, ಶಾಲೆಗಳು ಇದ್ದು, ರಸ್ತೆ ಧೂಳುಮಯವಾಗಿರುವುದರಿಂದ ನಿತ್ಯವೂ ಮಕ್ಕಳು ಶಾಲೆಗೆ, ಮನೆಗೂ ಓಡಾಡಲು ವಿಪರೀತ ತೊಂದರೆ ಅನುಭವಿಸುತ್ತಿದ್ದಾರೆ. ಧೂಳಿನಿಂದ ಬೇಸತ್ತ ನಿವಾಸಿಗಳು ಮನೆಯ ಮುಂದೆ ಹಾಗೂ ಶಾಲಾ ಆಡಳಿತ ಮಂಡಳಿ ಶಾಲೆಯ ಸುತ್ತಲು ಧೂಳು ಬಾರದಂತೆ ಮಣ್ಣಿನ ಮೇಲೆ ನಿತ್ಯವು ನೀರು ಹಾಕುವ ಫಜೀತಿಗೆ ಸಿಲುಕಿದ್ದಾರೆ. ಕೂಡಲೇ ರಸ್ತೆಯನ್ನು ಸಂಬಂಧಪಟ್ಟ ಅಧಿಕಾರಿಗಳು ಎಚ್ಚರಗೊಂಡು ರಸ್ತೆ ಸರಿಪಡಿಸಿ, ಮಕ್ಕಳಿಗೆ ಸೂಕ್ತ ವ್ಯವಸ್ಥೆ ಕಲ್ಪಿಸಿಕೊಡಬೇಕಿದೆ. ರಸ್ತೆಗಳಿಂದ ಬರುವ ಧೂಳು ಹಲವಾರು ರೋಗಗಳಿಗೆ ಆಹ್ವಾನ ನೀಡುತ್ತಿದೆ ಎಂದು ಸ್ಥಳೀಯರು ದೂರಿದ್ದಾರೆ.

ಸೈಬರ್ ವಂಚನೆ ಐಟಿ ಕಂಪನಿಗಳಿಗೆ ಮಾತ್ರವೇ ಸೀಮಿತವಾಗಿಲ್ಲ, ಜನರೂ ಬಲಿಪಶುಗಳಾಗುತ್ತಿದ್ದಾರೆ

ಸಾರ್ವಜನಿಕ ಜಾಗೃತಿ ಅಭಿಯಾನ ಅನಿವಾರ್ಯ: ಅಗಮ್ಯ ಸೈಬರ್ ಟೆಕ್‌ನ ಸಿಇಓ ಅಕ್ಷಯ್ ನಾಗರಾಜ್ ನಾಯ್ಕ್ ಪ್ರತಿಪಾದನೆ



ಅಗಮ್ಯ ಸೈಬರ್ ಟೆಕ್‌ನ ಸಿಇಓ ಅಕ್ಷಯ್ ನಾಗರಾಜ್ ನಾಯ್ಕ್ ಸೈಬರ್ ವಂಚನೆ ಮತ್ತು ಸೈಬರ್ ಅಪರಾಧಗಳ ಕುರಿತು ಸಾರ್ವಜನಿಕ ಜಾಗೃತಿ ಅಭಿಯಾನ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮೈಸೂರು, ಜ.31(ವಿವಿಹೆಚ್)– ಸೈಬರ್ ವಂಚನೆ ಎಂಬುದು ಭೇದಿಸಲಾಗದ ಬಹುದೊಡ್ಡ ಜಾಲವಾಗಿದೆ. ಐಟಿ ಕಂಪೆನಿಗಳಿಗೆ ಮಾತ್ರ ಸೈಬರ್ ವಂಚನೆ ಆಗುತ್ತದೆ ಎಂದು ಭಾವಿಸಿದ್ದ ಜನರ ಮೇಲೆ ಈಗ ಹೆಚ್ಚಿನ ದಾಳಿಗಳು ನಡೆಯುತ್ತಿವೆ ಎಂದು ಅಗಮ್ಯ ಸೈಬರ್ ಟೆಕ್‌ನ ಸಿಇಓ ಹಾಗೂ ಸಹ ಸಂಸ್ಥಾಪಕರೂ ಆದ ಅಕ್ಷಯ್ ನಾಗರಾಜ್ ನಾಯ್ಕ್ ತಿಳಿಸಿದರು.

ನಗರದ ಜೆಎಲ್‌ಬಿ ರಸ್ತೆಯಲ್ಲಿರುವ ದಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಸಭಾಂಗಣದಲ್ಲಿ ಎಟಿಎಂಇ ಇಂಜಿನಿಯರಿಂಗ್ ಕಾಲೇಜಿನ ಸೈಬರ್ ಸೆಕ್ಯೂರಿಟಿ ವಿಭಾಗ ಮತ್ತು ಕಂಪ್ಯೂಟರ್ ಅಪ್ಲಿಕೇಷನ್ ವಿಭಾಗ, ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಂಯುಕ್ತಾಶ್ರಯದಲ್ಲಿ ಸೈಬರ್ ಸುರಕ್ಷಾ ಅಭಿಯಾನದಡಿ ಶನಿವಾರ ಆಯೋಜಿಸಲಾಗಿದ್ದ ಸೈಬರ್ ವಂಚನೆ ಮತ್ತು ಸೈಬರ್ ಅಪರಾಧಗಳ ಕುರಿತು ಸಾರ್ವಜನಿಕ ಜಾಗೃತಿ ಅಭಿಯಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ರಾಜ್ಯ ಹಾಗೂ ದೇಶದಲ್ಲಿ ಸೈಬರ್ ಅಪರಾಧ ದಿನೇ–ದಿನೇ ಏರಿಕೆಯಾಗುತ್ತಿದೆ. ಅಂಕಿ ಅಂಶಗಳ ಪ್ರಕಾರ ದೇಶದ ಪ್ರತಿ ಮೂರನೇ ವ್ಯಕ್ತಿ ಒಂದಲ್ಲ ಒಂದು ರೀತಿಯಲ್ಲಿ ಸೈಬರ್ ವಂಚನೆಗೆ ಒಳಗಾಗುತ್ತಿದ್ದಾನೆ. ಸೈಬರ್ ವಂಚನೆಯಿಂದ ದೂರ ಉಳಿಯಬೇಕಿದ್ದರೆ ಸೋಶಿಯಲ್ ಮೀಡಿಯಾದಲ್ಲಿ ವೈಯಕ್ತಿಕ ಮಾಹಿತಿಯನ್ನು ಹಂಚಿಕೊಳ್ಳುವುದನ್ನು ನಿಲ್ಲಿಸಬೇಕು ಎಂದು ಸಲಹೆ ನೀಡಿದರು.

ವಂಚಕರು ಲೋನ್ ಆಪ್, ಎಪಿಕೆ ಫೈಲ್, ಎಸ್‌ಬಿಐ ರಿವಾರ್ಡ್ ಪಾಯಿಂಟ್ಸ್, ಕೆವೈಸಿ ಅಪ್‌ಡೇಟ್ ಹೆಸರಿನಲ್ಲಿ ಸಾರ್ವಜನಿಕರಿಗೆ ಕರೆ ಮಾಡಿ, ಅವರಿಂದ ಒಟಿಪಿ ಪಡೆದುಕೊಂಡು ಬ್ಯಾಂಕ್ ಖಾತೆಯಿಂದ ಹಣ ದೋಚುತ್ತಿದ್ದರು. ವಂಚಕರು ಅಮಾಯಕ ಜನರನ್ನು ಬೆದರಿಸಿ ಹಣ ಕೀಳುತ್ತಿದ್ದಾರೆ ಎಂದು ತಿಳಿಸಿದರು.

ಮೊದಲು ಐಟಿ ಕಂಪೆನಿಗಳ ಮೇಲೆ ಸೈಬರ್ ದಾಳಿಗಳಾಗುತ್ತಿವೆ ಎಂದು ಭಾವಿಸಲಾಗುತ್ತಿತ್ತು. ಈಗ ಮೊಬೈಲ್ ಬಳಕೆಯಲ್ಲಿ ಎಲ್ಲವೂ ಡಿಜಿಟಲ್ ಮಯವಾಗಿದ್ದು, ಸಾರ್ವಜನಿಕರಿಗೆ ದಾಳ ಹಾಕಿ ವಂಚಿಸಲಾಗುತ್ತಿದೆ ಎಂದು ವಿಷಾಧಿಸಿದರು.

ಡಿಜಿಟಲ್ ಅರೆಸ್ಟ್: ಡಿಜಿಟಲ್ ಹೆಸರಲ್ಲಿ ಹೊಸ ವಂಚನೆ ಪ್ರಕರಣಗಳು ನಡೆಯುತ್ತಿವೆ. ಮನೆಯಲ್ಲಿಯೇ ಬಂಧಿಸುವುದಾಗಿ, ಹೇಳಿ ಬೆದರಿಸಿ ವಂಚನೆ ನಡೆಸಲಾಗುತ್ತದೆ. ವಂಚಕರು ಸರ್ಕಾರದ ವೆಬ್‌ಸೈಟ್‌ಗಳೆಂದು ನಕಲಿ ವೆಬ್‌ಸೈಟ್‌ಗಳಿಗೆ ಹಣ ಹಾಕುವಂತೆ ಸೂಚನೆ ನೀಡುತ್ತಾರೆ. ಕಾನೂನು ಜಾರಿ ಅಥವಾ ಸರ್ಕಾರಿ ಅಧಿಕಾರಿಗಳ ಸೋಗಿನಲ್ಲಿ ವಂಚನೆ ನಡೆಸುತ್ತಾರೆ. ಇಂತಹ ವಿಚಾರಗಳ ಬಗ್ಗೆ ಎಚ್ಚರವಹಿಸಬೇಕು ಎಂದು ಸಲಹೆ ನೀಡಿದರು.

1930/112 ಗೆ ಕರೆ ಮಾಡಿ: ಡಿಜಿಟಲ್ ಅರೆಸ್ಟ್, ಅಶ್ಲೀಲ ವಿಡಿಯೋ ರವಾನೆ, ಪೊಲೀಸ್, ಇ.ಡಿ ಸೋಗಿನಲ್ಲಿ ಹೆದರಿಸುವಂತೆ ಕಂಡು ಬಂದಲ್ಲಿ 1930 ಅಥವಾ 112ಗೆ ಕರೆ ಮಾಡಬೇಕು. ಇದರಿಂದಾಗಿ ಕಳೆದುಕೊಂಡ ಹಣವನ್ನು 24 ಗಂಟೆಗಳ ಒಳಗಾಗಿ ಮರಳಿ ಹಣ ಪಡೆಯಬಹುದಾಗಿದೆ. ಇಲ್ಲವಾದಲ್ಲಿ ಹತ್ತಿರದ ಪೊಲೀಸ್ ಇಲಾಖೆಗೆ ತಕ್ಷಣವೇ ಮಾಹಿತಿ ನೀಡಬೇಕು ಎಂದರು.

ಐಇಐ ಅಧ್ಯಕ್ಷ ಎಚ್.ಎಸ್.ಸುರೇಶ್ ಬಾಬು, ಎಟಿಎಂಇಸಿಇ ಅಧ್ಯಕ್ಷ ಎಲ್.ಅರುಣ್ ಕುಮಾರ್, ಎಟಿಎಂಇಸಿಇ ಪ್ರಾಂಶುಪಾಲ ಡಾ. ಎಲ್.ಬಸವರಾಜ್, ಐಇಐ ಕಾರ್ಯದರ್ಶಿ ಎಂ.ಕೆ.ನಂಜಯ್ಯ, ಕೆ.ಶ್ರೀನಿವಾಸ ಉಪಸ್ಥಿತದ್ದರು.

MYSORE RACE CLUB (MRC) EYE HOSPITAL, Mysore

Managed by Mysore Race Club Charitable Trust

REQUIRES

Qualified and dedicated OPHTHALMOLOGISTS to join our reputed eye care institution.

POSITIONS AVAILABLE:

- General Ophthalmologist
- Glaucoma Specialist (Fellowship preferred)
- Cornea Specialist (Fellowship preferred)
- Pediatric Ophthalmologist (Fellowship preferred)

QUALIFICATIONS & EXPERIENCE :

- MS / DNB / DOMS from recognized institutions
- Fellowship-trained candidates preferred for specialty posts
- Proficiency in SICS and Phacoemulsification surgery

Salary: Commensurate with qualifications and surgical experience

How to Apply: Eligible candidates may send their detailed resume within 7 days to :
administrator@mrceyehospital.in
mrc_eye@rediffmail.com

Address: H-1, Vinayamarga, Siddhartha Layout, Mysore – 570011 | Phone: 0821-2472102

Sd/- Secretary, MRC Charitable Trust

Mysore Race Club Charitable Trust

MRC EYE HOSPITAL

H-1, Vinaya Marga, Siddartha Layout, Mysore- 570 011
Tel. No. 2472102, E-mail: mrc_eye@rediffmail.com

TENDER NOTIFICATION

Sealed quotations are invited from authorized vendors for the supply of the following items for the use of this office, in accordance with the Karnataka Transparency in Public Procurement (Amendment) Act, 2020. The selected vendor(s) shall supply the items within the stipulated time from the date of acceptance of the quotation, as and when indents are placed by this office.

1. General medicines & surgical items
2. Surgical Lens
3. General Office Stationeries items
4. Printing of Hospital & Office Stationeries
5. Consumables (Phenyl, acid, bleaching powder, etc)
6. Laundry Services

The tender form with the details of requirements may be collected from the administrative office, MRC Eye Hospital between 9 a.m. and 4.00 p.m. on any working day on payment of tender form fee of Rs. 500/- + GST extra (non – refundable).

Last date for issue of Tender Forms : 23rd February 2026, 4.00 p.m.
Last date for submission of Tender forms: by 28th February 2026, 4.00 p.m.

THE MYSORE RACE CLUB CHARITABLE TRUST reserves the right to accept or reject any or all offers without assigning any reason.

Sd/- Secretary,
Date: 31/01/2026 Mysore Race Club Charitable Trust

SITES FOR SALE @ LVR ENCLAVE

40x60 West face
40x74 West face 60 feet Road
70x70 West face 60 feet Road
Srirampura 2nd Stage, Near Maramma Temple Ring Road, Mysuru
9900466811, 9980270076

MUDA APPROVED PREMIUM SITES FOR SALE

at RT Nagar, Mysore
SAGARIKA ENCLAVE
Near Mookambika, HBCS & Chikkanna Farm
30'x40' West Facing
30'x50' East Facing
Corners Available
Ready to Register with Standard Developement
96204-61052 / 91649-09191



ಕಾಣೆಯಾಗಿದ್ದಾರೆ

ಹೆಸರು : ಚಿಕ್ಕರಾಮಯ್ಯ
ವಯಸ್ಸು: 80 ವರ್ಷ
ವಿಳಾಸ : ಮನೆ ನಂ 46, 20ನೇ ಕ್ರಾಸ್, ಜಯನಗರ, ಮೈಸೂರು
ದಿನಾಂಕ: 19–01–2026 ರಂದು ಕಾಣೆಯಾಗಿದ್ದಾರೆ
ಸಿಕ್ಕವರು ಸಂಪರ್ಕಿಸಿ
8197939676
7411667293

STAFF REQUIRED FOR A CAFE IN MYSORE

1. Coffee master
2. Front office female staff with good communication skills in English.
3. Housekeeping staff.

Contact details
9901892869

ಜಮೀನು ಮಾರಾಟಕ್ಕಿದೆ

ಜಂತಗಳ್ಳಿ ಗ್ರಾಮದ ಸರ್ವೆ ನಂ. 158/4 ರಲ್ಲಿ 1 ಎಕರೆ 16 ಗುಂಟೆ ಪರಕೀಯಗೊಂಡ (Alienated land) ಉತ್ತರಾಭಿಮುಖಿ ಜಮೀನು ಮೈಸೂರಿನ ವರುಣ ಹೋಬಳಿಯ ಉತ್ತನ ಹಳ್ಳಿ – ಸುತ್ತೂರು ರಸ್ತೆಗೆ ಅಭಿಮುಖಿವಾಗಿ ಶನೀಶ್ವರ ದೇವಸ್ಥಾನದ ಎದುರು ಮಾರಾಟಕ್ಕೆ ಲಭ್ಯವಿದೆ.
ದಯವಿಟ್ಟು WhatsApp ಮೂಲಕ ಮಾತ್ರ
ಸಂಪರ್ಕಿಸಿ: **9187500525**
ದಯವಿಟ್ಟು ಫೋನ್ ಕರೆ ಮಾಡಬೇಡಿ

STAR OF MYSORE

SPECIAL ISSUE

Star of Mysore is completing **48** years of service on **16th February 2026** and entering **49th** year of publication. As in the past, this year too we will be publishing a Special Issue.

We request our advertisers & patrons to release their advertisements before **5th February** to facilitate printing as per schedule.

HEAD OFFICE

0821-2496520 (5-LINES) Ad Dept. - 0821-2496522 / 23
Email : ad@starofmysore.com

Maria G. Fernandes - Advt. Manager: 94485-25060/80730-30835
Joy Anthony Dove - Sr. Executive-Ad Sales - 89516-68960
Prema - Sr. Executive Advertising - 98805-49879

- K.R. Circle Office : 0821-2431774 • D.D. Urs Road Office : 0821-2428695
- Kodagu Office : 97314-69871 • Mandya Office : 87629-60325
- Chamarajanagar : 92422-65657 • T.N. Pura : 94483-05750
- Nanjangud : 98805-09200 • Bengaluru : 98440-46761

ಫಾರ್ಮ್ ನಂ. URC-2

ಭಾಗ–1, ಅಧ್ಯಾಯ XXI ಅಡಿಯಲ್ಲಿ ನೊಂದಣಿ ಸಂಬಂಧಿತ ಪ್ರಕಟಣೆ, [ಕಂಪನಿಗಳ ಕಾಯಿದೆ, 2013ರ ಸೆಕ್ಷನ್ 374(b) ಮತ್ತು ಕಂಪನಿಗಳು (ನೋಂದಣಿ ಮಾಡಲು ಅಧಿಕಾರೀಕೃತೆ) ನಿಯಮಗಳು, 2014ರ ನಿಯಮ 4(1) ಅನ್ವಯ]

1. ಇದರಿಂದ ತಿಳಿಯಪಡಿಸುವುದು ಏನಂದರೆ, ಕಂಪನಿಗಳು ಅಧಿನಿಯಮ, 2013ರ ಸೆಕ್ಷನ್ 366ರ ಉಪಧಾರಾ(2) ಅನ್ವಯ, ಇಂದಿನಿಂದ ಇಪ್ಪತ್ತೊಂದು ದಿನಗಳ ನಂತರ ಬೆಂಗಳೂರು ರಜಿಸ್ಟ್ರಾರ್ ಅವರಿಗೆ ಅರ್ಜಿ ಸಲ್ಲಿಸಲಾಗುವುದು. **KAFFEEKLASTCH HOSPITALITY LLP** ಅನ್ನು ಕಂಪನಿಗಳು ಅಧಿನಿಯಮ, 2013ರ ಅಧ್ಯಾಯ XXIರ ಭಾಗ I ಅಡಿ ಶೇರುಗಳ ಮಿತಿಯುಳ್ಳ ಕಂಪನಿಯಾಗಿ, **KAFFEEKLASTCH HOSPITALITY PRIVATE LIMITED** ಎಂಬ ಹೆಸರಿನಲ್ಲಿ ನೋಂದಣಿ ಮಾಡಲು ಪ್ರಸ್ತಾವಿಸಲಾಗಿದೆ. 2. ಕಂಪನಿಯ ಮುಖ್ಯ ಉದ್ದೇಶಗಳು ಹೀಗಿವೆ: ಕಾಂಫೆಕ್ಷನರಿ, ಪೇಸ್ಟ್ರಿಗಳು, ಹಿಸ್ಪಾಕ ಸವರ್ಡೋ ಬ್ರೆಡ್‌ಗಳು ಮತ್ತು ಯುರೋಪಿಯನ್ ಶೈಲಿಯ ಪೇಸ್ಟ್ರಿಗಳ ತಯಾರಿಕಾ ವ್ಯಾಪಾರವನ್ನು ನಡೆಸುವುದು; ಕ್ಲಾಸಿಕ್ ಕ್ರೋಯ್ಸಾಂಟ್, ಏಕ್ಲೇರ್, ಡೋನಟ್, ಟಾರ್ಟ್‌ಗಳು ಮತ್ತು ಜರ್ಮನ್, ಫ್ರೆಂಚ್ ಹಾಗೂ ಇಟಾಲಿಯನ್ ಪದ್ಧತಿಗಳನ್ನು ಸಂಯೋಜಿಸಿದ ಉತ್ತಮ ಮಟ್ಟದ ಪೇಸ್ಟ್ರಿಗಳನ್ನು ಒದಗಿಸುವುದು ಹಾಗೂ ಇತರ ಸಮಾನ ಚಟುವಟಿಕೆಗಳನ್ನು ನಡೆಸುವುದು. 3. ಪ್ರಸ್ತಾವಿತ ಕಂಪನಿಯ ಸಂಸ್ಥಾ ನಿವೇದನಾ ಪತ್ರ / ಸಂಘದ ಜ್ಞಾಪಕ ಪತ್ರ (Memorandum of Association) ಮತ್ತು ಸಂಘದ ನಿಯಮಾವಳಿಗಳನ್ನು (Articles of Association) ಕೆಳಕಂಡ ವಿಳಾಸದಲ್ಲಿರುವ ಕಚೇರಿಯಲ್ಲಿ ಪರಿಶೀಲಿಸಬಹುದು: 636, 4th Stage, Vijayanagar, 1st Phase, Mysuru, Karnataka, India - 570030, 4. ಈ ಅರ್ಜಿಗೆ ಸಂಬಂಧಿಸಿದ ಯಾವುದೇ ಆಕ್ಷೇಪಣೆ ಗಳನ್ನು ಪ್ರಕಟಣೆ ಪ್ರಕಟವಾದ ದಿನಾಂಕದಿಂದ ಇಪ್ಪತ್ತೊಂಬತ್ತು (21) ದಿನಗಳ ಒಳಗಾಗಿ, ಬರವಣಿಗೆಯ ರೂಪದಲ್ಲಿ ನೋಂದಣಾಧಿಕಾರಿಗೆ ಕೆಳಗಿನ ವಿಳಾಸಕ್ಕೆ ಸಲ್ಲಿಸಬಹುದು: The Registrar of Companies (ROC) in Bangalore, Karnataka, is located at 'E' Wing, 2nd Floor, Kendriya Sadana, Koramangala, Bangalore 560034 ಒಂದು ಪ್ರತಿಯನ್ನು, KAFFEEKLASTCH HOSPITALITY LLP, 636, 4th Stage Vijaynagar, 1st Phase, Mysuru, Karnataka, India, 570030. ನೋಂದಾಯಿತ ಕಚೇರಿಗೂ ಕಳುಹಿಸಬೇಕು.

ಅರ್ಜಿದಾರರ ಹೆಸರು:
KAFFEEKLASTCH HOSPITALITY LLP,
Dina Weber
Designated Partner
ದಿನಾಂಕ : 31 ಜನವರಿ 2026



ಸೇಲ್ ನಡೀತಾ ಇದೆ
ನಮ್ಮ ಪ್ರಖ್ಯಾತ ಫ್ಲೋರಲ್ ಫ್ಯಾಬ್ರಿಕ್ಸ್ ಮತ್ತೆ ನಿಮ್ಮ ಮನ ಅರಳಿಸಲಿ
₹395 ರಿಂದ ಪ್ರಾರಂಭವಾಗುವ ಸೀರೆಗಳು | ₹74/m ನಿಂದ ಪ್ರಾರಂಭವಾಗುವ ಡ್ರೆಸ್ ಮಟೀರಿಯಲ್ | ₹790ಕ್ಕೆ ಯಾವುದೇ 2 ಸೀರೆಗಳನ್ನು ಖರೀದಿಸಿ, ನಮ್ಮ ವಿಶೇಷ ಕೌಂಟರ್‌ನಿಂದ
ಸಲ್ವಾರ್ ಸೂಟ್ ಪೀಸ್‌ಗಳ ಪ್ರತ್ಯೇಕ ಶ್ರೇಣಿ
ಹೋಟೆಲ್ ಅಭಿಷೇಕ್, 2930/A, (ಆನಂದ್ ವಿಹಾರ್ ಕಲ್ಯಾಣ್ ಭವನ ಕಾಂಪೌಂಡ್) ಕಲ್ಯಾಣ್ ಜ್ಯುವೆಲರ್ಸ್ ಪಕ್ಕದಲ್ಲಿ, ಬೆಂಗಳೂರು ನೀಲಗಿರಿ ರಸ್ತೆ, ಮೈಸೂರು-570001.
ಸಮಯ : ಬೆಳಗ್ಗೆ 10 ರಿಂದ ರಾತ್ರಿ 8 ರವರೆಗೆ (ಸೋಮವಾರದಿಂದ ಭಾನುವಾರ)

FOR ADVERTISEMENT

STAR OF MYSORE — Please Call: 0821-2496522 / 23, Email: ad@starofmysore.com
ಮೈಸೂರು ಮಿತ್ರ — Please Call: 0821-2496522 / 23, Email: ad@mysurumithra.com

---

ವೈಕುಂಠ ಸಮಾರಾಧನೆ ಆಹ್ವಾನ ಪತ್ರಿಕೆ



ಶ್ರೀ ತಿಬ್ಬಾದೇವಿ ಪಿ. ಸ್ವಾಮಿರವರು

ಮಾಲೀಕರು, ತಿಬ್ಬಾದೇವಿ ಸರ್ವೀಸ್ ಸ್ಟೇಷನ್, ಜಿಯೋ ಬಿ.ಪಿ. ಪೆಟ್ರೋಲಿಯಂ ಡೀಲರ್, ಟೆರಿಷಿಯನ್ ಕಾಲೇಜು ಸರ್ಕಲ್, ಮೈಸೂರು

ಶ್ರೀಮತಿ ಬಿ. ಪ್ರೇಮ
ನಂ. 4504/6, ತಿಬ್ಬಾದೇವಿ ದೇವಸ್ಥಾನದ ರಸ್ತೆ, ಎನ್.ಆರ್. ಮೊಹಲ್ಲಾ, ಮೈಸೂರು–07
ಇವರು ಮಾಡುವ ವಿಜ್ಞಾಪನೆಗಳು

ದಿನಾಂಕ: 22–01–2026ನೇ ಗುರುವಾರರಂದು ನನ್ನ ಪೂಜ್ಯ ಪತಿಯವರಾದ **ಶ್ರೀ ತಿಬ್ಬಾದೇವಿ ಪಿ. ಸ್ವಾಮಿರವರು** ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ವೈಕುಂಠ ಸಮಾರಾಧನೆಯನ್ನು ದಿನಾಂಕ: 02–02–2026ನೇ ಸೋಮವಾರ ನಡೆಸಲು ನಿಶ್ಚಯಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.
ಸ್ಥಳ: ಶ್ರೀ ರೈತ ಗಂಗಡಕಾರ ಒಕ್ಕಲಿಗರ ಶ್ರೀರಾಮ ಮಂದಿರ, ಎನ್.ಆರ್. ಮೊಹಲ್ಲಾ, ಮೈಸೂರು–07, ಇಲ್ಲಿ ನಡೆಸಲಾಗುತ್ತದೆ.

ಭೋಜನ: ಮಧ್ಯಾಹ್ನ 1–00 ಗಂಟೆಗೆ.

ಇಂತಿ ದುಃಖತಪ್ತರು: ಶ್ರೀಮತಿ ಬಿ. ಪ್ರೇಮ, ಮಕ್ಕಳು, ಅಳಿಯ ಹಾಗೂ ಪಿ. ಅಣ್ಣಯ್ಯ, ಪಿ. ರಾಮ ಲಿಂಗು, ಪಿ. ವಿಜಯ ಮತ್ತು ತಿಬ್ಬಾದೇವಿ ಕುಟುಂಬವರ್ಗದವರು ಹಾಗೂ ಬಂಧು–ಮಿತ್ರರು.

HOUSE FOR SALE

As Per Your Requirement Architect Designed.

AT MYSURU	*AT HUNSUR*
Near Vajamangala, Bannur Road.	Near KSRTC Bus Depot.
20x30 30.5 Lakhs	20x30 24 Lakhs
20x40 34 Lakhs	20x40 24.6 Lakhs
30x40 54 Lakhs	30x40 29 Lakhs.
Near St. Josheph School.	Contact
20x40 - 44 Lakhs	
30x50 - 82 Lakhs	

8123387555 / 7259348777

ಸೆಂದಿಲ್‌ಕುಮಾರ್ ಟೆಕ್ಸ್‌ಟೈಲ್ಸ್ — ಬೇಕಾಗಿದ್ದಾರೆ

ದಾಸಪ್ರಕಾಶ್ ಹೋಟೆಲ್ ಹತ್ತಿರ, ಹಳೇ ಬ್ಯಾಂಕ್ ರಸ್ತೆ ಗಾಂಧಿಚೌಕ, ಮೈಸೂರು - 570001

ನಮ್ಮ ಸೆಂದಿಲ್ ಕುಮಾರ್ ಟೆಕ್ಸ್‌ಟೈಲ್ಸ್ ಹಾಗೂ ಸೂಪರ್ ಮಾರ್ಕೆಟ್‌ನಲ್ಲಿ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ.

ಸಂದರ್ಶನದ ವೇಳೆ ದಿನಾಂಕ: 02.02.2026 ರಿಂದ 05.02.2026 (4ದಿನಗಳು)
ಸಮಯ: ಬೆಳಿಗ್ಗೆ 11.00 ರಿಂದ ಸಂಜೆ 4.00 ರವರೆಗೆ ನೇರ ಸಂದರ್ಶನ

ಖಾಲಿ ಇರುವ ಕೆಲಸಗಳು
1. ಸೇಲ್ಸ್ ಮ್ಯಾನ್ / ಗರ್ಲ್
2. ಎಲೆಕ್ಟ್ರಿಷಿಯನ್
3. H.R- ಟೆಕ್ಸ್‌ಟೈಲ್ಸ್ ನಲ್ಲಿ ಅನುಭವವುಳ್ಳವರಿಗೆ ಆದ್ಯತೆ

1. ಕೆಲಸ ಮಾಡಲು ಇಷ್ಟವಿರುವ ವ್ಯಕ್ತಿಗಳು ಬಯೋಡೇಟಾ, ಪಾಸ್‌ಪೋರ್ಟ್ ಸೈಜ್ ಫೋಟೋ, ಆಧಾರ್ ಕಾರ್ಡ್, ಜೆರಾಕ್ಸ್‌ನ್ನು ತರತಕ್ಕದ್ದು.
2. ಪಿಎಫ್ ಮತ್ತು ಇಎಸ್‌ಐ ಸೌಲಭ್ಯವಿದೆ. ಅನುಭವಕ್ಕೆ ತಕ್ಕಂತೆ ಉತ್ತಮ ವೇತನ + ಇನ್ಸೆಂಟೀವ್ ನೀಡಲಾಗುತ್ತದೆ.

ಸಂಪರ್ಕಿಸಿ: 8884450015

WANTED
STAFF FOR REPUTED CLUB, Mysuru

A well-established and reputed club in Mysuru invites applications from qualified and experienced candidates for the following positions:

1. **GENERAL MANAGER**
   Minimum 2 years of experience in the hospitality sector
2. **ADMIN / BUSINESS DEVELOPMENT OFFICER**
   Minimum 2 years of relevant experience
3. **CHEF**
   Expertise in North Indian, South Indian & Chinese cuisines
4. **ACCOUNTANT**
   Minimum 2 years of experience

Interested candidates are requested to send their updated CV to: theclovers.mysore@gmail.com

Call : 96069 98085

G9 projects — Designing your Dreams | Vee2 Developers

POORVA SHELTERS PHASE - I , II & III

20×30 | 30×40 &20×40 | 30×50

Price Starts from
₹ 2,299/-sq.ft

Near to Marvel PU College
Lalithadripura Ring road Mysuru
8088-707-707

WANTED

For a Reputed Training Institution Telecallers-05
Trainers-part time / full Time
Hardware & networking
Autocad 2D/3D Excellent
Salary+ Incentives
7406113888

REQUIRED SALES ENGINEER FOR INDUSTRIAL OILS

Experience: 1 or 2 years
Qualification. ITI OR Diploma
Salary: Negotiable
Vehicle: Two wheeler must
Place: Mysore
Contact: 9980144333

---

6 ಎಕರೆ ಕೃಷಿ ಜಮೀನು ಮಾರಾಟಕ್ಕಿದೆ

ಪಾಂಡವಪುರದ ಸಮೀಪ
ತೆಂಗದ ಮರ–300, ಅಡಿಕೆ ಮರ–1000
ತೆಂಗಿನಮರ –250, ತಂತಿ ಬೇಲಿಯಿದೆ
ಬೆಲೆ: ಗುಂಟೆಗೆ 2 ಲಕ್ಷ
9632434689

HOUSE FOR SALE

30 X 40 South Face (Ground + First + Second) Floors
East Door, New House
at P & T Layout Near
Dr. Rajkumar Road, Mysore
Call: 9035666078

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀಮತಿ ಶಾರದಮ್ಮ

(ಲೇಟ್ ಶ್ರೀ ಕರಿಗೌಡರವರ ಧರ್ಮಪತ್ನಿ)

ನಿಧನ: 23–01–2026

ಮೈಸೂರು ಜಿಲ್ಲೆ, ಟಿ. ನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ಹಳೇ ಕೆಂಪಯ್ಯನಹುಂಡಿ ಗ್ರಾಮದಲ್ಲಿ ವಾಸವಾಗಿರುವ ಲೇಟ್ ಶ್ರೀ ಕರೀಗೌಡರವರ ಮಗ **ಶ್ರೀ ಕೆ. ಅರುಣ್‌ಕುಮಾರ್**ರವರು ಮಾಡುವ ವಿಜ್ಞಾಪನೆಗಳು ದಿನಾಂಕ 23-01-2026ನೇ ಶುಕ್ರವಾರದಂದು ನನ್ನ ಪೂಜ್ಯ ತಾಯಿಯವರಾದ **ಶ್ರೀಮತಿ ಶಾರದಮ್ಮ**ರವರು (ಲೇಟ್ ಶ್ರೀ ಕರಿಗೌಡರವರ ಧರ್ಮಪತ್ನಿ) ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ದಿನಾಂಕ 02-02-2026ನೇ ಸೋಮವಾರ ಬೆಳಗ್ಗೆ 11-00 ಗಂಟೆಗೆ ಹಾಲು ತುಪ್ಪ ಹಾಗೂ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು ನಮ್ಮ ಸ್ವಗೃಹ, ಹಳೇ ಕೆಂಪಯ್ಯನಹುಂಡಿ ಗ್ರಾಮದಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿಸುತ್ತೇವೆ.

ಭೋಜನ: ಮಧ್ಯಾಹ್ನ 1.00ಕ್ಕೆ

ದುಃಖತಪ್ತರು
ಶ್ರೀ ಕೆ. ಅರುಣ್‌ಕುಮಾರ್. ಮೃತರ ಹೆಣ್ಣುಮಕ್ಕಳು. ಸೊಸೆಯಂದಿರು, ಮೊಮ್ಮಕ್ಕಳು, ಕುಟುಂಬವರ್ಗದವರು. ಗ್ರಾಮಸ್ಥರು ಹಾಗೂ ಬಂಧು ಮಿತ್ರರು